ಸಂಪುಟ: 06 ಸಂಚಿಕೆ: 06 ಪುಟಗಳು: 08 ಶನಿವಾರ 21 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಯಾವುದನ್ನು ಬಯಸಬೇಡಿ, ನಮ್ಮನ್ನು ದುಃಖಕ್ಕೊಳಪಡಿಸುವ ಎಲ್ಲಾ ಕಷ್ಟಗಳಿಗೂ ಆಸೆಯೇ ಕಾರಣ.

# ಉದಯ UV ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಸಿಎಂ ನಿವಾಸಕ್ಕೆ ರ್‍ಯಾಲಿ

• ಉದಯವಾಹಿನಿ, ಬೆಂಗಳೂರು

ನೇಮಕಾತಿಯಲ್ಲಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾರ್ಚ್ 25ರಂದು ಮಾದಿಗ ಸಂಘಟನೆಗಳ ಒಕ್ಕೂಟದಿಂದ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಅಂದೇ ಬೆಳಿಗ್ಗೆ 11ಕ್ಕೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ನಿವಾಸಕ್ಕೆ ರ್‍ಯಾಲಿ ನಡೆಸಲಾಗುವುದು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಡಾ.ಎನ್. ಮೂರ್ತಿ ತಿಳಿಸಿದರು.

ಒಳಮೀಸಲಾತಿ ಇಲ್ಲದೇ 56,432 ಸರ್ಕಾರಿ ಹುದ್ದೆಗಳನ್ನು ನೇಮಕ ಮಾಡಲು ಆದೇಶ ಹೊರಡಿಸಿರುವ ಸರ್ಕಾರದ ಕ್ರಮ ಸರಿಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರ ಆರಂಭದಿಂದಲೂ ಒಳಮೀಸಲಾತಿ ಜಾರಿಗೆ ವಿರೋಧಿಸುತ್ತಲೇ ಬಂದಿದ್ದಾರೆ. ಇದಕ್ಕೆ ವಿಶೇಷ ಸಚಿವ ಸಂಪುಟ ಸಭೆ ಕರೆದು ದೀರ್ಘ ಚರ್ಚೆಯ ಅಗತ್ಯವೂ ಇಲ್ಲ. ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದು ನೆಪ ಹೇಳಿ ವಿಳಂಬ ಮಾಡುವ ಬದಲು ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೊದಲ ಅಧಿವೇಶನದಲ್ಲಿಯೇ ಒಳ ಮೀಸಲಾತಿ ಜಾರಿ ಮಾಡುವ ಭರವಸೆಯನ್ನು ನೀಡಲಾಗಿತ್ತು. ಆದರೆ ಮೂರು ವರ್ಷ ಆಗುತ್ತಾ ಬಂದರೂ ಇದನ್ನು ಪ್ರಾಮಾಣಿಕವಾಗಿ ಜಾರಿಗೊಳಿಸದೇ ದಲಿತ ಸಮುದಾಯಕ್ಕೆ ಮೋಸ ಮಾಡುತ್ತಿದೆ. ಒಳಮೀಸಲಾತಿ ವಿರೋಧಿಗಳ ಷಡ್ಯಂತ್ರದಿಂದ ಆಗುತ್ತಿರುವ ವಿಳಂಬಕ್ಕೆ ಅವಕಾಶ ನೀಡಬಾರದು ಎಂದು ಅವರು ಒತ್ತಾಯಿಸಿದರು.

## ಕೆಂಪೇಗೌಡ ಏರ್‌ಪೋರ್ಟ್‌ಗೆ ಅತ್ಯುತ್ತಮ ವಿಮಾನ ನಿಲ್ದಾಣ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತೊಂದು ಗರಿಮೆಯನ್ನು ಮುಡಿಗೇರಿಸಿಕೊಂಡಿದೆ. ಕೆಂಪೇಗೌಡ ಏರ್ ಪೋರ್ಟ್ ಬೆಂಗಳೂರು ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್ಸ್ 2026ರಲ್ಲಿ ಸತತ ಮೂರನೇ ಬಾರಿಗೆ 'ಭಾರತ ಮತ್ತು ದಕ್ಷಿಣ ಏಷ್ಯಾದ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ' ಎಂದು ಗುರುತಿಸಲ್ಪಟ್ಟಿದೆ.

ಈ ಮನ್ನಣೆಯು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರಿನ ಪ್ರಮುಖ ಪ್ರಯಾಣ ಕೇಂದ್ರಗಳಲ್ಲಿ ಒಂದಾಗಿರುವುದನ್ನು ಪುನರುಚ್ಚರಿಸುತ್ತದೆ. ಜಾಗತಿಕ ಮಟ್ಟದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ವಿಶ್ವ ವಿಮಾನ ನಿಲ್ದಾಣಗಳ ಶ್ರೇಯಾಂಕದಲ್ಲಿ 48ನೇ ಸ್ಥಾನದಿಂದ 41ನೇ ಸ್ಥಾನ ಪಡೆದಿದೆ. ಆ ಮೂಲಕ ವಿಶ್ವದ ಅಗ್ರ 50 ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದರ ಜೊತೆಗೆ, ಪ್ರಯಾಣಿಕರಿಗೆ ವಿಶ್ವದರ್ಜೆಯ ಅನುಭವವನ್ನು ನೀಡುವ ಬದ್ಧತೆಯನ್ನು ಎತ್ತಿಹಿಡಿದಿದೆ. ವಿಮಾನ ನಿಲ್ದಾಣದ ಶ್ರೇಷ್ಠತೆಗೆ ಜಾಗತಿಕ ಮಾನದಂಡವೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟ 'ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್ಸ್', ಚೆಕ್-ಇನ್, ಆಗಮನ, ವರ್ಗಾವಣೆ, ಚಿಲ್ಲರೆ ವ್ಯಾಪಾರ, ಭದ್ರತೆ, ವಲಸೆ ಮತ್ತು ನಿರ್ಗಮನ ಸೇರಿದಂತೆ ಪ್ರಮುಖ ಅಂಶಗಳಲ್ಲಿ ಅತ್ಯುತ್ತಮ ಗ್ರಾಹಕ ಅನುಭವವನ್ನು ನೀಡುವ ವಿಮಾನ ನಿಲ್ದಾಣಗಳನ್ನು ಗುರುತಿಸುತ್ತದೆ.

## ಕುಡಿಯುವ ನೀರಿನ ಸಮಸ್ಯೆ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಸಮರ್ಪಕವಾಗಿ ನಿಭಾಯಿಸಲು ರಾಜ್ಯ ಸರ್ಕಾರ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮುಂದಿನ ಮೂರು ತಿಂಗಳುಗಳ ಕಾಲ ಪ್ರತಿ 2ನೇ ಹಾಗೂ 4ನೇ ಸೋಮವಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಜೊತೆ ಕಡ್ಡಾಯ ಸಭೆ ನಡೆಸಿ ಕುಡಿಯುವ ನೀರಿನ ಸಮಸ್ಯೆಗಳ ವಾಸ್ತವ ಸ್ಥಿತಿ ಪರಿಶೀಲಿಸಲು ಸೂಚಿಸಲಾಗಿದೆ.

ಇದೇ ವೇಳೆ ಪ್ರತಿ 2ನೇ ಹಾಗೂ 4ನೇ ಮಂಗಳವಾರ ಪತ್ರಿಕಾ ಗೋಷ್ಠಿ ನಡೆಸಿ ಕೈಗೊಂಡ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ತ್ವರಿತವಾಗಿ ನಿರ್ವಹಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ 24/7 ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗುತ್ತಿದ್ದು, ತಾಲ್ಲೂಕು ಮಟ್ಟದಲ್ಲಿ ಕ್ಷಿಪ್ರ ಕಾರ್ಯಪಡೆ ರಚಿಸಲು ಸೂಚಿಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ನೀರಿನ ಮೂಲಗಳನ್ನು ಶೇಕಡಾ 100ರಷ್ಟು ಪರಿಶೀಲಿಸಿ, ಕೊಳವೆಬಾವಿಗಳ ಸುತ್ತಮುತ್ತ ಕಲುಷಿತ ನೀರು ಸೇರುವುದನ್ನು ತಡೆಯಲು ಚರಂಡಿ ವ್ಯವಸ್ಥೆ, ಕಾಂಕ್ರೀಟ್ ಕಟ್ಟೆ ನಿರ್ಮಾಣ ಸೇರಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದೇ ವೇಳೆ, ನೀರಿನ ಮೂಲಗಳ ಸಂರಕ್ಷಣೆ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೂ ಒತ್ತು ನೀಡಲಾಗಿದೆ. ಬೇಸಿಗೆ ಹಿನ್ನೆಲೆಯಲ್ಲಿ ಹಲವೆಡೆ ಜಲಮೂಲಗಳು ಬತ್ತುತ್ತಿರುವುದು ಹಾಗೂ ಕೊಳವೆಬಾವಿಗಳ ಇಳುವರಿ ಕಡಿಮೆಯಾಗುತ್ತಿರುವುದರಿಂದ ಸಮಸ್ಯೆ ಉಂಟಾಗಿರುವುದಾಗಿ ಸಚಿವರು ತಿಳಿಸಿದ್ದಾರೆ.

## ನಮ್ಮ ಮೆಟ್ರೋ ಪಿಂಕ್ ಲೈನ್ ಆರಂಭಕ್ಕೆ ಭರದ ಸಿದ್ಧತೆ: ಪರಿಶೀಲನಾ ಕಾರ್ಯ ಶುರು

• ಉದಯವಾಹಿನಿ, ಬೆಂಗಳೂರು

ಕಾಳೇನ ಅಗ್ರಹಾರ ಟು ತಾವರೆಕೆರೆ ನಡುವಿನ ಪಿಂಕ್ ಲೈನ್ ಎತ್ತರಿಸಿದ ಮೆಟ್ರೋ ಮಾರ್ಗವನ್ನು ಈ ವರ್ಷ ಮೇ ತಿಂಗಳಿನಲ್ಲಿ ಓಪನ್ ಮಾಡಲು ಬಿಎಂಆರ್‌ಸಿಎಲ್ ಭರದ ಸಿದ್ದತೆ ನಡೆಸಿದೆ.

ಈ ಹಿನ್ನೆಲೆ ಏಪ್ರಿಲ್ 5ರ ವರೆಗೆ 16 ದಿನಗಳ ಕಾಲ ಅಧಿಕಾರಿಗಳ ನೇತೃತ್ವದಲ್ಲಿ ವಿವಿಧ ಪರಿಶೀಲನಾ ಕಾರ್ಯಗಳು ನಡೆಯಲಿವೆ. ರೈಲಿನ ಸ್ಪೀಡ್ ಮತ್ತು ಲೋಡ್ ಟೆಸ್ಟ್ ಜೊತೆಗೆ ಟ್ರ್ಯಾಕ್ ಟೆಸ್ಟ್, ಸ್ಟೇಷನ್‌ಗಳ ತಪಾಸಣೆ, ಪವರ್ ಚೆಕ್ಕಿಂಗ್ ಸೇರಿ ಹಲವು ಬಗೆಯ ಪರೀಕ್ಷೆಗಳನ್ನು ಅಧಿಕಾರಿಗಳು ನಡೆಸಲಿದ್ದಾರೆ.

ಇನ್ನು ಈ ಪಿಂಕ್ ಲೈನ್‌ಗೆ ಅದಾಗಲೇ 4 ರೈಲುಗಳು ಆಗಮಿಸಿವೆ. ಇವುಗಳ ಜೊತಗೆ ಈ ತಿಂಗಳ ಕೊನೆಯಲ್ಲಿ ಒಂದು ರೈಲು ಮತ್ತು



**ನಮ್ಮ ಮೆಟ್ರೋ ರೈಲುಗಳ ವಾಣಿಜ್ಯ ಸಂಚಾರ ಶುರು**

ಏಪ್ರಿಲ್ ಮೊದಲ ವಾರದಲ್ಲಿ ಆರನೇ ರೈಲು ಸೇರ್ಪಡೆಯಾಗಲಿವೆ. ಆ ಮೂಲಕ ಮೊದಲ ಹಂತದಲ್ಲಿ ಪಿಂಕ್ ಲೈನ್‌ನಲ್ಲಿ 6 ಡ್ರೈವರ್‌ಲೆಸ್ ರೈಲುಗಳು ಸಂಚರಿಸಲಿದ್ದು, ಕಾಳೇನ ಅಗ್ರಹಾರ ಟು ನಾಗವಾರ ನಡುವೆ ಇವು ಸಂಪರ್ಕ ಕಲ್ಪಿಸಲಿವೆ.

ಪಿಂಕ್ ಲೈನ್ ಒಟ್ಟು 21.25 ಕಿ.ಮೀ. ವಿಸ್ತೀರ್ಣ ಹೊಂದಿದ್ದು 18 ಮೆಟ್ರೋ ನಿಲ್ದಾಣಗಳನ್ನು ಒಳಗೊಂಡಿದೆ. ಆ ಪೈಕಿ 12 ಅಂಡರ್ ಗ್ರೌಂಡ್ ಮತ್ತು 6 ಎಲಿವೇಟೆಡ್ ಸ್ಟೇಷನ್‌ಗಳಾಗಿವೆ. ಈ ವರ್ಷ ಮೇನಲ್ಲಿ ಕಾಳೇನ ಅಗ್ರಹಾರ ಟು ತಾವರೆಕೆರೆ ವರೆಗಿನ 6 ಎಲಿವೇಟೆಡ್ ಮೆಟ್ರೋ ನಿಲ್ದಾಣಗಳನ್ನು ಓಪನ್ ಮಾಡಲು ಬಿಎಂಆರ್‌ಸಿಎಲ್ ಸಿದ್ದತೆ ಮಾಡಿಕೊಂಡಿದ್ದು, ಉಳಿದ 13.76.ಕಿ.ಮೀ ವಿಸ್ತೀರ್ಣದ 12 ಅಂಡರ್ ಗ್ರೌಂಡ್ ಸ್ಟೇಷನ್ ಮಾರ್ಗದ ಕಾಮಗಾರಿ ನಡೆಯುತ್ತಿವೆ. ಇವು ಪೂರ್ಣಗೊಂಡ ಬಳಿಕ ಈ ವರ್ಷದ ಅಂತ್ಯಕ್ಕೆ ಪೂರ್ತಿ ಮಾರ್ಗ ಓಪನ್‌ಗೆ ಸಿದ್ದತೆ ಮಾಡಿಕೊಳ್ಳಲಾಗಿದೆ.

ಪಿಂಕ್‌ಲೈನ್‌ಗಾಗಿ ಬಿಇಎಂಎಲ್‌ನಲ್ಲಿ ಒಟ್ಟು 23 ರೈಲುಗಳಿಗೆ ಆರ್ಡರ್ ನೀಡಲಾಗಿದ್ದು, ಈ ಮಾರ್ಗದ ಆರಂಭದಿಂದಾಗಿ ಪ್ರತಿನಿತ್ಯ ವಿಪರೀತ ವಾಹನ ದಟ್ಟಣೆಯಿಂದ ಕೂಡಿರುವ ಬನ್ನೇರುಘಟ್ಟ ರಸ್ತೆಯ ಸಂಚಾರ ಸುಧಾರಿಸುವ ನಿರೀಕ್ಷೆಯೂ ಮೂಡಿದೆ.

ಕೇಂದ್ರ ರೈಲ್ವೆ ಇಲಾಖೆಯ ಅಧಿಕಾರಿಗಳು ತಪಾಸಣೆ ಮಾಡಿ ಗ್ರೀನ್ ಸಿಗ್ನಲ್ ನೀಡಿದ ಬಳಿಕ ಕೊನೆಯದಾಗಿ ಕಮಿಷನರ್ ಆಫ್ ಮೆಟ್ರೋ ರೈಲ್ವೇ ಸೇಫ್ಟಿಯಿಂದಲೂ ಅನುಮತಿ ಸಿಗುತ್ತಿದ್ದಂತೆ ಪಿಂಕ್ ಮಾರ್ಗದಲ್ಲಿ ನಮ್ಮ ಮೆಟ್ರೋ ರೈಲುಗಳ ವಾಣಿಜ್ಯ ಸಂಚಾರ ಶುರುವಾಗಲಿದೆ.



**ಉಪಸಮರ; ಮತ್ತೆ ಕುಟುಂಬಕ್ಕೆ ಮಣೆ**

# ಕೈ ಕಗ್ಗಂಟು ಕ್ಷೇತ್ರಗಳಲ್ಲಿ ಬಿಕ್ಕಟ್ಟು

**ಕಾಂಗ್ರೆಸ್ ವರಿಷ್ಠರ ಸಭೆ ಅಂತಿಮವಾಗದ ಟಿಕೆಟ್ ಟ್ವೀಟ್ ಮಾಡಿದ ಡಾ. ಪ್ರಭಾ ಮಲ್ಲಿಕಾರ್ಜುನ**





ಪಕ್ಷದ ರಾಜ್ಯಾಧ್ಯಕ್ಷರಿಗೆ ಮಾಹಿತಿ ಇಲ್ಲದೇ ನಾಮಪತ್ರ!

ನನಗೆ ಮಾಹಿತಿನೇ ಇಲ್ಲವೆಂದ ಡಿಕೆಶಿ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎರಡು ಕ್ಷೇತ್ರಗಳ ಉಪಚುನಾವಣೆಗೆ ವೇದಿಕೆ ಸಜ್ಜಾಗಿದ್ದು, ಈಗಾಗಲೇ ಬಿಜೆಪಿ ಸ್ಪರ್ಧಾಳುಗಳನ್ನು ಕಣಕ್ಕಿಳಿಸಿದೆ. ಇತ್ತ ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿರುವ ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕುಟುಂಬ ರಾಜಕಾರಣಕ್ಕೇ ಮಣೆ ಹಾಕುತ್ತಾ ಅಥವಾ ಕುಟುಂಬ ಬಿಟ್ಟು ಹೊರಗಿನ ಅಭ್ಯರ್ಥಿಗಳಿಗೆ ಟಿಕೆಟ್ ನೀಡುತ್ತಾ ಎಂಬ ಕುತೂಹಲ ಮೂಡಿದೆ. ಏಪ್ರಿಲ್ 9ರಂದು ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆ ನಡೆಯಲಿದೆ.

ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾದ ದಾವಣಗೆರೆ ದಕ್ಷಿಣ ಹಾಗೂ ಹೆಚ್.ವೈ.ಮೇಟಿ ನಿಧನದಿಂದ ತೆರವಾದ ಬಾಗಲಕೋಟೆ ಕ್ಷೇತ್ರದಲ್ಲಿ ಉಪಸಮರ ನಡೆಯಲಿದೆ. ಈಗಾಗಲೇ ಬಿಜೆಪಿ ಎರಡೂ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿ ಒಂದು ಹೆಜ್ಜೆ ಮುಂದಡಿ ಇಟ್ಟಿದೆ. ಇತ್ತ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಇನ್ನೂ ತನ್ನ ಅಭ್ಯರ್ಥಿಗಳನ್ನು ಘೋಷಣೆ ಮಾಡಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಈ ಉಪಚುನಾವಣೆ ಗೆಲ್ಲಲೇಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಈ ಉಪಸಮರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಟಿಕೆಟ್ ಕಸರತ್ತು ಮುಂದುವರೆದಿದೆ. ಮಾ.16ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಮಾ.23ಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದು, ಮಾ.24ಕ್ಕೆ ನಾಮಪತ್ರ ಪರಿಶೀಲನೆ ನಡೆಯಲಿದ್ದು, ಮಾ.26ಕ್ಕೆ ಉಮೇದುವಾರಿಕೆ ವಾಪಸ್ ಪಡೆಯಲು ಕಡೆಯ ದಿನವಾಗಿದೆ.

**ಕಗ್ಗಂಟಾದ ಅಭ್ಯರ್ಥಿಗಳ ಆಯ್ಕೆ:** ಕಾಂಗ್ರೆಸ್ ಪಕ್ಷಕ್ಕೆ ಎರಡೂ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆಯಲ್ಲಿ ಅಭ್ಯರ್ಥಿಗಳ ಲಾಬಿ, ಒತ್ತಡ, ಪ್ರತಿರೋಧಗಳು ಜೋರಾಗಿದ್ದು, ಇನ್ನೂ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಸಾಧ್ಯವಾಗಿಲ್ಲ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ತಮ್ಮ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡವಂತೆ ಶಾಮನೂರು ಕುಟುಂಬ ಪಟ್ಟು ಹಿಡಿದರೆ, ಇತ್ತ ಮುಸ್ಲಿಂ ಸಮುದಾಯ ತಮ್ಮವರಿಗೇ ಟಿಕೆಟ್ ಕೊಡಬೇಕು ಎಂದು ಹಠ ಹಿಡಿದಿದೆ. ಹೀಗಾಗಿ, ಕಾಂಗ್ರೆಸ್‌ಗೆ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯ ನಿರ್ಣಾಯಕರಾಗಿದ್ದಾರೆ. ಹಾಗಾಗಿ, ಮುಸ್ಲಿಂ ಸಮುದಾಯದವರಿಗೇ ಟಿಕೆಟ್ ನೀಡುವಂತೆ ಒತ್ತಡ ತೀವ್ರವಾಗಿದೆ.ಸಚಿವ ಜಮೀರ್ ಅಹಮದ್ ಖಾನ್ ಮುಸ್ಲಿಂ ಪರ ಬ್ಯಾಟಿಂಗ್ ಮಾಡುತ್ತಿದ್ದರೆ, ಇತ್ತ ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಬೆಂಬಲಿಗರು ಪುತ್ರ ಸಮರ್ಥ್‌ಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದಾರೆ. ಈಗಾಗಲೇ ಈ ಸಂಬಂಧ ರಾಜ್ಯ ನಾಯಕರ ಜೊತೆ ಎರಡು ಮೂರು ಬಾರಿ ಸಭೆ ನಡೆಸಲಾಗಿದೆ. ಆದರೆ, ಇನ್ನೂ ರಾಜ್ಯ ಕಾಂಗ್ರೆಸ್‌ಗೆ ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದರೆ ನಿರ್ಣಾಯಕ ಮುಸ್ಲಿಂ ಸಮುದಾಯ ಅಸಮಾಧಾನಗೊಂಡು ಚುನಾವಣೆಯಲ್ಲಿ ತಟಸ್ಥವಾಗಿ ಉಳಿಯುವ ಆತಂಕ ಒಂದು ಕಡೆ ಆದರೆ, ಇತ್ತ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಿದರೆ, ಶಾಮನೂರು ಕುಟುಂಬ ಕುಪಿತಗೊಂಡು ತಟಸ್ಥವಾಗುವ ಭೀತಿ ಎದುರಾಗಿದೆ. ಈಗಾಗಲೇ ಅಭ್ಯರ್ಥಿ ಆಯ್ಕೆ ಸಂಬಂಧ ನಡೆದ ಸಭೆಯಲ್ಲಿ ರಾಜ್ಯ ನಾಯಕರ ಸಮ್ಮುಖ ಹೈಡ್ರಾಮಾ ನಡೆದಿದ್ದು, ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಹಾಗೂ ಎಂಎಲ್‌ಸಿ ಅಬ್ದುಲ್ ಜಬ್ಬಾರ್ ಬೆಂಬಲಿಗರ ಮಧ್ಯೆ ತೀವ್ರ ವಾಗ್ವಾದ ನಡೆದಿದೆ. ಹೀಗಾಗಿ ಕ್ಷೇತ್ರದಲ್ಲಿ ಒಪ್ಪಿತ ಅಭ್ಯರ್ಥಿಯನ್ನು ನಿಲ್ಲಿಸುವ ದೊಡ್ಡ ಸವಾಲು ಕಾಂಗ್ರೆಸ್ ಮುಂದಿದೆ. ಯಾರಿಗೂ ಕೊಟ್ಟರೂ ಬಂಡಾಯದ ಬಿಸಿ ತಟ್ಟುವ ಸಂದಿಗ್ದತೆ ಸೃಷ್ಟಿಯಾಗಿದ್ದು, ಅಭ್ಯರ್ಥಿ ಘೋಷಣೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಇತ್ತ, ಬಾಗಲಕೋಟೆಯಲ್ಲೂ ಕಾಂಗ್ರೆಸ್‌ಗೆ ಅಭ್ಯರ್ಥಿ ಹೆಸರು ಅಂತಿಮ ಮಾಡುವುದು ದೊಡ್ಡ ತಲೆನೋವಾಗಿ ಪರಿಣಮಿಸಿದೆ. ದಿವಂಗತ ಹೆಚ್.ವೈ. ಮೇಟಿಯವರ ಮಕ್ಕಳಲ್ಲೇ ಟಿಕೆಟ್‌ಗಾಗಿ ತೀವ್ರ ಪೈಪೋಟಿ ಏರ್ಪಟ್ಟಿದೆ.

**ಮೇಟಿ ಕುಟುಂಬಸ್ಥರ ಪೈಪೋಟಿ**

ಮೇಟಿ ಕುಟುಂಬಕ್ಕೆ ಟಿಕೆಟ್ ನೀಡುವುದು ಖಚಿತವಾಗಿದೆ. ಆದರೆ, ಕುಟುಂಬಸ್ಥರಲ್ಲೇ ಪೈಪೋಟಿ ಉಂಟಾಗಿರುವ ಕಾರಣ ಯಾರಿಗೆ ಟಿಕೆಟ್ ನೀಡುವುದು ಎಂಬ ಗೊಂದಲಕ್ಕೆ ರಾಜ್ಯ ಕೈ ನಾಯಕರು ಸಿಲುಕಿದ್ದಾರೆ.



ಹೀಗಾಗಿ ಬಾಗಲಕೋಟೆಯಲ್ಲೂ ಅಭ್ಯರ್ಥಿ ಹೆಸರು ಘೋಷಣೆ ಸಾಧ್ಯವಾಗಿಲ್ಲ. ಜಟಾಪಟಿ ಹೆಚ್ಚಾಗಿರುವ ಕಾರಣ ಸ್ವಯಂ ಸಿಎಂ ಸಿದ್ದರಾಮಯ್ಯ ಮೇಟಿ ಮಕ್ಕಳಿಗೆ ಬುಲಾವ್ ನೀಡಿ, ವಿಧಾನಸೌಧ ತಮ್ಮ ಚೇಂಬರ್‌ನಲ್ಲಿ ಒಮ್ಮತ ಮೂಡಿಸಲು ಯತ್ನಿಸಿದರು. ಮಾಜಿ ಸಚಿವ ಎಚ್. ವೈ.ಮೇಟಿ ಅವರ ಹಿರಿಯ ಪುತ್ರ ಮಲ್ಲಿಕಾರ್ಜುನ, ಕಿರಿಯ ಪುತ್ರ ಉಮೇಶ, ಪುತ್ರಿಯರಾದ ಮಹಾದೇವಿ ಮೇಟಿ, ಬಾಯಕ್ಕ ಜೊತೆ ಚರ್ಚೆ ನಡೆಸಿದರು. ಪಕ್ಷದ ಹೈಕಮಾಂಡ್ ಯಾರಿಗೆ ಟಿಕೆಟ್ ನೀಡಿದರೂ ಎಲ್ಲಾರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

## ದಾವಣಗೆರೆ ಚುನಾವಣೆಗೆ ಹೊಸ ಟ್ವಿಸ್ಟ್


ಆಡಳಿತಾರೂಢ ಕಾಂಗ್ರೆಸ್‌ಗೆ ಈ ಎರಡೂ ಕ್ಷೇತ್ರಗಳನ್ನು ಗೆಲ್ಲುವ ಅನಿವಾರ್ಯತೆ ಇದೆ. ಆದರೆ, ಎರಡೂ ಕ್ಷೇತ್ರದಲ್ಲಿ ಟಿಕೆಟ್ ಹಂಚಿಕೆ ಕಗ್ಗಂಟಾಗಿ ಪರಿಣಮಿಸಿದೆ. ಬಂಡಾಯ, ಬಣ ರಾಜಕೀಯದ ಆತಂಕ ಕಾಂಗ್ರೆಸ್‌ನ್ನು ಬಲವಾಗಿ ಕಾಡುತ್ತಿದೆ. ಅಭ್ಯರ್ಥಿಗಳ ಸೋಲು ಆಡಳಿತ ಪಕ್ಷಕ್ಕೆ ದೊಡ್ಡ ಹಿನ್ನಡೆಯಾಗಲಿದೆ. ಯಾವುದೇ ಗೊಂದಲ, ಬಂಡಾಯ ಇಲ್ಲದೇ ಒಪ್ಪಿತ ಅಭ್ಯರ್ಥಿಗಳ ಆಯ್ಕೆಗೆ ರಾಜ್ಯ ಕಾಂಗ್ರೆಸ್ ನಾಯಕರು ಕಸರತ್ತು ನಡೆಸುತ್ತಿದ್ದಾರೆ.ಎರಡು ಕ್ಷೇತ್ರದಲ್ಲಿ ಒಂದರಲ್ಲಿ ಸೋತರೂ ಕಾಂಗ್ರೆಸ್‌ಗೆ ಮುಜುಗರ ಉಂಟು ಮಾಡಲಿದೆ. ಅಭ್ಯರ್ಥಿಗಳು ಸೋತರೆ ಆಡಳಿತ ಪಕ್ಷ ಜನಬೆಂಬಲ ಕಳೆದುಕೊಂಡು, ಆಡಳಿತ ವಿರೋಧಿ ಅಲೆ ಜೋರಾಗಿದೆ ಎಂಬ ಸಂದೇಶ ರವಾನೆಯಾಗಲಿದೆ. ಹೀಗಾಗಿಯೇ ರಾಜ್ಯ ಸರ್ಕಾರಕ್ಕೆ ಇದು ಪ್ರತಿಷ್ಠೆಯ ಉಪಸಮರವಾಗಿ ಪರಿಣಮಿಸಿದೆ. ಹಾಗಾಗಿ ಎರಡೂ ಕ್ಷೇತ್ರಗಳಿಗೆ ಉಸ್ತುವಾರಿ ಸಚಿವರು ಹಾಗೂ ಹಿರಿಯ ಕೈ ನಾಯಕರನ್ನು ನಿಯೋಜಿಸಲಾಗಿದೆ. ಒಟ್ಟಿನಲ್ಲಿ ಆಡಳಿತಾರೂಢ ಕಾಂಗ್ರೆಸ್ ಈ ಎರಡೂ ಕ್ಷೇತ್ರ ಗೆಲ್ಲಲೇಬೇಕಾದ ಅನಿವಾರ್ಯತೆಗೆ ಒಳಗಾಗಿದೆ.

**ಪ್ರತಿಷ್ಠೆಯ ಕಣವಾದ ಉಪಸಮರ**

**ಕಾರಣ ಕೊಟ್ಟ ಸಮರ್ಥ್**

ನಾಮಪತ್ರ ಸಲ್ಲಿಕೆ ಬಳಿಕ ಮಾತನಾಡಿದ ಸಮರ್ಥ್, ಶುಕ್ರವಾರ ವಿಶೇಷ ದಿನವಾಗಿತ್ತು. ಯುಗಾದಿ ಹಾಗೂ ರಂಜಾನ್ ಎರಡೂ ಒಟ್ಟಿಗೆ ಬಂದಿದ್ದವು. ದಿನ ಚನ್ನಾಗಿತ್ತು ಎಂಬ ಕಾರಣಕ್ಕೆ ನಾಮಪತ್ರ ಸಲ್ಲಿಕೆ ಮಾಡಿದ್ದೇನೆ. ಟಿಕೆಟ್ ಇಂದಲ್ಲ ನಾಳೆ ಸಿಗುತ್ತದೆ. ಈ ಬಗ್ಗೆ ನನಗೆ ನಂಬಿಕೆ ಇದೆ ಎಂದು ಹೇಳಿದರು.

1. ಬಿ ಫಾರಂ ಇಲ್ಲದೇ ಸಮರ್ಥ್ ನಾಮಪತ್ರ
2. ನನಗೆ ಮಾಹಿತಿ ಇಲ್ಲ ಎಂದು ಕೆಪಿಸಿಸಿ ಅಧ್ಯಕ್ಷ
3. ದಿನ ಚೆನ್ನಾಗಿತ್ತು ಎಂಬ ಕಾರಣಕ್ಕೆ ನಾಮಪತ್ರ ಸಲ್ಲಿಕೆ ಮಾಡಿದ್ದೇನೆ ಎಂದ ಸಚಿವ ಎಸ್‌ಎಸ್ ಮಲ್ಲಿಕಾರ್ಜುನ ಪುತ್ರ






## ಸಿಲಿಂಡರ್ ಅಭಾವ: ಕೇಂದ್ರಕ್ಕೆ ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಪತ್ರ

• ಉದಯವಾಹಿನಿ, ಬೆಂಗಳೂರು

ದೇಶದಲ್ಲಿ ಸಿಲಿಂಡರ್ ಅಭಾವದ ಸರಣಿ ಸಮಸ್ಯೆ ಮುಂದುವರೆದಿದೆ. ಇತ್ತ ಕರ್ನಾಟಕದಲ್ಲೂ ಎಲ್‌ಪಿಜಿಗಾಗಿ ಹೋಟೆಲ್ ಮಾಲೀಕರು ನಿತ್ಯ ಪರದಾಡುತ್ತಿದ್ದಾರೆ. ಒಂದ್ಕಡೆ ಗೃಹಬಳಕೆ ಸಿಲಿಂಡರ್ ಪಡೆಯಲು ಜನರು ಮುಗಿಬಿದ್ದರೆ, ಮತ್ತೊಂದ್ಕಡೆ ವಾಣಿಜ್ಯ ಸಿಲಿಂಡರ್ ಇಲ್ಲದೆ ಹಲವು ಉದ್ಯಮಗಳು ಬಂದ್ ಆಗುತ್ತಿವೆ. ಈ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಮಧ್ಯಪ್ರವೇಶಕ್ಕೆ ಆಗ್ರಹಿಸಿದ್ದಾರೆ.

**ಕೇಂದ್ರ ಸಚಿವ ಹರ್ದೀಪ್ ಸಿಂಗ್‌ಗೆ ಸಿಎಂ ಪತ್ರ:** ಸಿಎಂ ಸಿದ್ದರಾಮಯ್ಯ ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಪತ್ರವೊಂದನ್ನ ಬರೆದಿದ್ದರು. ಈಗ ಸಿಲಿಂಡರ್ ಸಮಸ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಮತ್ತೊಂದು ಪತ್ರ ಬರೆದಿದ್ದಾರೆ. ಕೇಂದ್ರ ಸಚಿವ ಹರ್ದೀಪ್ ಸಿಂಗ್‌ಗೆ ಬರೆದ ಪತ್ರದಲ್ಲಿ ರಾಜ್ಯದ ಸಿಲಿಂಡರ್‌ಗಳ ಅಭಾವದ ಬಗ್ಗೆ ಉಲ್ಲೇಖಿಸಿದ್ದಾರೆ. 50 ಸಾವಿರ ಸಿಲಿಂಡರ್ ಬೇಕು. ಭಾರತಕ್ಕೆ ಬಂದಿರುವ ತೈಲ ಹಡಗುಗಳ ತೈಲವನ್ನ ಸಮರ್ಪಕವಾಗಿ ಹಂಚಿಕೆ ಮಾಡುವಂತೆ ಮನವಿ ಮಾಡಿದ್ದಾರೆ.



**50 ಸಾವಿರ ಸಿಲಿಂಡರ್ ಬೇಡಿಕೆ ಬಗ್ಗೆ ಪ್ರಸ್ತಾಪ**

**ಸಿಎಂ ಸಿದ್ದರಾಮಯ್ಯ ಟ್ವೀಟ್**

ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಅಡುಗೆ ತಯಾರಿಸುವ ಸಂಸ್ಥೆಗಳು ಹಾಗೂ ಪಿಜಿಗಳಲ್ಲಿ ಸಿಲಿಂಡರ್ ಅಭಾವ ಹೆಚ್ಚಾಗಿದೆ. ಹೀಗಾಗಿ 50 ಸಾವಿರ ಎಲ್‌ಪಿಜಿ ಸಿಲಿಂಡರ್‌ಗಳ ಬೇಡಿಕೆಗೆ ಇದೆ. ನಾವು ದಿನಕ್ಕೆ 1000 ಸಿಲಿಂಡರ್‌ಗಳನ್ನು ಮಾತ್ರ ಪೂರೈಸಲು ಸಮರ್ಥರಾಗಿದ್ದೇವೆ. ಈ ಕಾರಣಕ್ಕೆ ಹೋಟೆಲ್, ಪಿಜಿಗಳು ಮುಚ್ಚುವ ಪರಿಸ್ಥಿತಿ ಎದುರಾಗಿದೆ. ವಿದ್ಯಾರ್ಥಿಗಳು, ಐಟಿ ನೌಕರರು, ರೈತರು, ಡೈರಿ ಉತ್ಪಾದಕರು ಸೇರಿದಂತೆ ಅನೇಕ ಜನ ಆತಿಥ್ಯ ವಲಯದ ಮೇಲೆ ಅವಲಂಬಿತರಾಗಿದ್ದಾರೆ. ಇದೇ ರೀತಿ ಎಲ್‌ಪಿಜಿ ಇಲ್ಲದೇ ಆಟೋ ರೀಕ್ಷಗಳಿಗೂ ಸಂಕಷ್ಟ ಶುರುವಾಗಿದೆ. ಭಾರತ 2 ಟ್ಯಾಂಕರ್‌ಗಳನ್ನ ಸ್ವೀಕರಿಸಿದೆ. ಇದು ಸಮಸ್ಯೆಗಳನ್ನ ನಿವಾರಿಸುತ್ತದೆ. ಹೀಗಾಗಿ ಕರ್ನಾಟಕಕ್ಕೆ ಸಮರ್ಪಕ ಹಂಚಿಕೆ ಮಾಡಿ. ನಮ್ಮ ಲಭ್ಯತೆ ಖಚಿತಪಡಿಸಿಕೊಳ್ಳಲು ನೀವು ಹಸ್ತಕ್ಷೇಪ ಮಾಡಿ ಎಂದು ಸಿಎಂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಹೈಕಮಾಂಡ್ ಹೇಳಿದವರಿಗೆ ಬಿ ಫಾರಂ, ಎರಡು ಕ್ಷೇತ್ರಗಳಲ್ಲಿ ಗೆಲ್ಲುವುದೇ ನಮ್ಮ ಗುರಿ

■ ಪರೋಕ್ಷವಾಗಿ ಎಸ್ ಎಸ್ ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡುವ ಸಾಧ್ಯತೆ ಬಗ್ಗೆ ಮಾಹಿತಿ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ಹೈಕಮಾಂಡ್ ಹೇಳಿದವರಿಗೆ ಬಿಫಾರಂ ನೀಡಲಾಗುವುದು ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದರು. ಬೆಂಗಳೂರಿನಲ್ಲಿ ಗುರುವಾರ ಮಾತನಾಡಿದ ಅವರು, ಎರಡು ಕ್ಷೇತ್ರಗಳಲ್ಲಿ ಗೆಲ್ಲುವುದೇ ನಮ್ಮ ಗುರಿ ಎಂದು ಸ್ಪಷ್ಟಪಡಿಸಿದರು.

ಎರಡು ಕ್ಷೇತ್ರಗಳ ಸಮೀಕ್ಷಾ ವರದಿ ನಮ್ಮಲ್ಲಿದೆ. ಸ್ಥಳೀಯ ನಾಯಕರು ಅಭಿಪ್ರಾಯ ತಿಳಿಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ನಾನು ಮತ್ತು ಸಿಎಂ ಸಹ ಚರ್ಚೆ ಮಾಡಿದ್ದೇವೆ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತೆ ನೋಡಬೇಕಾಗಿದೆ. ಪಕ್ಷ ಗೆಲ್ಲಬೇಕು, ಗೆಲ್ಲಲು ಏನು ಮಾಡಬೇಕು ಅದನ್ನು ಮಾಡುತ್ತೇವೆ ಎಂದರು.

ಹೈಕಮಾಂಡ್ ಏನು ತಿರ್ಮಾನ ಮಾಡುತ್ತೆ ಆ ಪ್ರಕಾರ ಬಿ ಫಾರ್ಮ್ ಕೊಡ್ತೇವೆ. ನಾನು ಕೆಲವರ ಬಳಿ ಮಾತಾಡ್ತೇನೆ. ಮಾಜಿ ಸಚಿವರು ಅಲ್ಲಿ ಶಾಸಕರಾಗಿದ್ದರು. ವೀರಶೈವಮಹಾ ಸಭಾ ಅಧ್ಯಕ್ಷರಾಗಿದ್ದವರ ಕ್ಷೇತ್ರ ಅದಾಗಿದೆ. ನಮಗೆ ಅಲ್ಪಸಂಖ್ಯಾತರು ಕೂಡಾ ಮುಖ್ಯವಾಗಿದ್ದಾರೆ. ಟಿಕೆಟ್ ಗಾಗಿ ಅವರು ಆಸೆ ಪಡೋದ್ರಲ್ಲಿ ತಪ್ಪೇನಿಲ್ಲ. ಎಲ್ಲಾರನ್ನೂ ಕೂಳಿಸಿಕೊಂಡು ಮಾತಾಡ್ತೇವೆ.

ಈ ಹಿಂದೆ ಯಾರು ಆಕಾಂಕ್ಷಿಗಳಿದ್ರು ,ಟಿಕೆಟ್ ಕೊಟ್ಟಿರಲಿಲ್ಲ. 70% ಆಕಾಂಕ್ಷಿಗಳಿಗೆ ಮಾತು ಕೊಟ್ಟಂತೆ ಈ ಹಿಂದೆ ವ್ಯವಸ್ಥೆ ಮಾಡಿದ್ದೇವೆ ಎಂದು ತಿಳಿಸಿದರು.

**ಯುಕೆಪಿ 3ನೇ ಹಂತದ ಅಧಿಸೂಚನೆಗೆ ಕಾನೂನು ತೊಡಕಿಲ್ಲ:** ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳಕ್ಕೆ ನೋಟಿಫಿಕೇಷನ್ ಮಾಡುವುದಕ್ಕೆ ಯಾವುದೇ ಕಾನೂನಿನ ತೊಡಕಿಲ್ಲ, ತಡೆಯಾಜ್ಞೆಯೂ ಇಲ್ಲ ಎಂದು ಕಾನೂನು ತಜ್ಞರು ಹೇಳಿದ್ದಾರೆ. ಸದ್ಯದಲ್ಲೇ ನಮ್ಮದೇ ಆದ ತೀರ್ಮಾನ ಮಾಡುತ್ತೇವೆ. ರಾಜ್ಯದಲ್ಲಿಯೂ ಸರ್ವಪಕ್ಷಗಳ ಸಭೆ ಕರೆಯಬೇಕಾಗಬಹುದು ಎಂದು ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.



**ರಕ್ಷಣಾ ಸಚಿವರನ್ನು ಶೀಘ್ರದಲ್ಲೇ ಭೇಟಿ**

ಈ ವಿಚಾರದಲ್ಲಿ ನಮ್ಮ ಕಾನೂನು ಸಲಹೆಗಾರರಾದ ಮೋಹನ್ ಕಾತರಕಿ, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್, ಅಡ್ವೋಕೇಟ್ ಜನರಲ್ ಅವರು ಒಂದೆರಡು ಒಳ್ಳೆಯ ವಿಚಾರಗಳನ್ನು ತಿಳಿಸಿದ್ದಾರೆ. ಈ ಬಗ್ಗೆ ಸದ್ಯದಲ್ಲೇ ತೀರ್ಮಾನ ಮಾಡುತ್ತೇವೆ ಎಂದು ಮಾಹಿತಿ ನೀಡಿದರು. ನಾಗರಿಕ ವಿಮಾನಯಾನ ಸಚಿವರನ್ನು ಭೇಟಿ ಮಾಡಿ ಪ್ರೀಮಿಯಂ ಎಫ್ ಎಆರ್, ಕಟ್ಟಡಗಳ ಎತ್ತರದ ಕಾನೂನುಗಳು ನಮ್ಮ ಹಾಗೂ ಬೇರೆ, ಬೇರೆ ರಾಜ್ಯಗಳಲ್ಲಿ ಹೇಗಿದೆ ಎನ್ನುವ ವಿಚಾರಗಳನ್ನು ಅವರ ಗಮನಕ್ಕೆ ತರಲಾಗಿದೆ. ರಕ್ಷಣಾ ಸಚಿವರನ್ನು ಶೀಘ್ರದಲ್ಲೇ ಭೇಟಿ ಮಾಡಿ ಚರ್ಚೆ ನಡೆಸಬೇಕಿದೆ. ನಮ್ಮ ರಾಜ್ಯದ ಸಮಸ್ಯೆಗಳನ್ನು ತಿಳಿಸಿದ್ದೇವೆ. ಎಲ್ಲರೂ ಧನಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ದೆಹಲಿಯಲ್ಲಿ ಎರಡು ದಿನ ವಾಸ್ತವ್ಯ ಹೂಡಿ ರಾಜ್ಯದ ಸಂಸದರ ಸಭೆ ನಡೆಸಲಾಯಿತು. 24 ಜನ ಸಂಸದರು ಬಂದಿದ್ದರು. ಜನತಾದಳ ಹೊರತುಪಡಿಸಿ ಬಿಜೆಪಿ, ಕಾಂಗ್ರೆಸ್, ಸ್ವತಂತ್ರ ಹಾಗೂ ನಾಮನಿರ್ದೇಶಿತ ಸಂಸದರು ಸಭೆಯಲ್ಲಿ ಹಾಜರಿದ್ದರು. ರಾಜ್ಯದ ಅನೇಕ ನೀರಾವರಿ ಯೋಜನೆಗಳ ಸ್ಥಿತಿಗತಿ ಬಗ್ಗೆ ಅವರಿಗೆ ವಿವರಿಸಿದ್ದೇನೆ ಎಂದು ತಿಳಿಸಿದರು.

ಜಗದೀಶ್ ಶೆಟ್ಟರ್, ಗೋವಿಂದ ಕಾರಜೋಳ, ಬಸವರಾಜ ಬೊಮ್ಮಾಯಿ, ಪಿ.ಸಿ.ಮೋಹನ್ ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಸೋಮಣ್ಣ ಅವರು ಹಾಗೂ ಪ್ರಹ್ಲಾದ್ ಜೋಶಿ ಅವರು 'ಸಭೆಗೆ ಬರಲು ಆಗುವುದಿಲ್ಲ. ಇನ್ನೊಂದು ದಿನ ಹಾಜರಾಗುತ್ತೇವೆ' ಎಂದು ಹೇಳಿದರು. ಪ್ರಧಾನಿಯವರು ಹಾಗೂ ಜಲ ಶಕ್ತಿ ಸಚಿವರನ್ನು ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗಿ ಭೇಟಿಯಾಗುವ ತೀರ್ಮಾನ ಮಾಡಲಾಗಿದೆ. ಇದಕ್ಕೆ ಒಮ್ಮತವೂ ಮೂಡಿದೆ ಎಂದರು.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹15,093/Gram24ct ₹13,835/Gram22ct ಬೆಳ್ಳಿ: ₹255.00/Gram

## ನೀರು ನಾಯಿ ದಾಳಿಗೆ ವೈದ್ಯೆ ಬಲಿ

• ಉದಯವಾಹಿನಿ, ಬೆಂಗಳೂರು

ಶಿವಮೊಗ್ಗದ ತಾವರೆಕೊಪ್ಪ ಸಿಂಹ ಮತ್ತು ಸಫಾರಿ ಮೃಗಾಲಯದಲ್ಲಿ ವೈದ್ಯಕೀಯ ಆರೈಕೆ ನೀಡಲು ಆವರಣಕ್ಕೆ ಪ್ರವೇಶಿಸಿದ್ದ ಪಶುವೈದ್ಯರೊಬ್ಬರು ನೀರು ನಾಯಿ ದಾಳಿಯಿಂದ ಸಾವನ್ನಪ್ಪಿದ್ದಾರೆ. ಮೃತ ವೈದ್ಯರನ್ನು ಡಾ. ಸಮೀಕ್ಷಾ ರೆಡ್ಡಿ (26) ಎಂದು ಗುರುತಿಸಲಾಗಿದೆ. ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದರು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ರಾತ್ರಿ 11.30 ರ ಸುಮಾರಿಗೆ ಕಾಡು ಪ್ರಾಣಿಯನ್ನು ನೋಡಿಕೊಳ್ಳುತ್ತಿದ್ದಾಗ ಆಕೆಯ ಮೇಲೆ ದಾಳಿ ಮಾಡಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಕಚೇರಿ ತಿಳಿಸಿದೆ. ಖಂಡ್ರೆ ಅವರ ಕಚೇರಿಯ ಪ್ರಕಾರ, ಆಕೆಯನ್ನು ಶಿವಮೊಗ್ಗದ ಆಸ್ಪತ್ರೆಗೆ ಸಾಗಿಸಲಾಯಿತು ಆದರೆ ಶುಕ್ರವಾರ ಬೆಳಿಗ್ಗೆ 6.30 ರ ಸುಮಾರಿಗೆ ಗಾಯಗಳಿಂದಾಗಿ ಸಾವನ್ನಪ್ಪಿದರು ಎಂದು ವೈದ್ಯರು ತಿಳಿಸಿದ್ದಾರೆ.

ಇದೊಂದು ದುರದೃಷ್ಟಕರ ಘಟನೆ ಎಂದು ಕರೆದ ಸಚಿವರು, ಈ ಕಷ್ಟದ ಸಮಯದಲ್ಲಿ ಸರ್ಕಾರವು ಮೃತರ ಕುಟುಂಬದೊಂದಿಗೆ ನಿಂತಿದೆ ಎಂದು ಹೇಳಿದರು. ಪ್ರತಿಯೊಂದು ಜೀವವೂ ಅಮೂಲ್ಯ. ದೇವರು ಕುಟುಂಬಕ್ಕೆ ಈ ನಷ್ಟವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಅವರು ಹೇಳಿದರು. ಮೃತ ವೈದ್ಯರ ಕುಟುಂಬಕ್ಕೆ ನಿಯಮಗಳ ಪ್ರಕಾರ ಪರಿಹಾರವನ್ನು ನೀಡಲು ಸಚಿವರು ಆದೇಶಿಸಿದ್ದಾರೆ. ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿನ ಪಶುವೈದ್ಯರು ಕಾಡು ಪ್ರಾಣಿಗಳಿಗೆ ಚಿಕಿತ್ಸೆ ನೀಡುವಾಗ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ಸೂಚನೆ ನೀಡಿದರು. ಹಿರಿಯ ಪಶುವೈದ್ಯರು ಮತ್ತು ಅರಣ್ಯ ಅಧಿಕಾರಿಗಳನ್ನು ಒಳಗೊಂಡ ತಂಡದಿಂದ ಘಟನೆಯ ತನಿಖೆಗೆ ಖಂಡ್ರೆ ಆದೇಶಿಸಿದರು ಮತ್ತು ಏಳು ದಿನಗಳಲ್ಲಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿದರು.

## ಅಲುಗಾಡುವ ಕುರ್ಚಿಯಲ್ಲಿ 'ಹಲೋ ಅಪ್ಪ' ಖ್ಯಾತಿಯ ಸಿಎಂ ಸಿದ್ದರಾಮಯ್ಯ ವರ್ಗಾವಣೆ ದಂಧೆ : ಅಶೋಕ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಒಂದು ಕಡೆ ಸಂಪೂರ್ಣವಾಗಿ ದಿವಾಳಿ ಆಗಿರುವ ಖಜಾನೆ, ಮತ್ತೊಂದು ಕಡೆ ಸದಾ ಅಲುಗಾಡುತ್ತಿರುವ ಕುರ್ಚಿ, ಇವೆರಡರ ಮಧ್ಯೆ ಸಿಲುಕಿಕೊಂಡು ದುರ್ಬಲರಾಗಿರುವ ಹಲೋ ಅಪ್ಪ ಖ್ಯಾತಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರ್ಗಾವಣೆ ದಂಧೆಯನ್ನೇ ಮುಖ್ಯ ಕಾಯಕ ಮಾಡಿಕೊಂಡಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಮತ್ತೊಮ್ಮೆ ಹೈಕೋರ್ಟ್ ಛೀಮಾರಿ! ಎಂದು ಪೋಸ್ಟ್ ಮಾಡಿರುವ ಅವರು, ಇದನ್ನ ಗಮನಿಸಿರುವ ಮಾನ್ಯ ಹೈಕೋರ್ಟ್, ಮುಖ್ಯಮಂತ್ರಿಗಳಾದವರಿಗೆ ಸರ್ಕಾರಿ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ ಎಂದು ಚಾಟಿ ಬೀಸಿರುವುದು ರಾಜ್ಯದಲ್ಲಿ ದುರಾಡಳಿತ, ವರ್ಗಾವಣೆ ದಂಧೆ ಎಷ್ಟು ತಾಂಡವವಾಡುತ್ತಿದೆ ಎನ್ನುವುದಕ್ಕೆ ಕನ್ನಡಿ ಹಿಡಿದಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಈ ನಾಲಾಯಕ್ ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತಾದರೂ ನಾಚಿಕೆ, ಮಾನ, ಮರ್ಯಾದೆ ಇದ್ದರೆ, ಈ ಕೂಡಲೇ ವಿಧಾನಸಭೆ ವಿಸರ್ಜನೆ ಮಾಡಿ ಕನ್ನಡಿಗರ ಕ್ಷಮೆ ಕೇಳಬೇಕು ಎಂದು ಅಶೋಕ್ ಒತ್ತಾಯಿಸಿದ್ದಾರೆ.

## ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣ ವಾರದೊಳಗೆ ಎಸ್‌ಐಟಿ ವರದಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ಉದ್ಯಮಿ ಸಿಜೆ ರಾಯ್ ಆತಹತ್ಯೆ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಎಸ್ ಐಟಿ ಬಹುತೇಕ ಒಂದು ವಾರದೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವ ಸಾಧ್ಯತೆ ಇದೆ. ಆದಾಯ ತೆರಿಗೆ ದಾಳಿಯ ಸಂದರ್ಭದಲ್ಲಿ ಸಿಜೆ ರಾಯ್ ತಮ್ಮ ಎದೆಗೆ ಗುಂಡು ಹೊಡೆದುಕೊಂಡು ಜನವರಿ 30ರಂದು ಆತಹತ್ಯೆ ಮಾಡಿಕೊಂಡಿದ್ದರು. ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ಬೆಂಗಳೂರಿನ ಪಶ್ಚಿಮ ವಲಯದ ಜಂಟಿ ಆಯುಕ್ತ ಸಿ.ವಂಶಿಕೃಷ್ಣಾ ಮಾರ್ಗದರ್ಶನದಲ್ಲಿ ತನಿಖೆ ನಡೆಸಲು ಎಸ್‌ಐಟಿ ತಂಡವನ್ನು ರಚಿಸಿತ್ತು. ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಸರ್ ತನಿಖಾಧಿಕಾರಿಯಾಗಿದ್ದು, ಕೇಂದ್ರ ವಿಭಾಗದ ಡಿಸಿಸಿ ಅಕ್ಷಯ್ ಅಕೆ, ಎಸಿಪಿಗಳಾದ ಸುಧೀರ್, ಸಿಸಿಬಿಯ ರಾಮಚಂದ್ರ, ಅಶೋಕ್‌ನಗರ ಇನ್ಸ್‌ಪೆಕ್ಟರ್ ಕೆ.ಬಿ. ರವಿ ಮತ್ತಿತರರು ತಂಡದಲ್ಲಿದ್ದರು. ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದ ಎಸ್‌ಐಟಿ ನಿರ್ದಿಷ್ಠ ಕಾರಣ ಪತ್ತೆ ಹಚ್ಚಲು ಪರದಾಡುತ್ತಿದೆ. ಸಿಜೆ ರಾಯ್ ಬೆಂಗಳೂರಿನಲ್ಲಷ್ಟೇ ಅಲ್ಲದೇ ದುಬೈ ಹಾಗೂ ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳಲ್ಲಿ ತಮ್ಮ ಉದ್ಯಮವನ್ನು ವಿಸ್ತರಿಸಿದ್ದರು. ಕಾನ್ಫಿಡೆಂಟ್ ಗ್ರೂಪ್‌ನ ಬಂಡವಾಳ ಹೂಡಿಕೆಯ ಬಗ್ಗೆ ಹಲವು ಪ್ರಶ್ನೆಗಳು ಉದ್ಭವಿಸಿದ್ದವು. ಈ ಸಂಬಂಧಪಟ್ಟಂತೆ ಆದಾಯ ತೆರಿಗೆ ಹಲವು ಬಾರಿ ದಾಳಿ ನಡೆಸಿತ್ತು.

ದಾಳಿ ವೇಳೆಯಲ್ಲಿ ಹವಾಲ ಹಣದ ಮಾಹಿತಿ ದೊರೆತಿದೆ ಎಂದು ಹೇಳಲಾಗಿದ್ದು, ಅದಕ್ಕೆ ಉತ್ತರ ನೀಡಲಾಗದೆ, ಸಿಜೆ ರಾಯ್ ಖಿನ್ನತೆಗೊಳಗಾಗಿದ್ದರು. ಈ ಕಾರಣಕ್ಕೆ ಆತಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಈ ಪ್ರಕರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಂಪರ್ಕಗಳಿದ್ದುದರಿಂದಾಗಿ ತನಿಖೆ ನಡೆಸಲು ಅಧಿಕಾರಿಗಳು ಪರದಾಡಿದ್ದಾರೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಕಿರುಕುಳವೇ ತಮ್ಮ ಸಹೋದರನ ಆತಹತ್ಯೆಗೆ ಕಾರಣ ಎಂದು ಸಿಜೆ ಬಾಬು ಆರೋಪ ಮಾಡಿದರು. ಆದರೆ ಆದಾಯ ತೆರಿಗೆ ವಿರುದ್ಧ ಕ್ರಮಕ್ಕೆಗೊಳ್ಳಲು ಮುಂದಾದರೆ ಸಾಂವಿಧಾನಿಕ ಬಿಕ್ಕಟ್ಟು ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಅಳೆದು ತೂಗಿ ವರದಿ ಸಿದ್ಧ ಪಡಿಸಿದ್ದಾರೆ ಎನ್ನಲಾಗಿದೆ. ಬಹುತೇಕ ಉದ್ಯಮಿಯ ಖಿನ್ನತೆಗೆ ಆತಹತ್ಯೆ ಕಾರಣ ಎನ್ನುವ ಅಭಿಪ್ರಾಯ ಬರೆದು ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸಲು ಎಸ್ ಐಟಿ ಅಧಿಕಾರಿಗಳು ಮುಂದಾಗಿದ್ದಾರೆ ಎಂದು ಹೇಳಲಾಗಿದೆ.

### ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗ್ತಾರಾ ಯತ್ನಾಳ್?

# ಆಹ್ವಾನಕ್ಕೆ ಯತ್ನಾಳ್ ಕೊಟ್ಟ ಪ್ರತಿಕ್ರಿಯೆ ಏನು?

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಇದೀಗ ಉಪ ಚುನಾವಣೆಯ ಹವಾ ಜೋರಾಗಿದೆ. ಈ ನಡುವೆ ಬಿಜೆಪಿ ಎರಡು ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಣೆ ಮಾಡಿದೆ. ದಾವಣಗೆರೆಗೆ ತನ್ನ ಅಭ್ಯರ್ಥಿಯನ್ನಾಗಿ ಶ್ರೀನಿವಾಸ್ ದಾಸ ಕರಿಯಪ್ಪ ಅವರನ್ನು ಕಣಕ್ಕಿಳಿಸಿದೆ. ಬಾಗಲಕೋಟೆಯಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರನ್ನು ಕಣಕ್ಕಿಳಿಸಿದೆ. ಈ ನಡುವೆ ಚರಂತಿಮಠ ಅವರು ಬಾಗಲಕೋಟೆಯಲ್ಲಿ ಪ್ರಚಾರಕ್ಕೆ ಯತ್ನಾಳ್ ಅವರಿಗೂ ಆಹ್ವಾನ ನೀಡಿದ್ದಾರೆ. ಇದು ಇದೀಗ ಕುತೂಹಲಕ್ಕೆ ಕಾರಣವಾಗಿದೆ.

ಯತ್ನಾಳ್ ಅವರನ್ನು ಬಿಜೆಪಿ ಉಚ್ಚಾಟನೆ ಮಾಡಿದೆ.ಹಾಗಿದ್ದರೂ ಬಿಜೆಪಿಯ ಹಲವು ನಾಯಕರು ಯತ್ನಾಳ್‌ಜೊತೆಗೆ ಉತ್ತಮ ಸಂಪರ್ಕದಲ್ಲಿ ಇದ್ದಾರೆ. ಮಾಧ್ಯಮಗಳಿಗೆ ಮಾತನಾಡಿದ್ದ ಚರಂತಿ ಮಠ ಯಾರೆಲ್ಲಾ ಪ್ರಚಾರಕ್ಕೆ ಬರುತ್ತಾರೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಯತ್ನಾಳ್ ಕೂಡಾ ಬರುತ್ತಾರೆ ಎಂದಿದ್ದರು. ಇದು ಕುತೂಹಲಕ್ಕೆ ಕಾರಣವಾಗಿದೆ.

ಇದೇ ವಿಚಾರವಾಗಿ ವಿಜಯಪುರದಲ್ಲಿ ಗುರುವಾರ ಪ್ರತಿಕ್ರಿಯೆ ನೀಡಿರುವ ಯತ್ನಾಳ್, 'ಬಾಗಲಕೋಟೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗೆ ಯಾವ ಸಂದರ್ಭದಲ್ಲಿ ಬೆಂಬಲ ಕೊಡಬೇಕು ಎಂಬುವುದನ್ನು ನಾನು ಯೋಚನೆ ಮಾಡುತ್ತೇನೆ' ಎಂದು ತಿಳಿಸಿದರು. ಚರಂತಿಮಠ ಮತ್ತು ನನಗೆ ಹಳೆಯ ಸಂಬಂಧ ಇದೆ. ಈ ಹಿಂದೆ ಅವರಿಗೆ ಟಿಕೆಟ್ ಕೊಡಿಸಿದವನು ನಾನೇ. ನಾನು, ಅನಂತ್ ಕುಮಾರ್ ಗಲಾಟೆ ಮಾಡಿ ಟಿಕೆಟ್ ಕೊಡಿಸಿದ್ದೇವೆ. ಈ ಹಿಂದೆ ಜಗದೀಶ್ ಶೆಟ್ಟರ್ ಜೊತೆಗೆ ಜಗಳವಾಡಿ ಬಿ ಫಾರಂ ಕೊಡಿಸಿದ್ದೆ' ಎಂದರು. ಬಜೆಟ್‌ನಲ್ಲಿ ಮುಸ್ಲಿಮರಿಗೆ ಆದ್ಯತೆ ಕೊಡಲಾಗಿದೆ. ಮುಸ್ಲಿಂ ಸಮುದಾಯದ ಮಕ್ಕಳಿಗೆ ಹೆಚ್ಚಿನ ಅನುದಾನ ಕೊಡಲಾಗಿದೆ. ಬಜೆಟ್ ನೋಡಿದರೆ ನಮಗೆ ಸಿಟ್ಟು ಬರುತ್ತದೆ. ಮದಸರಾಗಳಿಗೆ ಮೌಲವಿಗಳಿಗೆ ಸಹಕಾರ ನೀಡಲಾಗಿದೆ. ಸ್ವತಃ ಕುರುಬ ಸಮುದಾಯಕ್ಕೆ ಕುರಿ ಖರೀದಿಗೆ ಸಹಾಯ ಮಾಡಿಲ್ಲ ಸಿದ್ದರಾಮಯ್ಯ, ಬದಲಾಗಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ವಾಗ್ದಾಳಿ ನಡೆಸಿದರು.



**ಜಮೀರ್ ಸಿಎಂ ಆಗಬಹುದು**

**ಇದೇ ಸಂದರ್ಭದಲ್ಲಿ ದಾವಣಗೆರೆ ಟಿಕೆಟ್ ವಿಚಾರವಾಗಿ ಮುಸ್ಲಿಂ ಸಮುದಾಯದ ಮುಖಂಡರ ಬೇಡಿಕೆಗೆ ತಿರುಗೇಟು ನೀಡಿದ ಯತ್ನಾಳ್, ಮುಸ್ಲಿಂ ನಾಯಕರು ಬೆದರಿಕೆ ಹಾಕಿ ಟಿಕೆಟ್ ಕೇಳುತ್ತಿದ್ದಾರೆ ಎಂದು ಆರೋಪಿಸಿದರು. ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಮರು ತಮ್ಮ ಜನಸಂಖ್ಯೆ ಜಾಸ್ತಿ ಇದೆ ಎಂದು ಟಿಕೆಟ್ ಕೇಳುತ್ತಿದ್ದಾರೆ. ಮುಸ್ಲಿಮರು ಟಿಕೆಟ್‌ಗೆ ಚಾಲೆಂಜ್ ಮಾಡುತ್ತಿದ್ದಾರೆ. ಜನಸಂಖ್ಯೆ ಕಡಿಮೆ ಇದ್ದರೂ ಧಮ್ಕಿ ಕೊಡುತ್ತಾರೆ. ಅವರು 40% ಆದರೆ ಹಿಂದೂಗಳು ಶಾಸಕರಾಗುವುದಿಲ್ಲ. ಸಿದ್ದರಾಮಯ್ಯನೂ ಶಾಸಕರಾಗುವುದಿಲ್ಲ. ಜಮೀರ್ ಸಿಎಂ ಆಗುತ್ತಾರೆ ಎಂದರು.**

**ನನ್ನ ವಿರುದ್ಧ ಷಡ್ಯಂತ್ರ**

**ಬಿವೈ ವಿಜಯೇಂದ್ರ ನಕಲಿ ಖಾತೆಯ ಮೂಲಕ ನನ್ನ ವಿರುದ್ಧ ಅಭಿಪ್ರಾಯ ರೂಪಿಸುತ್ತಿದ್ದಾರೆ. ನನಗೆ ಮಾತ್ರ ಅಲ್ಲ ಬಿಎಲ್ ಸಂತೋಷ್ ಹಾಗೂ ಪ್ರಹ್ಲಾದ್ ಜೋಷಿ ಅವರಿಗೂ ಸಾಮಾಜಿಕ ಜಾಲತಾಣಗಳಲ್ಲಿ ಬೈಗುಳ ತಿನ್ನಿಸುತ್ತಿದ್ದಾರೆ ಎಂದು ಆರೋಪ ಮಾಡಿದರು. ಬಿಎಸ್ ಯಡಿಯೂರಪ್ಪ ದಾವಣಗೆರೆಯಲ್ಲಿ ಜನ್ಮದಿನ ಕಾರ್ಯಕ್ರಮ ಮಾಡಿದರೆ ಅದೇ ಜಾಗದಲ್ಲೇ ನಾನು ಹಿಂದೂ ಶಕ್ತಿ ಪ್ರದರ್ಶನ ಮಾಡುತ್ತೇವೆ. ಅವರು ಸೇರಿಸಿದ ಮೂರು ಪಟ್ಟನಷ್ಟು ಜನರನ್ನು ನಾವು ಸೇರಿಸುತ್ತೇವೆ ಎಂದು ಯತ್ನಾಳ್ ಸವಾಲು ಹಾಕಿದರು.**

## ಗಾಳಿ ಆಂಜನೇಯ ಸ್ವಾಮಿ ಜಾತ್ರೆ ಟ್ರಸ್ಟಿಗಳ ಸಹಭಾಗಿತ್ವಕ್ಕೆ ಹೈಕೋರ್ಟ್ ಹಸಿರು ನಿಶಾನೆ

• ಉದಯವಾಹಿನಿ, ಬೆಂಗಳೂರು






ಮೈಸೂರು ರಸ್ತೆಯ ಪ್ರಸಿದ್ಧ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ಮಹತ್ವದ ಮಧ್ಯಂತರ ಆದೇಶ ನೀಡಿದೆ. ಮಾರ್ಚ್ 23 ರಿಂದ ಏಪ್ರಿಲ್ 4 ರವರೆಗೆ ನಡೆಯಲಿರುವ ಈ ಜಾತ್ರೆಯಲ್ಲಿ ದೇವಾಲಯದ ಟ್ರಸ್ಟಿಗಳು ಭಾಗವಹಿಸಲು ನ್ಯಾಯಾಲಯ ಅನುಮತಿ ನೀಡಿದೆ. ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ಪೀಠವು ಈ ಕುರಿತು ಮಧ್ಯಂತರ ಆದೇಶ ಹೊರಡಿಸಿದೆ.

**ಹೈಕೋರ್ಟ್ ನೀಡಿದ ಪ್ರಮುಖ ಸೂಚನೆಗಳು:** ಟ್ರಸ್ಟಿಗಳು ಜಾತ್ರೆಯ ಎಲ್ಲಾ ಧಾರ್ಮಿಕ ವಿಧಿವಿಧಾನಗಳಲ್ಲಿ ಮತ್ತು ಆಚರಣೆಗಳಲ್ಲಿ ಪಾಲ್ಗೊಳ್ಳಬಹುದು. ಹಣಕಾಸು ನಿರ್ವಹಣೆಗೆ ನಿರ್ಬಂಧವಿದೆ, ಟ್ರಸ್ಟಿಗಳು ಜಾತ್ರೆಯ ಯಾವುದೇ ಹಣಕಾಸಿನ ವಹಿವಾಟುಗಳನ್ನು ನಡೆಸುವಂತಿಲ್ಲ. ಹಣಕಾಸಿನ ಸಂಪೂರ್ಣ ಜವಾಬ್ದಾರಿ ಅನ್ನು ಮುಜರಾಯಿ ಇಲಾಖೆಯ ಸಹಾಯಕ ಆಯುಕ್ತರು ವಹಿಸಿಕೊಳ್ಳಬೇಕು. ಜಾತ್ರೆ ಮುಗಿದ 15 ದಿನಗಳಲ್ಲಿ ಲೆಕ್ಕಪತ್ರವನ್ನು ಕೋರ್ಟ್‌ಗೆ ಸಲ್ಲಿಸಬೇಕು. ಟ್ರಸ್ಟ್ ವಶದಲ್ಲಿರುವ ಉತ್ಸವ ಮೂರ್ತಿಯ ಆಭರಣಗಳನ್ನು ಮುಜರಾಯಿ ಆಯುಕ್ತರ ಸುಪರ್ದಿಗೆ ಒಪ್ಪಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ.

**ಪ್ರಕರಣದ ಹಿನ್ನೆಲೆ ಏನು?:** ದೇವಸ್ಥಾನದ ಆಡಳಿತದಲ್ಲಿ ಅಶಿಸ್ತು, ಹಣದ ದುರುಪಯೋಗ, ದಾಖಲೆಗಳ ನಿರ್ವಹಣೆಯಲ್ಲಿ ಲೋಪ ಕಂಡು ಬಂದ ಹಿನ್ನೆಲೆಯಲ್ಲಿ 2025 ರ ಜುಲೈ 8 ರಂದು ರಾಜ್ಯ ಸರ್ಕಾರವು ದೇವಾಲಯವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಒಪ್ಪಿಸಿ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಟ್ರಸ್ಟ್‌ನ ಸಂಚಾಲಕ ಬಿ.ಪಿ. ನಾಗರಾಜು ಮತ್ತು ಇತರರು ಹೈಕೋರ್ಟ್ ಮೆಟ್ಟಿಲೇರಿದ್ದರು. ತಮಗೆ ಜಾತ್ರೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು.

ಆದರೆ ತಾವು ಯಾವುದೇ ಹಣಕಾಸಿನ ವ್ಯವಹಾರ ಮಾಡುವುದಿಲ್ಲ ಎಂದು ಟ್ರಸ್ಟಿಗಳು ನೀಡಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಪೀಠವು ಈ ಆದೇಶ ನೀಡಿದೆ.

## ಜಮೀನಿಗೆ ನಕಲಿ ದಾಖಲೆ ಮಾಡಿ, ಅಕ್ರಮವಾಗಿ ಕಬಳಿಸಲು ಬಲಾಢ್ಯರು ಮುಂದು



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಕೋಟ್ಯಾಂತರ ಮೌಲ್ಯದ ಜಮೀನಿಗೆ ನಕಲಿ ದಾಖಲೆ ಮಾಡಿ, ಅಕ್ರಮವಾಗಿ ಕಬಳಿಸಲು ಬಲಾಢ್ಯರು ಮುಂದಾಗಿದ್ದಾರೆ ಎಂದು ಆರೋಪಿಸಿ ಪ್ರಜಾ ವಿಮೋಚನಾ ಚಳುವಳಿ ಕಾರ್ಯಕರ್ತರು, ಅಧಿಕಾರಿಗಳು, ಭೂಕಳ್ಳರ ವಿರುದ್ಧ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಂಡಿದರು.

ಬೆಂ.ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿಯ ಕಾಡಅಗ್ರಹಾರ ಗ್ರಾಮದ ಹಳೇ ಸ.ನಂ.102/1, ಹೊಸ ಸ.ನಂ.102/6ರಲ್ಲಿ 29 ಗುಂಟೆ ಜಮೀನನ್ನು ಕೆ.ಮಾದೇಶ ಬಿನ್ ಕೆಂಪಯ್ಯ, ಕೆ.ಕಮಲಮ್ಮ ಕೋಂ ಕೆ.ಮಾದೇಶ ಇವರುಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಡವರ ಜಮೀನನ್ನು ಒತ್ತುವರಿ ಮಾಡಿಕೊಂಡು ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಭೂಮಿ ಕಬಳಿಸಿ ಮೋಸ ಮಾಡಿದ್ದಾರೆ ಎಂದು ಹೋರಾಟಗಾರ ಸಾದರಮಂಗಲ ಮಾದೇಶ್ ಅಧಿಕಾರಿಗಳ ಮುಂದೆ ಸಮಸ್ಯೆ ಹೇಳಿಕೊಂಡರು.

ಎಡಿಎಲ್ ಆರ್ ವಿಭಾಗ, ಸೇರ್ವೆ ಮಾಡಿಸಿಕೊಡಲು ನೀಡಿದ ಮನವಿಯನ್ನು ತಿರಸ್ಕರಿಸಿ ಹಣಕೊಟ್ಟವರ ಪರ ಕೆಲಸ ಮಾಡಲು ಮುಂದಾಗಿರುವ ಕೆಲ ಅಧಿಕಾರಿಗಳಿಗೆ ಹೋರಾಟದ ಮೂಲಕ ತಕ್ಕ ಶಿಕ್ಷೆ ಸಿಗುವಂತೆ ಮಾಡಲಾಗುವುದು ಎಂದು ವಕೀಲರಾದ ವಿಕ್ರಮ್ ಎಚ್ಚರಿಕೆ ನೀಡಿದರು.

ಬಡ ಮಹಿಳೆ ಕಾಂತಮ್ಮ ಮತನಾಡಿ, ನಮಗೆ ನ್ಯಾಯ ಸಿಗುತ್ತಿಲ್ಲ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ನಮ್ಮ ಸ್ವಾಧೀನಕ್ಕೆ ಬಿಡಿಸಿಕೊಟ್ಟು ನಮಗೆ ರಕ್ಷಣೆಯನ್ನು ಒದಗಿಸಿ ಎಂದು ಮನವಿ ಮಾಡಿಕೊಂಡರು. ಆದೂರು ಗಣೇಶ್ ಸೇರಿದಂತೆ ನೂರಾರು ಕಾರ್ಯಕರ್ತರು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.

## ವರ್ಗಾವಣೆಯಲ್ಲಿ ಸಿಎಂ ಕಚೇರಿ ಹಸ್ತಕ್ಷೇಪ

• ಉದಯವಹಿನಿ ಬೆಂಗಳೂರು

ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸ್ತಕ್ಷೇಪ ಮಾಡುತ್ತಿರುವುದನ್ನು ಹೈಕೋರ್ಟ್ ಗಂಭೀರವಾಗಿ ಪ್ರಶ್ನೆ ಮಾಡಿದೆ. ಸಿಎಂ ಕಚೇರಿಯಿಂದ ವರ್ಗಾವಣೆ ವಿಚಾರವಾಗಿ ಬೆಸ್ಕಾಂನ ಸಹಾಯಕ ಅಭಿಯಂತರ (ಎಇ) ಚೇತನ್ ಎಸ್‌ಎಂಬುವವರುಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್, ಟಿ.ಎಂ.ನದಾಫ್ ಅವರಿದ್ದ ದ್ವಿಸದಸ್ಯ ಪೀಠವು ಗ್ರೂಪ್ ಬಿ ಅಥವಾ ಸಿ ಉದ್ಯೋಗಿಗಳ ವರ್ಗಾವಣೆ ವಿಚಾರದಲ್ಲಿ ಅಸಮಾಧಾನ ಹೊರಹಾಕಿದೆ. ಸಿಎಂ ಸಿದ್ದರಾಮಯ್ಯಗೆ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ. ಸರ್ಕಾರಿ ನೌಕರರ ವರ್ಗಾವಣೆ ವಿಚಾರ ಆಯಾ ಇಲಾಖೆಗೇ ಬಿಡಬೇಕು. ಮುಖ್ಯಮಂತ್ರಿಗಳ ಕಚೇರಿ ವರ್ಗಾವಣೆಯ ಮನವಿ ಸ್ವೀಕರಿಸಬಾರದು ಎಂದು ತರಾಟೆಗೆ ತೆಗೆದುಕೊಂಡಿದ್ದು, ಹೈಕೋರ್ಟ್‌ನ ಈ ಆದೇಶದ ಪ್ರತಿಯನ್ನು ಮುಖ್ಯಮಂತ್ರಿಗೆ ಕಳುಹಿಸಲು ಸೂಚನೆ ನೀಡಿದೆ. ಪ್ರಕರಣ ಸಂಬಂಧ ಸಿಎಂ ನೀಡುವ ವರ್ಗಾವಣೆ ಶಿಫಾರಸುಗಳ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಿಂದಲೂ ನಿಲುವು ಕೇಳಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ, ಸಿಎಂ ಕಚೇರಿಯಿಂದ ನೀಡುವ ಟಿಪ್ಪಣಿಗಳು ಕೇವಲ ಶಿಫಾರಸುಗಳಾಗಿದ್ದು, ಅಂತಿಮ ಆದೇಶವನ್ನು ಸಂಬಂಧಪಟ್ಟ ಇಲಾಖೆ ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದರು. ಇಂಧನ ಇಲಾಖೆಯ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸಿಎಂ ಕಚೇರಿ ಮುಂದಾಗಿತ್ತು. ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಂಧನ ಇಲಾಖೆ ಆಡಳಿತದಲ್ಲಿ ತೀವ್ರ ಹಸ್ತಕ್ಷೇಪ ಮಾಡುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಸಚಿವ ಕೆ.ಜೆ.ಜಾರ್ಜ್ ಸಿಎಂ ನಿವಾಸಕ್ಕೆ ತೆರಳಿ ಪ್ರಶ್ನಿಸಿದ್ದರು.

ಅಲ್ಲದೇ ರಾಜೀನಾಮೆ ಬಗ್ಗೆ ಸಹ ಪ್ರಸ್ತಾಪಿಸಿದ್ದರು. ಆದರೆ ಸಿಎಂ ಸಿದ್ದರಾಮಯ್ಯ ಜಾರ್ಜ್ ಅವರನ್ನು ಸಮಾಧಾನ ಪಡಿಸಿದ್ದರು. ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಲಾಖೆಗಳ ಕಾರ್ಯಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಹೈಕೋರ್ಟ್ ನೀಡಿದ ಈ ತೀಕ್ಷ್ಣ ಸೂಚನೆ ರಾಜ್ಯ ರಾಜಕೀಯದಲ್ಲಿ ಮತ್ತಷ್ಟು ಚರ್ಚೆಗೆ ಕಾರಣವಾಗಿದೆ.

## ಪತ್ನಿ ಹೆಸರಲ್ಲಿ 93 ಲಕ್ಷ ರೂಪಾಯಿ ಸಾಲ ಮಾಡಿದ ಭೂಪ

• ಉದಯವಾಹಿನಿ, ಬೆಂಗಳೂರು



**ಸ್ಟಾಕ್ ಟ್ರೇಡಿಂಗ್ ಚಟ**

ಸ್ಟಾಕ್ ಟ್ರೇಡಿಂಗ್ ಚಟಕ್ಕೆ ಬಿದ್ದ ವ್ಯಕ್ತಿಯೊಬ್ಬ ಪತ್ನಿಯನ್ನ ಒಂದಲ್ಲಾ, ಎರಡಲ್ಲಾ, ಬರೋಬ್ಬರಿ 93 ಲಕ್ಷ ರೂಪಾಯಿ ಸಾಲದ ಶೂಲಕ್ಕೆ ಸಿಲುಕಿಸಿದ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ಸದಾಶಿವನಗರದ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ಷೇರು ವ್ಯಾಪಾರದ ಚಟಕ್ಕೆ ಬಿದ್ದಿರುವ ವ್ಯಕ್ತಿಯ ಹೆಸರು ಶಬರೀಶ್ ಕುಮಾರ್ ಸಿ. ಜಕ್ಕೂರು ನಿವಾಸಿಯಾಗಿರುವ ಈತನಿಗೆ 41 ವರ್ಷ ವಯಸ್ಸು. ಹಣದ ಲಾಭಕ್ಕಾಗಿ ಈತ ತನ್ನನ್ನು ಮದುವೆಯಾಗಿದ್ದಾನೆ ಎಂದು ದೂರಿನಲ್ಲಿ ಪತ್ನಿ ಆರೋಪಿಸಿದ್ದಾರೆ.

ಅಸಲಿಗೆ, ಶಬರೀಶ್‌ಹಾಗೂ ಪತ್ನಿಯದ್ದು ಲವ್ ಮ್ಯಾರೇಜ್. ಪರಸ್ಪರ ಪ್ರೀತಿಸುತ್ತಿದ್ದ ಇವರಿಬ್ಬರೂ 2016 ರಲ್ಲಿ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದರು. ಮದುವೆಯಾದ ಬಳಿಕ ಕ್ರಮೇಣವಾಗಿ ಪತ್ನಿಯ ಹಣಕಾಸು ವ್ಯವಸ್ಥೆಯನ್ನ ಪತಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

**ಆಪ್ ಡೌನ್‌ಲೋಡ್ ಮಾಡಿ ಸಾಲ:** ಪತ್ನಿಗೆ ಗೊತ್ತಿಲ್ಲದ ಹಾಗೆ ಆಕೆಯ ಫೋನ್ ತೆಗೆದುಕೊಂಡು, ಆಕೆಯ ಹೆಸರಿನಲ್ಲಿ ವಿವಿಧ ಸಾಲದ ಆಪ್ ಡೌನ್ ಲೋಡ್ ಮಾಡಿ ಹಣ ಪಡೆದುಕೊಂಡಿದ್ದಾನೆ. ಸಾಲದಕ್ಕೆ ಬ್ಯಾಂಕ್‌ಗಳು ಹಾಗೂ ಖಾಸಗಿ ಸಾಲಗಾರರಿಂದಲೂ ಪದೇ ಪದೇ ಸಾಲ ಪಡೆದು ಪತ್ನಿಯನ್ನ ಆರ್ಥಿಕ ಸಂಕಷ್ಟಕ್ಕೆ ತಳ್ಳಿದ್ದಾನೆ. ಈ ಬಗ್ಗೆ ತಮ್ಮ ದೂರಿನಲ್ಲಿ ಪತ್ನಿ ಉಲ್ಲೇಖಿಸಿದ್ದಾರೆ.

**ಒತ್ತಡ ಹಾಕಿಯೂ ಸಾಲ:** ಪತ್ನಿಗೆ ಗೊತ್ತಿಲ್ಲದೆ ಆಕೆಯ ಹೆಸರಿನಲ್ಲಿ ಸಾಲ ಮಾಡಿರುವುದು ಒಂದೆಡೆಯಾದರೆ.. ಇನ್ನೊಂದೆಡೆ ಪತ್ನಿಯ ಸ್ನೇಹಿತರು, ಸಹೋದ್ಯೋಗಿಗಳು, ಸಂಬಂಧಿಕರು ಹಾಗೂ ನೆರೆಹೊರೆಯವರ ಮೇಲೂ ಒತ್ತಡ ಹೇರಿ ಹಣ ಪಡೆದ್ದಾರೆ. ಆ ಮೂಲಕ ದೊಡ್ಡ ವಂಚನೆ ಮಾಡಿದ್ದಾನೆ ಎಂದು ಪತಿ ವಿರುದ್ಧ ಪತ್ನಿ ದೂರಿದ್ದಾರೆ.

**ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಪತ್ನಿ**

37 ವರ್ಷ ವಯಸ್ಸಿನ ಪತ್ನಿ, ಆರ್‌ಎಂವಿ 2ನೇ ಹಂತದ ನಿವಾಸಿಯಾಗಿದ್ದಾರೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ.

ಪತ್ನಿ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಸದಾಶಿವನಗರದ ಪೊಲೀಸರು, ಆರೋಪಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಪತ್ನಿಯಿಂದ ಸಂಪೂರ್ಣ ಹಣಕಾಸು ವ್ಯವಹಾರಗಳ ವಿವರ, ದಾಖಲೆಗಳನ್ನು ನೀಡುವಂತೆ ಕೇಳಿದ್ದೇವೆ. ತನಿಖೆ ಮುಂದುವರಿದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಈ ಘಟನೆ ಮಹಾನಗರದಗಳಲ್ಲಿ ವೈವಾಹಿಕ ಸಂಬಂಧದ ಆಧಾರದಲ್ಲಿ ನಡೆಯುತ್ತಿರುವ ಆರ್ಥಿಕ ವಂಚನೆಗಳ ಬಗ್ಗೆ ಮತ್ತೊಮ್ಮೆ ಆತಂಕ ಹುಟ್ಟಿಸಿದೆ.

## ಪೂರ್ವ ಮುಂಗಾರು : ಸಾರ್ವಜನಿಕರಿಗೆ ಸುರಕ್ಷತೆಗಾಗಿ ಬೆಸ್ಕಾಂ ಮನವಿ

• ಉದಯವಾಹಿನಿ, ಬೆಂಗಳೂರು




ಬೆಸ್ಕಾಂ ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮಳೆ ಕಳೆದೆರಡು ದಿನಗಳಿಂದ ಪ್ರಾರಂಭಗೊಂಡಿದ್ದು, ಈ ಹಿನ್ನೆಲೆಯಲ್ಲಿ ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಬೆಸ್ಕಾಂ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಗಾಳಿ-ಮಳೆಗೆ ವಿದ್ಯುತ್ ಕಂಬಗಳು ತುಂಡಾಗಿದ್ದರೆ, ವಾಲಿದ್ದರೆ , ಅಥವಾ ಮರಗಳ ಕೊಂಬೆಗಳು ವಿದ್ಯುತ್ ಕಂಬಗಳ ಮೇಲೆ ಬಿದ್ದಿದ್ದು ಕಂಡು ಬಂದಲ್ಲಿ ಅವುಗಳ ಸಮೀಪ ಹೋಗದೆ ಹತ್ತಿರದ ಬೆಸ್ಕಾಂ ಉಪ ವಿಭಾಗ ಕಚೇರಿಗೆ ಮಾಹಿತಿ ನೀಡಬೇಕು ಅಥವಾ ಬೆಸ್ಕಾಂ 1912 ಸಹಾಯವಾಣಿಗೆ ಕರೆ ಮಾಡಲು ಬೆಸ್ಕಾಂ ವಿನಂತಿಸಿದೆ. ಪೂರ್ವ ಮುಂಗಾರಿನ ಭಾರೀ ಗಾಳಿ-ಮಳೆಗೆ ವಿದ್ಯುತ್ ವಾಹಕಗಳು ತುಂಡಾಗಿ ಬೀಳುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಗಾಳಿ-ಮಳೆ ಸಂದರ್ಭದಲ್ಲಿ ವಿದ್ಯುತ್ ಕಂಬಗಳು ಹಾದು ಹೋಗಿರುವ ಮರಗಳ ಕೆಳಗೆ ನಿಲ್ಲಬಾರದು ಹಾಗೂ ವಿದ್ಯುತ್ ಪರಿವರ್ತಕಗಳ ಬಳಿ ನಿಲ್ಲಬಾರದು ಎಂದು ಬೆಸ್ಕಾಂ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಗಾಳಿ-ಮಳೆ ಸಂದರ್ಭದಲ್ಲಿ ಕರೆಗಳ ಒತ್ತಡದಿಂದ ಬೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಕೆಲವೊಮ್ಮೆ ಲಭ್ಯವಾಗುವುದಿಲ್ಲ, ಹೀಗಾಗಿ ಬೆಸ್ಕಾಂ ವಾಟ್ಸ್ ಆಪ್ ಸಂಖ್ಯೆಗಳಿಗೆ ವಿದ್ಯುತ್ ಸಮಸ್ಯೆ ಕುರಿತ ಸಂದೇಶಗಳನ್ನು ಕಳುಹಿಸಲು ಬೆಸ್ಕಾಂ ಮನವಿ ಮಾಡಿದೆ. ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ ವಾಟ್ಸ್ ಆಪ್‌ಗೆ ಮಾಹಿತಿ ನೀಡುವಂತೆ ಕೋರಿದೆ.

ಬೆಂಗಳೂರು ನಗರ ಜಿಲ್ಲೆ: ದಕ್ಷಿಣ ವೃತ್ತ : 8277884011, ಪಶ್ಚಿಮ ವೃತ್ತ : 8277884012, ಪೂರ್ವ ವೃತ್ತ-:8277884013, ಉತ್ತರ ವೃತ್ತ: 8277884014, ಕೋಲಾರ ಜಿಲ್ಲೆ: 8277884015, ಚಿಕ್ಕಬಳ್ಳಾಪುರ ಜಿಲ್ಲೆ: 8277884016, ಬೆಂಗಳೂರು ಗ್ರಾಮಾಂತರ ಜಿಲ್ಲೆ: 8277884017, ರಾಮನಗರ ಜಿಲ್ಲೆ (ಬೆಂಗಳೂರು ದಕ್ಷಿಣ): 8277884018, ತುಮಕೂರು ಜಿಲ್ಲೆ: 8277884019, ಚಿತ್ರದುರ್ಗ ಜಿಲ್ಲೆ: 8277884020, ಮತ್ತು ದಾವಣಗೆರೆ ಜಿಲ್ಲೆ: 8277884021, ಗ್ರಾಹಕರು ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ಸಂದೇಶದ ಜೊತೆಗೆ ವಿದ್ಯುತ್ ಸಂಬಂಧಿತ ದೂರುಗಳ ಫೋಟೋ ಹಾಗೂ ವಿಡಿಯೋಗಳನ್ನು ಸಹ ಕಳುಹಿಸಬಹುದಾಗಿದೆ. ಗ್ರಾಹಕರು ತಮ ಪ್ರದೇಶದ ವ್ಯಾಪ್ತಿಗೆ ಸಂಬಂಧಿತ ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ದೂರುಗಳನ್ನು ನೀಡಿದರೆ ಅವುಗಳನ್ನು ತ್ವರಿತವಾಗಿ ಪರಿಹರಿಸಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.

### ಜಿಬಿಎ ಕಾರ್ಯಕಾರಿ ಸಮಿತಿ ಮೊದಲ ಸಭೆ : ಸಿಎಂ ಅಧಿಕೃತ ಮಾಹಿತಿಯೇ ಇಲ್ಲ

# ಸೂಚನಾ ಪತ್ರ ಕಳುಹಿಸಿಕೊಡದಿರುವುದು ಅಚ್ಚರಿ

• ಉದಯವಾಹಿನಿ, ಬೆಂಗಳೂರು



☛ ಉದಯವಾಹಿನಿ ಚಿತ್ರ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧ್ಯಕ್ಷರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕತ್ತಲಿನಲ್ಲಿಟ್ಟು ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಮೊದಲ ಸಭೆಯನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ನಡೆಸಿದ್ದಾರೆ.

**ದೂರ ಇಡುವ ಪ್ರಯತ್ನ**

2024ರ ಜುಲೈ 23ರಂದು ವಿಧಾನಸಭೆಯಲ್ಲಿ ಮಂಡಿಸಲಾದ ಮಸೂದೆಯಲ್ಲಿ, ಮಾರ್ಚ್ 2025ರ 10ರಂದು ಅಂಗೀಕರಿಸಲಾದ ವಿಧೇಯಕದ ಪ್ರಕಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅವರು ಪದ ನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

ಕಾರ್ಯಕಾರಿ ಸಮಿತಿಗೆ ಬೆಂಗಳೂರು ಅಭಿವೃದ್ಧಿ ಸಚಿವರೆಂದು ಉಲ್ಲೇಖಿಸಲಾಗಿದೆ. ಪ್ರಾಧಿಕಾರ, ಕಾರ್ಯಕಾರಿ ಸಮಿತಿ ಎರಡೂ ಪ್ರತ್ಯೇಕ ಎಂಬುವುದು ಸ್ಪಷ್ಟ. ಪ್ರಾಧಿಕಾರಕ್ಕೆ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಲಿದ್ದು, ಗೃಹ ಮಂತ್ರಿ, ನಗರಾಭಿವೃದ್ಧಿ ಮಂತ್ರಿ, ಸಾರಿಗೆ ಮಂತ್ರಿ, ಇಂಧನ ಮಂತ್ರಿ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಕ್ಷೇತ್ರ ಪ್ರತಿನಿಧಿಸುವ ಸಚಿವರು, ಪಾಲಿಕೆಗಳ ಆಯುಕ್ತರು ಸದಸ್ಯರಾಗಿರತಕ್ಕದ್ದು ಎಂದು ಸೂಚಿಸಲಾಗಿತ್ತು. ವಿಧಾನ ಪರಿಷತ್‌ನಲ್ಲಿ ಈ ಕಾಯ್ದೆ ಅಂಗೀಕಾರಗೊಳ್ಳದೆ, ಜಂಟಿ ಪರಿಶೀಲನಾ ಸಮಿತಿಗೆ ವಹಿಸಲಾಗಿತ್ತು. ಅನಂತರ ಜಂಟಿ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಮಾಡಲಾದ ತಿದ್ದುಪಡಿ ಕಾಯ್ದೆಯನ್ನು 2025ರ ಮಾರ್ಚ್ 10ರಂದು ವಿಧಾನಸಭೆಯಲ್ಲಿ ಮತ್ತು ಮಾರ್ಚ್ 12 ರಂದು ವಿಧಾನ ಪರಿಷತ್‌ನಲ್ಲಿ ಅಂಗೀಕರಿಸಲಾಗಿದೆ, ಈ ಕಾಯ್ದೆಯ ಪ್ರಕಾರ ಸೆಕ್ಷನ್ 9(3)ರ ಅಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅವರೇ ಅಧ್ಯಕ್ಷರಾಗಲಿದ್ದು, ಬೆಂಗಳೂರು ಅಭಿವೃದ್ಧಿ ಮಂತ್ರಿ ಉಪಾಧ್ಯಕ್ಷರಾಗಿದ್ದಾರೆ. ರಾಜ್ಯ ಸರ್ಕಾರದ ಮುಖ್ಯಸ್ಥರೂ ಆಗಿರುವ ಸಿದ್ದರಾಮಯ್ಯ ಅವರನ್ನು ಉದ್ದೇಶ ಪೂರ್ವಕವಾಗಿಯೇ ಬೆಂಗಳೂರಿನ ಆಡಳಿತದಿಂದ ಡಿ.ಕೆ.ಶಿವಕುಮಾರ್ ದೂರ ಇಡುವ ಪ್ರಯತ್ನ ನಡೆಸುತ್ತಿದ್ದಾರೆಯೇ? ಎಂಬ ಚರ್ಚೆಗಳು ಹುಟ್ಟಿಕೊಂಡಿವೆ. ಬೆಂಗಳೂರಿನ ಅಭಿವೃದ್ಧಿಗೆ ಸುಮಾರು 1 ಲಕ್ಷ ಕೋಟಿ ರೂ.ಗೂ ಅಧಿಕ ಪ್ರಮಾಣದ ಹಣವನ್ನು ವಿನಿಯೋಗಿಸುತ್ತಿರುವುದಾಗಿ ಡಿ.ಕೆ.ಶಿವಕುಮಾರ್ ಪದೇ ಪದೇ ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯ ಬಜೆಟ್‌ನ ಶೇ. 25 ರಷ್ಟನ್ನು ಅನುದಾನ ಹಾಗೂ ಸಾಲದ ರೂಪದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ತೊಡಗಿಸಲಾಗುತ್ತಿದೆ ಆದರೆ ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮಾಹಿತಿ ನೀಡದಿರುವುದು ನಾನಾ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

**ನಗರಾಭಿವೃದ್ಧಿ ಸಚಿವರೇ ಅಧ್ಯಕ್ಷರು**

**ಜಿಬಿಎ ಪ್ರದೇಶದಲ್ಲಿನ ಕಾರ್ಯಕಾರಿ ಸಮಿತಿಗೆ ನಗರಾಭಿವೃದ್ಧಿ ಸಚಿವರೇ ಅಧ್ಯಕ್ಷರು ಎಂದು ಉಲ್ಲೇಖಿಸಲಾಗಿದೆ. ಅದರಂತೆ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ಸೂಕ್ತ ಎಂದಾದರೂ ಪ್ರಾಧಿಕಾರದ ಅಧ್ಯಕ್ಷರಾಗಿರುವ ಮುಖ್ಯಮಂತ್ರಿಯವರಿಗೆ ಕನಿಷ್ಠ ಮಾಹಿತಿಯನ್ನು ನೀಡದಿರುವುದು ಅಚ್ಚರಿ ಮೂಡಿಸಿದೆ. ಪ್ರಾಧಿಕಾರದ ಕಾರ್ಯಕಾರಿ ಸಮಿತಿಯ ಸಭೆಯ ಬಗ್ಗೆ ಮುಖ್ಯಮಂತ್ರಿಯವರಿಗಾಗಲಿ ಅಥವಾ ಅವರ ಕಛೇರಿಗಾಗಲೀ ಕನಿಷ್ಠ ತಿಳಿವಳಿಕೆಯ ಸೂಚನಾ ಪತ್ರವನ್ನು ಕಳುಹಿಸಿಕೊಡದಿರುವುದು ಅಚ್ಚರಿ ಮೂಡಿಸಿದೆ.**

**ಪದೇ ಪದೇ ಮುಸುಕಿನ ಗುದ್ದಾಟ**

**ಅಧಿಕಾರ ಹಂಚಿಕೆಯ ವಿಚಾರವಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವೆ ಪದೇ ಪದೇ ಮುಸುಕಿನ ಗುದ್ದಾಟಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಜಿಬಿಎ ಆಡಳಿತದಿಂದ ಮುಖ್ಯಮಂತ್ರಿ ಅವರನ್ನು ಡಿಕೆಶಿ ಉದ್ದೇಶ ಪೂರ್ವಕವಾಗಿಯೇ ದೂರ ಇಟ್ಟಿದ್ದಾರೆಯೇ ಎಂಬ ಅನುಮಾನಗಳು ಕೇಳಿ ಬರುತ್ತಿವೆ.**

## ರಾಯರ ಸನ್ನಿಧಿಯಲ್ಲಿ ವಿಶೇಷ ಪೂಜೆ ನವರತ್ನ ಕವಚದ ಅಲಂಕಾರ, ಪಂಚಾಂಗ ಶ್ರವಣ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರಾಚಾರ್ ಅವರ ನೇತೃತ್ವದಲ್ಲಿ ಹೊಸ ವರ್ಷದ ಯುಗಾದಿ ಹಬ್ಬದ ಪ್ರಯುಕ್ತ ಗುರು ರಾಯರ ಬೃಂದಾವನಕ್ಕೆ ತೈಲಾಭ್ಯಂಜನ, ಫಲ ಪಂಚಾಮೃತ ಅಭಿಷೇಕ, ಕನಕಾಭಿಷೇಕ, ವಿಶೇಷ ನವರತ್ನ ಕವಚದ ಅಲಂಕಾರ, ಮಹಾ ಮಂಗಳಾರತಿ, ಅನ್ನದಾನ ಸೇವೆ ಕಾರ್ಯಕ್ರಮಗಳು ನಡೆದವು.

ಸಂಜೆಯ ಕಾರ್ಯಕ್ರಮದಲ್ಲಿ ಡಾಕ್ಟರ್ ಅಗ್ನಿ ಹೋತ್ರಿ ವೇಣುಗೋಪಾಲ್ ಆಚಾರ್ಯ ಅವರಿಂದ ವಿಶೇಷ ಪಂಚಾಂಗ ಶ್ರವಣವನ್ನು ನೆರವೇರಿಸಿದ ಆಚಾರ್ಯರಿಗೆ ಫಲ ಮಂತ್ರಾಕ್ಷತೆ ಗೌರವವನ್ನು ಸಮರ್ಪಿಸಿ , ತದನಂತರ ಪಲ್ಲಕ್ಕಿ ಉತ್ಸವ ರಥೋತ್ಸವ, ಗಜವಾಹನೋತ್ಸವ, ಅಷ್ಟಾವಧಾನ, ತೊಟ್ಟಿಲು ಪೂಜೆ ವಿಶೇಷವಾಗಿ ನೆರವೇರಿತು ಎಂದು ಶ್ರೀ ನಂದಕಿಶೋರ ಆಚಾರ್ಯರು ತಿಳಿಸಿದರು.

ಈ ಸಂದರ್ಭದಲ್ಲಿ ಭಕ್ತರು ,ರಾಯರ ಸನ್ನಿಧಿಗೆ ಆಗಮಿಸಿ, ಗುರುಗಳ ದರ್ಶನ ಪಡೆದು ಪಂಚಾಂಗ ಶ್ರವಣ ಮತ್ತು ಉತ್ಸವಗಳ ಮತ್ತು ಪ್ರಸಾದ ಸೇವೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

ಈ ಸಂದರ್ಭದಲ್ಲಿ ಆರ್ ಕೆ ವಾದಿಂದ್ರ ಆಚಾರ್ಯರು, ಶ್ರೀನಂದಕಿಶೋರ್ ಆಚಾರ್ಯರು, ರಿಪಬ್ಲಿಕ್ ಕನ್ನಡ ವಾಹಿನಿಯ ನಿರೂಪಕರಾದ ಶ್ರೀಪಾದ್ ಪಾಟೀಲ್ ಮತ್ತು ಶ್ರೀಮಠದ ಭಕ್ತರು, ಶಿಷ್ಯರು, ಸೇವಾಕರ್ತರು, ಸಿಬ್ಬಂದಿಗಳು ಸ್ವಯಂಸೇವಕರು ಭಾಗವಹಿಸಿದ್ದರು

ಉದಯ ವಾಹಿನಿ
ಪ್ರಾದೇಶಿಕ
ಶನಿವಾರ 21 ಮಾರ್ಚ್ 2026


# ಭೀಕರ ದುರಂತದ ನಡುವೆಯೂ ಕೇರಳಕ್ಕೆ ಸಾಗಿದ ಟಿಪ್ಪರ್‌ಗಳು : ಅಕ್ರಮಕ್ಕೆ ಕಡಿವಾಣ ಬೀಳೋದೆಂದು ?

• ಉದಯವಾಹಿನಿ, ಗುಂಡ್ಲುಪೇಟೆ

ಮಂಗಳವಾರ ತಾಲ್ಲೂಕಿನ ಚಿಕ್ಕತುಪ್ಪೂರು ಗೇಟ್ ಸಮೀಪ ಶಾಲಾ ಮಕ್ಕಳು ತೆರಳುತ್ತಿದ್ದ ಮಿನಿ ವಾಹನಕ್ಕೆ ಟಿಪ್ಪರ್ ಗುದ್ದಿದ ಪರಿಣಾಮ ಕೈ ಕಾಲು ಮುರಿಟಕ್ಕೊಳಗಾಗಿ ಆಸ್ಪತ್ರೆ ಸೇರಿದ್ದ ಮಕ್ಕಳ ಪರಿತಾಪ ಮಾಸುವ ಮುಂಚೆಯೇ ರೈತ ಸಂಘ, ವಕೀಲರು ಶಿಂಡನಪುರ ಗ್ರಾಮಸ್ಥರು ನಡೆಸಿದ ಪ್ರತಿಭಟನೆಗೆ ಸೆಡ್ಡು ಹೊಡೆದಿರುವ ಕೇರಳ ಟಿಪ್ಪರ್ ಮಾಲೀಕರು ಗುರುವಾರ ಬೆಳ್ಳಂಬೆಳಗ್ಗೆ ಬಿಳಿಕಲ್ಲು, ಎಂಸ್ಯಾನ್ಡ್ ಸಾಗಿಸಿರುವುದು ಸಾರ್ವಜನಿಕ ವಲಯದಲ್ಲಿ ಬಾರಿ ಆಕ್ರೋಶಕ್ಕೆ ಕಾರಣವಾಗಿದೆ.

ಮಾರ್ಚ್ 17 ರಂದು ಚಿಕ್ಕತುಪ್ಪೂರು ಗೇಟ್ ಸಮೀಪ ಸಂಭವಿಸಿದ ಭೀಕರ ದುರಂತದಲ್ಲಿ ಶಿಂಡನಪುರ, ಕಂದೇಗಾಲ ಹಾಗೂ ಕೊಡಸೋಗೆ ಗ್ರಾಮದ ವಿದ್ಯಾರ್ಥಿಗಳು ತೀವ್ರತರವಾದ ಪೆಟ್ಟಿಗೊಳಗಾಗಿದ್ದು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ, ಓವರ್


ಉದಯವಾಹಿನಿ ಚಿತ್ರ


ಲೋಡ್, ಅನುಮತಿರಹಿತವಾಗಿ ಸಂಚರಿಸುವ ಟಿಪ್ಪರ್‌ಗಳ ವಿರುದ್ಧ ರೊಚ್ಚಿಗೆದ್ದಿದ್ದ ರೈತ ಸಂಘ, ವಕೀಲರು ಹಾಗೂ ಪೋಷಕರು ಬಾರಿ ಪ್ರತಿಭಟನೆ ನಡೆಸಿದ್ದರೂ ಸಹ ಯಾವುದೇ ಉಪಯೋಗಕ್ಕೆ ಬಾರದು ಎಂಬ ಸತ್ಯ ಹೊರಬಿದ್ದಿದೆ. ಘಟನೆ ಬಳಿಕ ಕೇವಲ ಸ್ಥಳೀಯ ಮಾಲೀಕತ್ವದ ಟಿಪ್ಪರ್ ಗಳು ಸದ್ದುನಿಲ್ಲಿಸಿವೆಯೇ ಹೊರತು ಕೇರಳ ಟಿಪ್ಪರ್ ಗಳಲ್ಲ ಇದಕ್ಕೆ ಪುಷ್ಟಿ ನೀಡುವಂತೆ ಬೆಳಗ್ಗೆ 6ರ ವೇಳೆ ಹತ್ತಾರು ಟಿಪ್ಪರ್ಗಳು ಗಡಿ ದಾಟುತ್ತಿರುವ ದೃಶ್ಯ ಲಭ್ಯವಾಗಿದ್ದು ಸಾರ್ವಜನಿಕರ ಹಿತಾಸಕ್ತಿಗಿಂತ ಕೇರಳ ಉದ್ಯಮಿಗಳ ಜತೆಗಿನ ಒಡನಾಟವೇ ಮುಖ್ಯ ಎಂಬಂತೆ ಅಕ್ರಮ ಸಾಗಣೆಗೆ ಅನುಮತಿ ನೀಡಿದ್ದಾದರೂ ಯಾಕೆ ಎಂದು ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತವನ್ನ ಜನಸಾಮಾನ್ಯರು ಪ್ರಶ್ನಿಸುತ್ತಿದ್ದಾರೆ.

ಶಾಲಾ ಮಕ್ಕಳ ಸಂತಸ ಕಸಿದ ದಂದೇಕೋರರ ಜತೆಗೆ ಮುಗುಳ್ನಗೆ ಸಂಬಂಧವಿರಿಸಿರುವ ಇಲಾಖೆಗಳು ಜನಸಾಮಾನ್ಯರ ಸಾವಿನ ರಣಕೇಕೆಗೆ ಅಡಿಗಲ್ಲಾಕುವ ಮೂಲಕ ಚರ್ಮಶ್ಲೋಕ ಪಠಣೆ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ( ನಾರಾಯಣ ಗೌಡ ಬಣ ) ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ವಿ ನಾಯಕ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಒಟ್ಟಾರೆಯಾಗಿ ರಾಜ್ಯದ ಜನರ ತೆರಿಗೆ ರೂಪದ ಹಣದಲ್ಲಿ ಸಂಭಳ ಗಿಟ್ಟಿಸಿಕೊಳ್ಳುತ್ತಿರುವ ಅಧಿಕಾರಿಗಳು ಕರ್ತವ್ಯ ನಿಷ್ಠೆಯನ್ನ ಕೇರಳಿಗರಿಗಾಗಿ ಅಡಮಾನವಿಟ್ಟಿರುವುದು ಗೋಚರವಾಗುತ್ತಿದೆ.

### ಕೇರಳ ಉದ್ಯಮಿಗಳ ಮುಲಾಜಿಗೆ ಒಳಗಾದರೆ ಅಧಿಕಾರಿಗಳು...

**ಟಿಪ್ಪರ್‌ಗಳ ಆರ್ಭಟದಿಂದ ಅಪಾರ ಸಾವು ನೋವುಗಳು ವರದಿಯಾಗುತ್ತಲಿದ್ದರೂ ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಸಾರಿಗೆ ಇಲಾಖೆ ಅಧಿಕಾರಿಗಳು ಜಾಣಕುರುಡುತನ ಪ್ರದರ್ಶನ ಮಾಡುತ್ತಿರುವುದು ಗಡಿ ಭಾಗದ ಜನತೆಯನ್ನ ಕೆರಳಿಸಿದೆ, ಅಕ್ರಮ ದಂಧೆಯಲ್ಲಿ ತೊಡಗಿಸಿಕೊಂಡಿರುವ ಕೇರಳಿಗರ ಮೇಲೆ ಅಧಿಕಾರಿಗಳಿಗೇಕೆ ಸಹಾನುಭೂತಿ ಎಂದು ವಾಗ್ದಾಳಿ ನಡೆಸಿದ್ದಾರೆ.**

# ಪರಿಶಿಷ್ಟ ವರ್ಗದವರಿಗೆ ನಿವೇಶನ,ಹಕ್ಕುಪತ್ರ ವಿತರಿಸಲು ಕ್ರಮ: ರಾಮನಗರ ಡಿಸಿ ಯಶವಂತ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ:

ರಾಜ್ಯ ಸರ್ಕಾರದ ಪರಿಸರ ರಾಯಭಾರಿಯಾಗಿದ್ದ ಸಾಲುಮರದ ತಿಮ್ಮಕ್ಕ ಅವರು ವಾಸವಿದ್ದ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನಗಳು, ಹಕ್ಕುಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಭರವಸೆ ನೀಡಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ (ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ದೌರ್ಜನ್ಯ ಪ್ರತಿಬಂಧಕ ತಿದ್ದುಪಡಿ ಕಾಯ್ದೆ–2015ರ ಅನುಷ್ಠಾನ ಸಂಬಂಧ) ಸಭೆಯಲ್ಲಿ ಅವರು ಮಾತನಾಡಿದರು.

ಹುಲಿಕಲ್ ಗ್ರಾಮದ ಸರ್ವೆ ನಂಬರ್– 127ರಲ್ಲಿ 1 ಎಕರೆ 13 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ಕಾಯ್ದಿರಿಸಲು ಮಾಗಡಿ ತಹಶೀಲ್ದಾರರು ಸಲ್ಲಿಸಿರುವ ಪ್ರಸ್ತಾವನೆಗೆ ಈಗಾಗಲೇ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ. ಆ ಮೂಲಕ, ಫಲಾನುಭವಿಗಳಿಗೆ ನಿವೇಶನ ಒದಗಿಸಲು ಈ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು. ರಾಮನಗರ ತಾಲ್ಲೂಕಿನ ಕುಂಬಾಪುರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿಯವರು ವಾಸಿಸುತ್ತಿದ್ದಾರೆ. ಅಲ್ಲಿ 2026–27ನೇ ಸಾಲಿನ ತಾಲ್ಲೂಕು ಪಂಚಾಯಿತಿ ಅನುದಾನದಲ್ಲಿ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಚಿಕ್ಕಸುಬ್ಬಯ್ಯ ಅವರಿಗೆ ಜಿಲ್ಲಾಧಿಕಾರಿ ಸೂಚನೆ ನೀಡಿದರು. ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ಇತರ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವ ಯೋಜನೆಯಲ್ಲಿ ಸಾರ್ವಜನಿಕರಿಂದ ವ್ಯಕ್ತವಾಗಿರುವ ಆಕ್ಷೇಪಣೆಗಳ ಕುರಿತು ಚರ್ಚೆ ನಡೆಯಿತು.ಅದಕ್ಕೆ ಜಿಲ್ಲಾಧಿಕಾರಿ, ಜಿಲ್ಲೆಗೆ ಬಿಡುಗಡೆಯಾದ ಅನುದಾನ, ಫಲಾನುಭವಿಗಳ ಆಯ್ಕೆ ಹಾಗೂ ಅರ್ಹತೆ ಮಾನದಂಡಗಳ ಬಗ್ಗೆ ಹಾಗೂ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಿಗೆ ಲಿಖಿತವಾಗಿ ಮಾಹಿತಿ ನೀಡಬೇಕು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರಿಗೆ ಸೂಚನೆ ನೀಡಿದರು.

# ದೇವರಹಳ್ಳಿಯಲ್ಲಿ ಸಂಭ್ರಮದ ಯುಗಾದಿ

## ಸಾಂಪ್ರಾದಾಯಿಕ ಎತ್ತಿನ ಹಬ್ಬದಲ್ಲಿ ಮಿಂದೆದ್ದ ಗ್ರಾಮಸ್ಥರು

• ಉದಯವಾಹಿನಿ, ಗುಂಡ್ಲುಪೇಟೆ

ನೂತನ ವರ್ಷ ಚೈತ್ರಮಾಸದ ಮೊದಲ ದಿನದಂದು ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿ ಸಡಗರ ಸಂಭ್ರಮದಿಂದ ಯುಗಾದಿ ಹಬ್ಬವನ್ನ ಆಚರಣೆ ಮಾಡುವ ಜೊತೆಗೆ ಸಾಂಪ್ರಾದಾಯಿಕ ಎತ್ತಿನ ಹಬ್ಬದಲ್ಲಿ ಪಾಲ್ಗೊಂಡು ಪೂರ್ವಿಕರ ಆಚರಣೆ ಈಗಲೂ ಸಹ ನಿರ್ವಿಘ್ನವಾಗಿ ನಡೆದುಕೊಂಡು ಬರುತ್ತಿದೆ ಎಂಬುದನ್ನ ಭಕ್ತಿಭಾವದಿಂದ ಸಾರಿದರು.

ಈ ಗ್ರಾಮದಲ್ಲಿ ಯುಗಾದಿ ಬಂತೆಂದರೆ ಸಾಕು ಅದೇನೋ ಸಡಗರ ಸಂಭ್ರಮ , ಪೂರ್ವಿಕರ ಕಾಲದಿಂದಲೂ ಗ್ರಾಮದ ಮಲ್ಲೇಶ್ವರ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯಗಳನ್ನ ಹಮ್ಮಿಕೊಳ್ಳುವ ಜೊತೆಗೆ ಹೊನ್ನೇರು ಕಟ್ಟುವ ಮೂಲಕ ಕಾಮಧೇನು ಹಾಗೂ ರಾಸುಗಳಿಗೆ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸುವುದು ವಾಡಿಕೆಯಾಗಿದ್ದು ಇಂದಿಗೂ ಸಹ ಗ್ರಾಮದ ಜಾನುವಾರುಗಳಿಗೆ ಯಾವುದೇ ರೀತಿಯಾದ ಖಾಯಿಲೆಗಳು ಸುಳಿಯದಿರುವುದು ಸಾಭೀತಾಗಿದೆ.

**ಸಾಂಪ್ರಾದಾಯಿಕ ಎತ್ತಿನ ಹಬ್ಬ :** ಪೂರ್ವಜರ ಕಾಲದಿಂದಲೂ ಸಂಪ್ರದಾಯವನ್ನ ಪಾಲಿಸುತ್ತ ಯಾವುದೇ ಚ್ಯುತಿ ಬಾರದಂತೆ ಮುಂದುವರಿಸಿಕೊಂಡು ಬಂದಿರುವ ಗ್ರಾಮಸ್ಥರು ಹಬ್ಬದ ಹಿಂದಿನ ದಿನದಂದೇ ಮನೆಗಳನ್ನ ಸ್ವಚ್ಛಗೊಳಿಸಿ ಮಾವಿನ ಎಲೆ ಹಾಗೂ ಬೇವಿನ ತೋರಣ , ರಂಗೋಲಿ ಹಾಕುವ ಮೂಲಕ ಸಿಂಗರಿಸಿ ಹಬ್ಬದ ದಿನ ಬೇವು ಬೆಲ್ಲ ಸೇವಿಸುವ ಮೂಲಕ ಜೀವನದಲ್ಲಿನ ಸುಖ ದುಃಖಗಳನ್ನ ಸಮನವಾಗಿ ಸ್ವೀಕರಿಸಿ ಕಷ್ಟ ಕಾರ್ಪಣ್ಯಗಳನ್ನ ಅಳಿಸುವ ಸಂಕಲ್ಪ ಮಾಡುತ್ತಾರೆ, ಮುಂಜಾನೆಯೇ ಹೊಸ ಉಡುಪು ಧರಿಸಿ ರಾಸುಗಳಿಗೆ ಪೂಜೆ ಸಲ್ಲಿಸಿ ಹೊನ್ನೇರಿನ ಜೊತೆಗೆ ಗ್ರಾಮ ಪ್ರವೇಶ ದ್ವಾರದಲ್ಲಿನ ಅಂಕ ಪ್ರದಕ್ಷಿಣೆ ಮಾಡಿಸಲಾಗುತ್ತದೆ ಇದು ಗ್ರಾಮದೇವರಿಗೆ ಭಕ್ತಿ ಶರಣಾಗತಿ ಮತ್ತು ಆದ್ಯಾತ್ಮಿಕ ಶಕ್ತಿಯ ಸಂಕೇತವನ್ನ ಸಾರಲಾಗುತ್ತದೆ, ಬಳಿಕ ಮಧ್ಯಾಹ್ನದ ವೇಳೆಗೆ ದೇವರಿಗೆ ಹರಕೆ ಹೊತ್ತ ಎತ್ತುಗಳನ್ನ ಗ್ರಾಮದ ಒಳಗೆ ಓರುಗಂಭ ಗೊತ್ತುಪಡಿಸಿರುವ ಸ್ಥಳದಿಂದ ಸುಮಾರು 100 ಮೀಟರ್ ಗಳಷ್ಟು ದೂರದವರೆಗೆ (ದೊಡ್ಡದಾದ ಹಗ್ಗ) ಉರ್ಜಿಯಲ್ಲಿ ಕಟ್ಟಿ ಓಡಿಸುವುದು ವಾಡಿಕೆಯಾಗಿದೆ, ಈ ರೀತಿಯಾಗಿ ದೇವರಿಗೆ ಭಕ್ತಿ ಸಮರ್ಪಣೆ ಮಾಡಿದ್ದೆಯಾದಲ್ಲಿ ರಾಸುಗಳಿಗೆ ರೋಗರುಜಿನ ಸೋಂಕುಗಳು ಬಾದಿಸುವುದಿಲ್ಲ ಎಂಬ ನಂಬಿಕೆ ಸಾಕಾರಗೊಂಡಿರುವ ಪುರಾವೆಗಳಿವೆ.


ಉದಯವಾಹಿನಿ ಚಿತ್ರ

### ವರ್ಷತೊಡಕು

**ಹಬ್ಬ ಮುಗಿದ ಮರುದಿವಸವನ್ನ ವರ್ಷತೊಡಕು ಎಂದು ಆಚರಿಸಲಾಗುತ್ತದೆ, ಹಬ್ಬದ ದಿನ ಗುರುಹಿರಿಯರ ನಮಸ್ಕರಿಸಿದ ಹಾಗೆಯೇ ದೇವರನ್ನು ಪೂಜಿಸಲಾಗುತ್ತದೆ, ಯುಗಾದಿ ಮತ್ತು ವರ್ಷತೊಡಕು ದಿನ ಗ್ರಾಮದಲ್ಲಿ ಜೂಜಾಡುವುದು ಸರ್ವೇ ಸಾಮಾನ್ಯವಾಗಿದೆ ಆದುದರಿಂದ ಪೊಲೀಸರು ಒಂದು ದಿನದ ಮಟ್ಟಿಗೆ ಸುಳಿಯುವುದಿಲ್ಲ, ಒಟ್ಟಾರೆಯಾಗಿ ಹಿರಿಯರು ಯುಗಾದಿ ಪ್ರತೀತಿಯನ್ನ ಸಂಪ್ರದಾಯದ ಮೂಲಕ ಆಚರಿಸಿಕೊಂಡು ಬಂದಿರುವುದನ್ನ ಮುಂದುವರಿಸುತ್ತ ಬಂದಿರುವುದು ಸಾರ್ಥಕತೆ ಹಾಗೂ ನೆಮ್ಮದಿಯನ್ನ ಪ್ರತಿಪಾದಿಸುತ್ತದೆ.**

### ನೆಂಟರಿಷ್ಟರು ಒಂದೆಡೆ ಸೇರುವ ಹಬ್ಬ

**ಯುಗಾದಿ ಹಬ್ಬದ ಸಂತಸದಲ್ಲಿ ಭಾಗಿಯಾಗಲು ದೂರದ ಊರುಗಳಲ್ಲಿನ ನೆಂಟರಿಷ್ಟರು ಒಂದೆಡೆ ಸಮಾಗಮವಾಗುವ ಸಂಬಂಧಗಳ ಬೆಸೆಯುವ ಹಬ್ಬವಾಗಿದೆ. ಪಟ್ಟಣ ಸೇರಿರುವ ಅದೆಷ್ಟೋ ಮಂದಿ ಯುವಕರು ಹಿರಿಯರು ಸಹ ಹಬ್ಬದ ಹಿಂದಿನ ದಿನವೇ ಸ್ವಗ್ರಾಮಕ್ಕೆ ಆಗಮಿಸಿ ಯುಗಾದಿ ಪೂರ್ವಸಿದ್ಧತೆಯಲ್ಲಿ ತೊಡಗುತ್ತಾರೆ, ಎತ್ತಿನ ಹಬ್ಬದ ಮರುದಿವಸ ಹೋಳಿ ಹಬ್ಬದ ಮಾದರಿಯಲ್ಲಿ ಆತ್ಮೀಯರಿಗೆ ಸ್ನೇಹಿತರಿಗೆ ಹಿತೈಷಿಗಳಿಗೆ ಬಣ್ಣ ಬಳಿದು ವಿಶೇಷವಾಗಿ ಸಂಭ್ರಮಿಸುವುದು ಪದ್ಧತಿಯಾಗಿದ್ದು ಯುಗಾದಿ ದಿನದಂದೇ ಮಳೆ ಬಂತೆಂದರೆ ಉತ್ತಮ ಬೆಳೆ ಕೈ ಸೇರಿ ಊರಿಗೆ ಊರೇ ಸುಭಿಕ್ಷವಾಗಿರುತ್ತದೆ ಎಂಬ ಅಚಲ ನಂಬಿಕೆ ಗ್ರಾಮಸ್ಥರದು.**


ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

### ವಿಚಾರಣೆಗಾಗಿ ಠಾಣೆಗೆ ಕರೆತಂದಿದ್ದ ವ್ಯಕ್ತಿ ಸಾವು: ಪ್ರತಿಭಟನೆ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ಯಳನಡು ಗ್ರಾಮದಲ್ಲಿ ಇಸ್ಪೀಟ್ ಆಟದಲ್ಲಿ ನಿರತರಾಗಿದ್ದ ವ್ಯಕ್ತಿಗಳನ್ನು ಕರೆತಂದಿದ್ದವರ ಪೈಕಿ ಕಾಂತರಾಜು (50) ಎಂಬುವರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಸಾವಿಗೆ ಹುಳಿಯಾರು ಪೊಲೀಸರೇ ನೇರ ಹೊಣೆ ಎಂದು ಆರೋಪಿಸಿ ಗ್ರಾಮಸ್ಥರು ಗುರುವಾರ ರಾತ್ರಿ ಹುಳಿಯಾರು ಠಾಣೆ ಮುಂದೆ ಶವವಿಟ್ಟು ಪ್ರತಿಭಟನೆ ನಡೆಸಿದರು. ಯುಗಾದಿ ಹಬ್ಬದ ಅಂಗವಾಗಿ ಗ್ರಾಮದಲ್ಲಿ ಇಸ್ಪೀಟ್ ಆಟ ಆಡುತ್ತಿದ್ದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಕಾಂತರಾಜು ಸೇರಿ 5 ಮಂದಿಯನ್ನು ಠಾಣೆಗೆ ಕರೆ ತಂದಿದ್ದರು. ವಿಚಾರಣೆ ನಂತರ ಹೊರ ಬಂದ ಕಾಂತರಾಜು ತೀವ್ರ ಅಸ್ವಸ್ಥರಾಗಿ ಠಾಣೆ ಮುಂದೆಯೇ ಕುಸಿದು ಬಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ವೈದ್ಯರು ಮೃತಪಟ್ಟಿರುವುದಾಗಿ ದೃಢಪಡಿಸಿದರು. ಪೊಲೀಸರು ಹೆದರಿಸಿ, ಹೊಡೆದಿರುವ ಪರಿಣಾಮ ಕಾಂತರಾಜು ಸಾವನ್ನಪ್ಪಿದ್ದಾರೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ಮಾಜಿ ಶಾಸಕ ಕೆ.ಎಸ್.ಕಿರಣ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಡರಾತ್ರಿ ಠಾಣೆಗೆ ಆಗಮಿಸಿದ್ದರು. ಸದ್ಯ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

### ಪಡಿತರ ರಾಗಿ ಅಕ್ರಮ ಮಾರಾಟ

• ಉದಯವಾಹಿನಿ, ಕನಕಪುರ

ನ್ಯಾಯಬೆಲೆ ಅಂಗಡಿಯ ರಾಗಿಯನ್ನು ಅಕ್ರಮವಾಗಿ ಎಪಿಎಂಸಿ ಮಾರುಕಟ್ಟೆ ಅಲ್ಲಿರುವ ರಾಗಿ ಖರೀದಿ ಕೇಂದ್ರಕ್ಕೆ ಮಾರಾಟ ಮಾಡುವ ಪ್ರಕರಣ ಬೆಳಕಿಗೆ ಬಂದಿದೆ. ಈ ಬಗ್ಗೆ ಮಾಹಿತಿ ತಿಳಿದ ಭಾರತ್ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಕುಮಾರ ಸ್ವಾಮಿ, ರೈತ ಸಂಘದ ಸಂಪತ್ ಕುಮಾರ್ ಹಾಗೂ ವಕೀಲ ದೊಡ್ಡವೀರೇಗೌಡ ರಾಗಿ ಖರೀದಿ ಕೇಂದ್ರಕ್ಕೆ ತೆರಳಿ ಅಕ್ರಮವಾಗಿ ಮಾರಾಟ ಮಾಡಲು ತಂದಿದ್ದ ರಾಗಿ ಚೀಲಗಳನ್ನು ಪರಿಶೀಲಿಸಿ ಆಹಾರ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಮಾಹಿತಿ ಆಧರಿಸಿ ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ನೀಡಿದ ಆಹಾರ ಇಲಾಖೆಯ ಶಿರಸ್ತೇದಾರ್ ಜಯಸಿಂಹ, ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ರಾಧಾಕೃಷ್ಣ ಪರಿಶೀಲನೆ ನಡೆಸಿದರು. ಕ್ಯಾಂಟರ್‌ನಲ್ಲಿ ತುಂಬಿದ ರಾಗಿ ಮೂಟೆಗಳನ್ನು ಪರಿಶೀಲಿಸಿದ ಅಧಿಕಾರಿಗಳು, ಸರ್ಕಾರದಿಂದ ಬಡವರಿಗೆ ಹಂಚಿಕೆ ಮಾಡಲು ನೀಡಿದ ಪಡಿತರದ ರಾಗಿ ಎಂದು ಖಚಿತಪಡಿಸಿದರು. ಬಡವರಿಗೆ ಸರ್ಕಾರ ಉಚಿತವಾಗಿ ನೀಡಿದ್ದ ಪಡಿತರವನ್ನು ರೈತರ ಹೆಸರಿನಲ್ಲಿ ರಾಗಿ ಕೇಂದ್ರಕ್ಕೆ ಮಾರಾಟ ಮಾಡಿ ವಂಚಿಸುತ್ತಿದ್ದರೂ ಆಹಾರ ಇಲಾಖೆ ಅಧಿಕಾರಿಗಳು ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕುಮಾರಸ್ವಾಮಿ, ಸಂಪತ್ ಕುಮಾರ್ ಆರೋಪಿದರು. ಅಕ್ರಮ ನಡೆಯುತ್ತಿರುವುದು ಖಾತರಿಯಾದರೂ ಪಡಿತರ ರಾಗಿ ವಶಕ್ಕೆ ಪಡೆದು, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದೆ ರಾಗಿ ತುಂಬಿದ್ದ ಕ್ಯಾಂಟರ್ ಮತ್ತು ಆರೋಪಿಗಳನ್ನು ಬಿಟ್ಟು ಕಳಿಸಿದ್ದಾರೆ ಎಂದು ಆರೋಪಿಸಿದರು. ರಾಗಿ ಖರೀದಿ ಕೇಂದ್ರದಲ್ಲಿರುವ ಸಿಸಿಟಿವಿಗಳನ್ನು ಪರಿಶೀಲನೆ ನಡೆಸಿ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರೈತರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸುವ ವ್ಯಾಪಾರಿಗಳು ಪಡಿತರ ರಾಗಿಯನ್ನು ತಂದು ಖರೀದಿ ಕೇಂದ್ರಕ್ಕೆ ನೀಡುವ ಮೂಲಕ ಸರ್ಕಾರವನ್ನು ವಂಚಿಸುತ್ತಿದ್ದಾರೆ ಎಂದು ದೂರಿದರು.

### ವೃತ್ತ ನಿರೀಕ್ಷಕರ ಕಚೇರಿಯಲ್ಲಿ ದಲಿತರ ಕುಂದು ಕೊರತೆ ಸಭೆ

• ಉದಯವಾಹಿನಿ, ಚೇಳೂರು

ಪಟ್ಟಣದ ವೃತ್ತ ನಿರೀಕ್ಷಕರ ಕಚೇರಿಯ ಅವರಣದಲ್ಲಿ ದಲಿತರ ಕುಂದು ಕೊರತೆಗಳ ಸಭೆ ನಡೆಯಿತು. ದಲಿತ ಸಮುದಾಯದ ವಿವಿಧ ಸಮಸ್ಯೆಗಳ ಕುರಿತು ಗಂಭೀರ ಚರ್ಚೆ ನಡೆಯಿತು. ಪೊಲೀಸ್ ಇಲಾಖೆ ಮತ್ತು ದಲಿತ ಮುಖಂಡರ ನಡುವೆ ನಡೆದ ಈ ಸಂವಾದದಲ್ಲಿ ಸಾಮಾಜಿಕ ನ್ಯಾಯ, ರಕ್ಷಣೆ, ನಾಗರಿಕ ಸೌಲಭ್ಯಗಳ ಕುರಿತು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸಭೆಯ ಅಧ್ಯಕ್ಷತೆವಹಿಸಿದ್ದ ವೃತ್ತ ನಿರೀಕ್ಷಕ ಎಂ. ಶ್ರೀನಿವಾಸ್ ಮಾತನಾಡಿ, ಸಮಾಜದಲ್ಲಿ ಶಾಂತಿ, ಸೌಹಾರ್ದ ಕಾಪಾಡುವುದು ಪೊಲೀಸ್ ಇಲಾಖೆಯ ಆದ್ಯತೆ. ವಿಶೇಷವಾಗಿ ಶೋಷಿತ ವರ್ಗಗಳ ಹಿತರಕ್ಷಣೆಗಾಗಿ ಕಾನೂನಿನ ಚೌಕಟ್ಟಿನಲ್ಲಿ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಅಲ್ಲಲ್ಲಿ ಕಂಡುಬರುತ್ತಿರುವ ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರದಂತಹ ಪಿಡುಗುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಮುದಾಯದ ಮುಖಂಡರು ಒತ್ತಾಯಿಸಿದರು. ಹೋಟೆಲ್, ದೇವಾಲಯಗಳಲ್ಲಿ ಸಮಾನ ಪ್ರವೇಶದ ಹಕ್ಕನ್ನು ಖಾತ್ರಿಪಡಿಸಬೇಕು ಎಂದು ಮನವಿ ಮಾಡಿದರು.

ದಲಿತ ಸಂಘಟನೆಯ ಮುಖಂಡ ಕಡ್ಡಿಲು ವೆಂಕಟರವಣಪ್ಪ, ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಪರೋಕ್ಷವಾಗಿ ಅಸ್ಪೃಶ್ಯತೆ ಜೀವಂತವಾಗಿದೆ ಸಾರ್ವಜನಿಕ ಸ್ಥಳಗಳಲ್ಲಿ ಸಮಾನತೆ ಕಾಣುವುದು ದುರ್ಲಭವಾಗಿದೆ. ಪೊಲೀಸ್ ಇಲಾಖೆಯು ಇಂತಹ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ, ಅಸ್ಪೃಶ್ಯತೆ ನಿವಾರಣೆಗೆ ಕಟ್ಟುನಿಟ್ಟಿನ ಜಾಗೃತಿ ಮೂಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಮುಖಂಡ ಜಿ. ನರಸಿಂಹಪ್ಪ ಮಾತನಾಡಿ, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ತನಿಖೆ ವಿಳಂಬವಾಗುತ್ತಿದೆ. ಸಂತ್ರಸ್ತರಿಗೆ ನ್ಯಾಯ ಸಿಗಲು ವರ್ಷಗಟ್ಟಲೆ ಕಾಯುವಂತಾಗಿದೆ. ಇಲಾಖೆಯು ತನಿಖಾ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ನಿಗದಿತ ಸಮಯದಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು ಎಂದು ಆಗ್ರಹಿಸಿದರು.

# ವೈರಮುಡಿ ಬ್ರಹ್ಮೋತ್ಸವಕ್ಕೆ 3 ಕೋಟಿ ಅನುದಾನ: ಶಾಸಕ

• ಉದಯವಾಹಿನಿ, ಮೇಲುಕೋಟೆ

ವಿಶ್ವವಿಖ್ಯಾತ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಬ್ರಹೋತ್ಸವಕ್ಕೆ ಈ ಬಾರಿ ಸಿಎಂ ಸಿದ್ದರಾಮಯ್ಯ ಅವರು 3 ಕೋಟಿ ಅನುದಾನ ನೀಡಿದ್ದಾರೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು. ವೈರಮುಡಿ ಜಾತ್ರಾ ಮಹೋತ್ಸವ ಪ್ರಯುಕ್ತ ಮೇಲುಕೋಟೆ ಪ್ರವಾಸಿ ಮಂದಿರದಲ್ಲಿ ಸ್ಥಳೀಯರು ಹಾಗೂ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು. ವೈರಮುಡಿ ಬ್ರಹೋತ್ಸವ ವಿಶ್ವವಿಖ್ಯಾತಿಯಾಗಿದ್ದು ದೇಶ– ವಿದೇಶದಿಂದ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಬಾರಿ ಶಾಲಾ– ಕಾಲೇಜುಗಳಿಗೆ ರಜೆ ಇರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಕಳೆದ ಬಾರಿ 10 ಕೋಟಿ ಅನುದಾನ ನೀಡಿದ್ದರು. ಈ ಬಾರಿ 3 ಕೋಟಿ ಅನುದಾನ ನೀಡಿದ್ದು, ಬ್ರಹೋತ್ಸವ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಬಳಸಿಕೊಳ್ಳಲಾಗುವುದು ಎಂದರು. ಪ್ರತಿ ವರ್ಷದಂತೆ ಚೆಲುವ ನಾರಾಯಣಸ್ವಾಮಿ, ಯೋಗಾ ನರಸಿಂಹಸ್ವಾಮಿ ಬೆಟ್ಟ, ಕಲ್ಯಾಣಿ, ರಾಜಬೀದಿ, ಉತ್ಸವ ಬೀದಿ, ಇಲ್ಲಿನ ಕಣಿವೆಯಿಂದ ದೇವಾಲಯದವರೆಗೂ ವೈವಿಧ್ಯಮಯ ದೀಪಾಲಂಕಾರದಲ್ಲಿ ಕಂಗೊಳಿಸಲಿದೆ.

**ಪೂರ್ವಸಿದ್ಧತೆ ಸಭೆ:** ಮೇಲುಕೋಟೆಯಲ್ಲಿ ಮಾರ್ಚ್ 28ರಂದು ನಡೆಯಲಿರುವ ವೈರಮುಡಿ ಬ್ರಹೋತ್ಸವಕ್ಕೆ ಭಕ್ತರಿಗೆ ಬೆಂಗಳೂರು, ಮೈಸೂರು, ರಾಜ್ಯದ ಅನೇಕ ನಗರ, ಪಟ್ಟಣಗಳಿಂದ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು. ಜತೆಗೆ, ಕುಡಿಯುವ ನೀರಿನ ವ್ಯವಸ್ಥೆ, ತುರ್ತು ವೈದ್ಯಕೀಯ ವ್ಯವಸ್ಥೆ ಮಾಡಲಾಗುವುದು. ಹೆಚ್ಚಿನ ಜನ ಸೇರುವ, ಅಗತ್ಯವಿರುವ ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು, ವಿದ್ಯುತ್ ಇಲಾಖೆಯ ಅಧಿಕಾರಿಗಳು ದಿನದ 24 ಗಂಟೆ ವಿದ್ಯುತ್ ಪೂರೈಸಲು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು. ವ್ಯವಸ್ಥಿತ ಸಂಚಾರ ಮತ್ತು ವಾಹನ ನಿಲುಗಡೆ ವ್ಯವಸ್ಥೆ, ಮುಖ್ಯ ರಸ್ತೆಗಳ ದುರಸ್ತಿ ಮಾಡಲು, ದೇವಾಲಯದ ಸ್ವಚ್ಛತೆಯ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಎಲ್ಲಾ ರಸ್ತೆ, ಚರಂಡಿ ಕ್ಷೇತ್ರಕ್ಕೆ ಶುಚಿಗೊಳಿಸುವುದು, ವಾಹನ ಪಾರ್ಕಿಂಗ್‌ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವುದು, ಕಲ್ಯಾಣಿಗಳು, ರಸ್ತೆಗಳು ಕಸ ಕಡ್ಡಿಗಳನ್ನು ತೆರವುಗೊಳಿಸಿ ಸ್ವಚ್ಛತೆ ಕಾಯ್ದುಕೊಳ್ಳಲು ಅಧಿಕಾರಿಗಳು ಮುಂದಾಗಬೇಕೆಂದು ಸೂಚಿಸಿದರು.


ಉದಯವಾಹಿನಿ ಚಿತ್ರ

### ಈ ವರ್ಷ ಅಧಿಕ ಸ್ಪಾನ್ಸರ್!

**ಮೇಲುಕೋಟೆಯ ವೈರಮುಡಿ ಉತ್ಸವಕ್ಕೆ ಪ್ರತಿವರ್ಷ ಹಲವು ದಾನಿಗಳು ಸ್ಪಾನ್ಸರ್ ಮಾಡತ್ತಿದ್ದರು. ಈ ಬಾರಿ ಸ್ಪಾನ್ಸರ್ ಗಳ ಸಂಖ್ಯೆ ಹೆಚ್ಚಾಗಿದೆ. ಪ್ರತಿವರ್ಷದಂತೆ ಉತ್ಸವಕ್ಕೆ ಸಕಲ ಸಿದ್ಧತೆ ಕೈಗೊಂಡಿದ್ದೇವೆ ಎಂದು ದೇವಾಲಯ ಆಡಳಿತಾಧಿಕಾರಿ ಶೀಲಾ ತಿಳಿಸಿದರು. ವೈರಮುಡಿ ಉತ್ಸವದ ಅಂಗವಾಗಿ ಅಂಕುರಾರ್ಪಣ ಕಲ್ಯಾಣೋತ್ಸವ ಧಾರಾಮಹೋತ್ಸವ ಧ್ವಜರೋಹಣ ರಾಮಾನುಜಾಚಾರ್ಯರಿಗೆ ಅಭಿಷೇಕ ನಾಗವಲ್ಲಿ ಮಹೋತ್ಸವ ವೈರಮುಡಿ ಕಿರೀಟಧಾರಣೆ ಪ್ರಹ್ಲಾದ ಪರಿಪಾಲನ ಗಜೇಂದ್ರ, ಮೋಕ್ಷ ರಥೋತ್ಸವ ತೆಪ್ಪೋತ್ಸವ ಚೂರ್ಣಭಿಷೇಕ ನಾರಾಯಣ ಸ್ವಾಮಿಗೆ ಅಭಿಷೇಕ ಸೇರಿದಂತೆ ವಿವಿಧ ಉತ್ಸವಗಳಿಗೆ ವಿವಿಧ ಮಠಗಳು ಹಾಗೂ ದೇವಾಲಯ ಭಕ್ತರು ಸ್ಪಾನ್ಸರ್ ನೀಡಿದ್ದಾರೆ.**

## ಠಾಣೆಗೆ ಕರೆತಂದಿದ್ದ ವ್ಯಕ್ತಿ ಸಾವು, ಲಾಕಪ್ ಡೆತ್ ಆರೋಪ

# ಸಿಐಡಿ ತನಿಖೆಗೆ ಪರಂ ಭರವಸೆ

• ಉದಯವಾಹಿನಿ, ತುಮಕೂರು

ಯುಗಾದಿ ಹಬ್ಬದ ಸಂದರ್ಭದಲ್ಲಿ ಜೂಜಾಟದಲ್ಲಿ ತೊಡಗಿದ್ದ ಆರೋಪದಲ್ಲಿ ಠಾಣೆಗೆ ಕರೆತಂದಿದ್ದ ವ್ಯಕ್ತಿಯ ಅಸಹಜ ಸಾವಿನ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಘಟನೆಯ ಬಗ್ಗೆ ತಾವು ತುಮಕೂರು ಜಿಲ್ಲೆಯ ಎಸ್‌ಪಿ ಅವರ ಜೊತೆ ಚರ್ಚೆ ನಡೆಸಿದ್ದು, ಅದು ಲಾಕ್‌ಅಪ್‌ಡೆತ್ ಅಲ್ಲ ಎಂದು ಹೇಳಿದ್ದಾರೆ. ಠಾಣೆಗೆ ಕರೆ ತಂದಿದ್ದಕ್ಕೆ ಆತಂಕಗೊಂಡು ಸಾವನ್ನಪ್ಪಿದ್ದಾರೆ ಎಂದು ವಿವರಿಸಿರುವುದಾಗಿ ತಿಳಿಸಿದರು. ಸದರಿ ವ್ಯಕ್ತಿಯನ್ನು ಪೊಲೀಸರು ಥಳಿಸಿದ್ದರಿಂದಾಗಿ ಮೃತಪಟ್ಟಿದ್ದಾರೆ ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. ಸಿಐಡಿ ತನಿಖೆಯಾದರೆ, ಸತ್ಯ ಗೊತ್ತಾಗುತ್ತದೆ. ಮರಣೋತ್ತರ ಪರೀಕ್ಷೆಯಲ್ಲೂ ಸತ್ಯ ಗೊತ್ತಾಗುತ್ತದೆ. ಸಿಐಡಿ ತನಿಖೆಯಲ್ಲಿ ಥಳಿಸಿರುವುದು, ಒಟ್ಟಾರೆ ಘಟನೆ ಬಗ್ಗೆ ವಿಷಯ ತಿಳಿಯಲಿದೆ. ಒಂದು ವೇಳೆ ಲೋಪಗಳಾಗಿದ್ದರೆ, ಸಿಐಡಿ ವರದಿ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆಗೊಳ್ಳುವುದಾಗಿ ತಿಳಿಸಿದರು. ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಜೂಜಾಟದಲ್ಲಿ ತೊಡಗಿದ್ದವರ ಮೇಳೆ ದಾಳಿ ನಡೆಸಿ ವಶಕ್ಕೆ ಪಡೆದಿದ್ದ ವ್ಯಕ್ತಿ ಸಾವನ್ನಪ್ಪಿದ ಘಟನೆ ಹುಳಿಯಾರು ಪೊಲೀಸ್ ಠಾಣೆಯಲ್ಲಿ ನಡೆದಿದ್ದು, ಸಂಬಂಧಿಕರು ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ.ಮೃತನನ್ನು ಕಾಂತರಾಜು (45) ಎಂದು ಗುರುತಿಸಲಾಗಿದೆ. ಪೊಲೀಸರ ಹಲ್ಲೆಯಿಂದ ಕಾಂತರಾಜು ಸಾವನ್ನಪ್ಪಿದ್ದಾನೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

### ತಪ್ಪಿತಸ್ಥರ ವಿರುದ್ಧ ಕ್ರಮ

**ಇಸ್ಪೀಟ್ ಆಡುತ್ತಿದ್ದ 6 ಜನರನ್ನ ಪೊಲೀಸರು ಠಾಣೆಗೆ ಕರೆದುಕೊಂಡು ಬಂದಿದ್ದರು. ಈ ವೇಳೆ ಠಾಣೆಯಲ್ಲಿ ಕಾಂತ ರಾಜು ಸಾವನ್ನಪ್ಪಿದ್ದರು. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ, ಠಾಣೆಗೆ ಬೀಗ ಜಡಿದು ಪ್ರತಿಭಟಿಸಿದ್ದಾರೆ.ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ತಡೆಯಲು ಎಸ್‌ಪಿ ಅಶೋಕ್ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥತಿ ತಹಬಂದಿಗೆ ತಂದಿದ್ದಾರೆ. ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಗ್ರಾಮಸ್ಥರಿಗೆ ಎಸ್‌ಪಿಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟಿದ್ದಾರೆ.ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಗ್ರಾಮದಲ್ಲಿ ಇನ್ನೂ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಹೆಚ್ಚಿನ ಪೊಲೀಸ್‌ಭದ್ರತೆ ಕಲ್ಪಿಸಲಾಗಿದೆ. ಇದು ಲಾಕಪ್ ಡೆತ್ ಎಂದು ಗ್ರಾಮಸ್ಥರು ಆರೋಪಿಸಿ ಆಕ್ರೋಶ ಹೊರಹಾಕಿದ್ದಾರೆ.**



# ಅನಿಲ ಬಿಕ್ಕಟ್ಟಿನ ನಡುವೆಯೂ ರಾಮನಗರದ ಹಲವಡೆ 24 ಗಂಟೆ ಗ್ಯಾಸ್ ಭಾಗ್ಯ

• ಉದಯವಾಹಿನಿ, ಹಾರೋಹಳ್ಳಿ

ಮಧ್ಯಪ್ರಾಚ್ಯದ ರಾಷ್ಟ್ರಗಳ ಯುದ್ದದಿಂದಾಗಿ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಜಿಲ್ಲೆಯ ಈ ಗ್ರಾಮಗಳಿಗೆ ಮಾತ್ರ ಗ್ಯಾಸ್‌ನ ಯಾವುದೇ ರೀತಿಯ ಸಮಸ್ಯೆ ಇಲ್ಲವಾಗಿದ್ದು, ದಿನದ 24 ಗಂಟೆಯೂ ಸರಬರಾಜಾಗುತ್ತಿದೆ. ಹೌದು ಜಿಲ್ಲೆಯ ಹಲವು ಗ್ರಾಮಗಳ ಮನೆಗಳಿಗೆ ಪೈಪ್‌ಲೈನ್ ಮೂಲಕ ನೈಸರ್ಗಿಕ ಅನಿಲ ಪೂರೈಸುತ್ತಿದ್ದು, ಯುದ್ಧದಿಂದಾಗಿ ಗ್ಯಾಸ್‌ಗಾಗಿ ಪರದಾಡುವ ಅಗತ್ಯತೆ ಈ ಗ್ರಾಮದ ಜನರಿಗಿಲ್ಲ. ಇದಕ್ಕೆ ಕಾರಣ ಸರಕಾರಿ ಸ್ವಾಮ್ಯದ ಕಂಪನಿಯೊಂದು ಪೈಪ್‌ಲೈನ್ ಮೂಲಕ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಸರಬರಾಜು ಮಾಡುತ್ತಿದ್ದು, ಸುಮಾರು 10,000 ಮನೆಗಳಿಗೆ ಗ್ಯಾಸ್ ಸಂಪರ್ಕ ಒದಗಿಸಲಾಗಿದ್ದು, ಯಾವುದೇ ಬುಕಿಂಗ್ ಇಲ್ಲದೆ, ಯಾರಿಗಾಗಿಯೂ ಕಾಯದೇ ದಿನದ 24 ಗಂಟೆಯೂ ಗ್ಯಾಸ್ ಪೂರೈಸುತ್ತಿದ್ದು ಜನತೆ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.


ಉದಯವಾಹಿನಿ ಚಿತ್ರ

**ನೈಸರ್ಗಿಕ ಅನಿಲದಿಂದ ಲಾಭಗಳೇ ಹೆಚ್ಚು:** ನೈಸರ್ಗಿಕ ಅನಿಲ ಪರಿಸರ ಸ್ನೇಹಿಯಾಗಿದ್ದು, ಸೋರಿಕೆ ವೇಳೆ ಪರಿಸರದಲ್ಲಿ ತ್ವರಿತವಾಗಿ ಕರಗಲಿದೆ. ದಿನದ 24 ಗಂಟೆಯೂ ನೈಸರ್ಗಿಕ ಅನಿಲ ಪೂರೈಕೆಯಿಂದಾಗಿ ಯಾವುದೇ ರೀತಿಯ ಸ್ಟೋರೇಜ್ ಅಗತ್ಯತೆ ಇರುವುದಿಲ್ಲ. ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಗ್ಯಾಸ್ ಬಳಕೆಗಿಂತ ನೈಸರ್ಗಿಕ ಅನಿಲದ ಬಳಕೆ ದುಬಾರಿ ಎನಿಸುವುದಿಲ್ಲ. ನೈಸರ್ಗಿಕ ಅನಿಲ ಪೂರೈಸುವ ಕಂಪನಿಗಳು ಬಳಕೆ ನಂತರ ಬಿಲ್ ಪಾವತಿಸಿಕೊಳ್ಳಲು ಮುಂದಾಗಿವೆ.

**ಎಲ್ಲೆಲ್ಲಿ ಬಳಕೆ?:** ಜಿಲ್ಲೆಯ ಹಲವು ಗ್ರಾಮಗಳಲ್ಲಿ ಪೈಪ್‌ಲೈನ್ ಮೂಲಕ ನೈಸರ್ಗಿಕ ಗ್ಯಾಸ್ ಅನ್ನು ಸರಕಾರಿ ಸ್ವಾಮ್ಯದ ಕಂಪನಿ ಸರಬರಾಜು ಮಾಡುತ್ತಿದ್ದು, ರಾಮನಗರ ನಗರ ಪ್ರದೇಶ ವ್ಯಾಪ್ತಿಯಲ್ಲಿ, ಚನ್ನಪಟ್ಟಣ ನಗರ ಪ್ರದೇಶ ವ್ಯಾಪ್ತಿಯಲ್ಲಿ ಬಿಡದಿಯ ಬಾನಂದೂರು ಇಟ್ಟಮಡು, ಬೈರಮಂಗಲ, ಹಾರೋಹಳ್ಳಿ, ಮೇಡಮಾರನಹಳ್ಳಿ, ಗಾಣಾಳುದೊಡ್ಡಿ, ಹೆಬ್ಬಿದರ ಮೆಟ್ಟಿಲು, ಟಿ.ಬನ್ನಿ ಕುಪ್ಪೆ ಸೇರಿದಂತೆ ಜಿಲ್ಲೆಯ ಸುಮಾರು 10,000 ಮನೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

**ಐದು ವರ್ಷಗಳಿಂದಲೂ ಕೆಲಸ:** ಬೈಕ್ ಮೂಲಕ ನೈಸರ್ಗಿಕ ಅನಿಲವನ್ನು ಅಡುಗೆ ಮನೆಗೆ ತಲುಪಿಸುವ ಯೋಜನೆ 2021ರಲ್ಲೇ ಆರಂಭವಾಗಿದ್ದು ಯೋಜನೆ ಆರಂಭವಾಗಿ ಐದು ವರ್ಷ ಕಳೆದಿದ್ದು, ನಿಗದಿತ ಗುರಿ ತಲುಪದಿದ್ದರು. ನೈಸರ್ಗಿಕ ಅನಿಲವನ್ನು ಪೈಪ್ ಲೈನ್ ಮೂಲಕ ಸರಬರಾಜು ಮಾಡುವ ಯೋಜನೆ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವುದು ಖುಷಿಯ ವಿಚಾರವಾಗಿದೆ.

# 1.87 ಕೋಟಿರೂ. ಉಳಿತಾಯ ಬಜೆಟ್ ಮಂಡನೆ

## ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಬೇಸಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾಧಿಸದಂತೆ ಎಚ್ಚರವಹಿಸಬೇಕು

• ಉದಯವಾಹಿನಿ, ಚಾಮರಾಜನಗರ

ಜಿಲ್ಲಾಧಿಕಾರಿ, ನಗರಸಭೆಯ ಆಡಳಿತಾಧಿಕಾರಿಯೂ ಆಗಿರುವ ಶ್ರೀರೂಪಾ ನಗರಸಭೆಯ ಸಭಾಂಗಣದಲ್ಲಿ 2026–27ನೇ ಸಾಲಿನ ನಗರಸಭೆ ಬಜೆಟ್ ಮಂಡಿಸಿದರು. ಒಟ್ಟು 77.11 ಕೋಟಿ ಗಾತ್ರದ ಬಜೆಟ್‌ನಲ್ಲಿ ಮೂಲಸೌಕರ್ಯಗಳಾದ ಸ್ವಚ್ಛತೆ, ಕುಡಿಯುವ ನೀರು ಪೂರೈಕೆ, ಒಳಚರಂಡಿ ಕಾಮಗಾರಿ, ಉದ್ಯಾನಗಳ ನಿರ್ವಹಣೆ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡುವ ಮೂಲಕ 75.23 ಕೋಟಿ ಖರ್ಚು ಕಳೆದು 1.87 ಕೋಟಿ ಉಳಿತಾಯ ಬಜೆಟ್ ಮಂಡಿಸಿದರು.

ಪ್ರಸಕ್ತ ಸಾಲಿನಲ್ಲಿ ಆಸ್ತಿ ತೆರಿಗೆ, ದಂಡ, ಉಪಕರ ಸಂಗ್ರಹಣಾ ಶುಲ್ಕ, ಉಪಕರ, ಘನತ್ಯಾಜ್ಯ ನಿರ್ವಹಣೆ ಕರ, ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕ, ಅಂಗಡಿ ಮಳಿಗೆಗಳ ಬಾಡಿಗೆ, ತರಕಾರಿ ಮಾರುಕಟ್ಟೆ ಶುಲ್ಕ, ಉದ್ದಿಮೆ ಪರವಾನಗಿ ಅಭಿವೃದ್ಧಿ ಮೇಲ್ವಿಚಾರಣ ಶುಲ್ಕ, ಕಟ್ಟಡ ಪರವಾನಗಿ, ರಸ್ತೆ ಅಗೆತ ಶುಲ್ಕ, ಸಾರ್ವಜನಿಕ ಶೌಚಾಲಯಗಳ ಬಾಡಿಗೆ, ಒಳಚರಂಡಿ ಸಂಪರ್ಕ, ಹೆಚ್ಚುವರಿ ಮುದ್ರಾಂಕ ಶುಲ್ಕ, ಬ್ಯಾಂಕ್ ಬಡ್ಡಿ, ಠೇವಣಿ ಮೇಲಿನ ಬಡ್ಡಿ, ಹರಾಜು ದಂಡಗಳಿಂದ ಆದಾಯ, ನೀರಿನ ಠೇವಣಿ, ಅಕ್ರಮ ನೀರಿನ ಸಂಪರ್ಕ ಸಕ್ರಮ ದಂಡ ವಸೂಲಿ, ಖಾತೆ ಪ್ರತಿ, ಖಾತೆ ಬದಲಾವಣೆ ಶುಲ್ಕ, ಜಾಹೀರಾತು ತೆರಿಗೆ ಅರ್ಜಿ ಪ್ರಮಾಣಪತ್ರ ಪ್ರಕಟಣೆ, ಗುತ್ತಿಗೆದಾರರು, ಸರಬರಾಜುದಾರರ ಭದ್ರತಾ ಠೇವಣಿ, ಶೌಚಾಲಯಗಳ ಹರಾಜು, ಅಂಗಡಿ ಮುಂಗಡ ಠೇವಣಿ, ಇತರ ಆದಾಯ ಮೂಲಗಳಿಂದ 21.17 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಹಾಗೆಯೇ 16ನೇ ಹಣಕಾಸು ಆಯೋಗದ ಅನುದಾನ, ಎಸ್‌ಎಫ್‌ಸಿ ವಿಶೇಷ ಅನುದಾನ, ವೇತನ ಅನುದಾನ, ಮುಕ್ತನಿಧಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ, ವಿದ್ಯುತ್ ಅನುದಾನ, ಬೀದಿದೀಪ, ನೀರು ಸರಬರಾಜು, ಕುಡಿಯುವ ನೀರು, ಗೃಹ ಭಾಗ್ಯ ಯೋಜನೆ ಅನುದಾನ, ಸ್ವಚ್ಛ ಕಲಿಕಾ ಕೇಂದ್ರ, ಇಂದಿರಾ ಕ್ಯಾಂಟೀನ್ ನಿರ್ವಹಣೆ ಅನುದಾನ, ಸ್ವಚ್ಛ ಭಾರತ ಅಭಿಯಾನ ಅನುದಾನ, ವಿದ್ಯುತ್ ಚಿತಾಗಾರ ನಿರ್ಮಾಣ ವಿಶೇಷ ಅನುದಾನ, ಜನಗಣತಿ ಅನುದಾನ ಸೇರಿ 37.78 ಕೋಟಿ ಅನುದಾನ ನಿರೀಕ್ಷೆ ಮಾಡಲಾಗಿದೆ ಎಂದು ವಿವರ ನೀಡಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಬಜೆಟ್‌ನಲ್ಲಿ ಕುಡಿಯುವ ನೀರು ಪೂರೈಕೆಗೆ ಕೇವಲ 10 ಲಕ್ಷ ಮೀಸಲಿಟ್ಟಿರುವುದು ಸಾಲುವುದಿಲ್ಲ. ನಗರಸಭೆ ನಿಧಿ ಹಾಗೂ 16ನೇ ಹಣಕಾಸು ಆಯೋಗದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಬೇಸಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾಧಿಸದಂತೆ ಎಚ್ಚರವಹಿಸಬೇಕು ಎಂದರು.

ನಗರಸಭೆ ತೆರಿಗೆ ವಸೂಲಾತಿಯಲ್ಲಿ ತೀರಾ ಹಿಂದುಳಿದಿದ್ದು, ತೆರಿಗೆ ಬಾಕಿ ಉಳಿಸಿಕೊಂಡಿರುವ ಹೋಟೆಲ್‌ಗಳು, ವಾಣಿಜ್ಯ ಮಳಿಗೆಗಳಿಂದ ತೆರಿಗೆ ವಸೂಲಿ ಮಾಡಿ ನಗರಸಭೆಗೆ ಆದಾಯ ಹೆಚ್ಚಿಸಬೇಕು. ನಗರಸಭೆಯಲ್ಲಿ ಮಧ್ಯವರ್ತಿಗಳ ಹಾವಳಿ ತಡೆಗಟ್ಟಿ, ಸರ್ಕಾರದ ಸೇವೆಗಳು ಸುಲಭವಾಗಿ ನಾಗರಿಕರಿಗೆ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು


ಉದಯವಾಹಿನಿ ಚಿತ್ರ

**ಶೀಘ್ರ ನಿವೇಶನ ಹಂಚಿಕೆ ಮಾಡಿ**

### ನಿವೇಶನ ಹಂಚಿಕೆ ಸಾಧ್ಯವಾಗಿಲ್ಲ

**ನಗರದಲ್ಲಿ ರಸ್ತೆ ವಿಸ್ತರಣೆ ಮಾಡುವಾಗ ಜಾಗ ಕಳೆದುಕೊಂಡ ಸಂತ್ರಸ್ತರಿಗೆ ನಿವೇಶನ ನೀಡುವ ಭರವಸೆ ನೀಡಲಾಗಿತ್ತು. ಇದಕ್ಕಾಗಿ 12 ಎಕರೆ ಜಾಗವನ್ನು ಮೀಸಲಿಟ್ಟರೂ ಹಂಚಿಕೆ ಸಾಧ್ಯವಾಗಿಲ್ಲ. ಸರ್ಕಾರದಿಂದ ಹೆಚ್ಚುವರಿ ಭೂಮಿ ಪಡೆಯಲು ನಗರಸಭೆಯಿಂದ ಪ್ರಸ್ತಾವ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿದರೆ ಫಲಾನುಭವಿಗಳಿಗೆ ಶೀಘ್ರ ನಿವೇಶನ ಹಂಚಿಕೆ ಮಾಡಬೇಕು.**

**–ಸಿ.ಪುಟ್ಟರಂಗಶೆಟ್ಟಿ , ಶಾಸಕ**


### ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು

**ನಗರಕ್ಕೆ ಕುಡಿಯುವ ನೀರಿನ ಪೂರೈಸಲು ಮಾಲಂಗಿ ಯೋಜನೆ ಅನುಷ್ಠಾನವಾಗಲಿದ್ದು, ಅಲ್ಲಿಯವರೆಗೆ ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕು. ಮಳೆಗಾಲಕ್ಕೂ ಮುನ್ನವೇ ಹೂಳು ತೆಗೆಸಬೇಕು. ನಗರಸಭೆಯಲ್ಲಿ ಪೌರ ಕಾರ್ಮಿಕರ ಕೊರತೆ ಗಂಭೀರವಾಗಿದ್ದು, ಸಮರ್ಪಕವಾಗಿ ಕಸ ಸಂಗ್ರಹ ಹಾಗೂ ವಿಲೇವಾರಿಯಾಗದ ಬಗ್ಗೆ ಸಾರ್ವಜನಿಕರಿಂದ ವ್ಯಾಪಕವಾಗಿ ದೂರುಗಳು ಬರುತ್ತಿವೆ. ಪೌರಕಾರ್ಮಿಕರ ಹುದ್ದೆಗಳ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು.**

ಅಂತರಾಳದಿಂದ.. EDITORIAL

# ಬಿಡುಗಡೆ: ಪ್ರಕರಣ ಮುಗಿಯದು ಪ್ರಶ್ನೆಗಳಿಗೆ ಸಿಗಬೇಕಾಗಿದೆ ಉತ್ತರ

ಆರು ತಿಂಗಳ ಬಂಧನದ ನಂತರ ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿರುವ ಘಟನೆ, ಅವರ ಬಂಧನದ ಸಿಂಧುತ್ವದ ಬಗ್ಗೆ ಅನುಮಾನ ಉಂಟುಮಾಡುವುದರ ಜೊತೆಗೆ, ಸಂಬಂಧಿಸಿದ ಪ್ರಕರಣದಲ್ಲಿ ನಾಗರಿಕರ ಹಕ್ಕುಗಳ ಸೀಮಿತ ಅನ್ವಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಲಡಾಖ್ ಗೆ ರಾಜ್ಯದ ಸ್ಥಾನಮಾನ ನೀಡುವುದು, ಸ್ಥಳೀಯ ಜನರ ಹಕ್ಕುಗಳ ರಕ್ಷಣೆ ಹಾಗೂ ಆ ಪ್ರದೇಶದ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಸಾಂವಿಧಾನಿಕ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ನಡೆಯುತ್ತಿದ್ದ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು 2025ರ ಸೆಪ್ಟೆಂಬರ್ 26ರಂದು ಬಂಧಿಸಲಾಗಿತ್ತು. ಲೇಹ್‌ನಲ್ಲಿ ಭುಗಿಲೆದ್ದ ಚಳವಳಿಯಲ್ಲಿ ನಾಲ್ವರು ಮೃತಪಟ್ಟ ಘಟನೆಯನ್ನು ನೆಪ ಮಾಡಿಕೊಂಡು ವಾಂಗ್ಚುಕ್ ಅವರನ್ನು ಬಂಧಿಸಿ, ಜೋಧಪುರ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಲಡಾಖ್‌ನಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ಅವರನ್ನು ಈಗ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿಯಲ್ಲಿ ವಾಂಗ್ಚುಕ್ ಅವರನ್ನು ಬಂಧಿಸಲಾಗಿತ್ತು; ಅವರ ವಿರುದ್ಧ ದೇಶವಿರೋಧಿ ಪ್ರತಿಭಟನೆಯ ಆರೋಪ ಹೊರಿಸಲಾಗಿತ್ತು ಹಾಗೂ ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರುವುದಾಗಿ ಆಪಾದಿಸಿ, ಅವರ ವಿದೇಶಿ ಪ್ರವಾಸಗಳ ಉದ್ದೇಶದ ಬಗ್ಗೆ ಶಂಕೆ ವ್ಯಕ್ತಪಡಿಸಲಾಗಿತ್ತು. ಹಣಕಾಸು ಅಕ್ರಮವನ್ನೂ ಅವರ ಮೇಲೆ ಹೊರಿಸಲಾಗಿತ್ತು. ಈಗ ಅವರ ಬಿಡುಗಡೆ ಸಂದರ್ಭದಲ್ಲಿ ಈ ಎಲ್ಲಾ ಆಪಾದನೆಗಳು



ಯಾವುದೇ ವಿವರಣೆಯಿಲ್ಲದೆ ಇದ್ದಕ್ಕಿದ್ದಂತೆ ಕಣ್ಮರೆಯಾಗಿವೆ. ಆಂದೋಲನ ವನ್ನು ಶಾಂತಿಯುತವಾಗಿ ನಡೆಸುತ್ತಿದ್ದ ಪ್ರಖ್ಯಾತ ಪರಿಸರ ಕಾರ್ಯಕರ್ತನ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸುವುದಾದರೆ, ಇತರರ ವಿರುದ್ಧವೂ ಇದೇ ರೀತಿಯ ಆರೋಪಗಳನ್ನು ಹೊರಿಸುವ, ಹೊರಿಸಿರುವ ಸಾಧ್ಯತೆ ಇದ್ದೇ ಇದೆ. ವಾಂಗ್ಚುಕ್ ಅವರ ಬಂಧನವನ್ನು ಪ್ರಶ್ನಿಸಿ ಅವರ ಪತ್ನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್ ಮುಂದೆ ಬರುವುದಕ್ಕೆ ಮೂರು ದಿನಗಳ ಮೊದಲಷ್ಟೇ ಈ ಬಿಡುಗಡೆ ಆಗಿದೆ. ಕೋರ್ಟ್ ಆದೇಶದ ನಂತರ ಬಿಡುಗಡೆ ಮಾಡಬೇಕಾದ ಮುಜುಗರವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸರ್ಕಾರ ಇದ್ದಕ್ಕಿದ್ದಂತೆ ವಾಂಗ್ಚುಕ್ ಅವರನ್ನು ಬಿಡುಗಡೆ ಮಾಡಿದೆಯೇ ಎನ್ನುವ ಪ್ರಶ್ನೆ ಉಂಟಾಗುತ್ತದೆ. ಬಂಧನಕ್ಕೆ ಸಂಬಂಧಿಸಿದ ಕಾರ್ಯವಿಧಾನದ ಪಾರದರ್ಶಕತೆಯನ್ನು ಹಾಗೂ ವಾಂಗ್ಚುಕ್ ಅವರ ಭಾಷಣಗಳ ಪ್ರಚೋದನಕಾರಿ ಸ್ವರೂಪವನ್ನು ಅವುಗಳ ಅನುವಾದದ ಮೂಲಕ ಕೋರ್ಟ್ ಪರಿಶೀಲಿಸಿತ್ತು. ಬಂಧಿತರ ಭಾಷಣಗಳನ್ನು ಸರ್ಕಾರ 'ಅತಿ'ಯಾಗಿ ಅರ್ಥೈಸಿಕೊಂಡಿರಬಹುದು ಎಂದೂ ಹೇಳಿತ್ತು. ನ್ಯಾಯಾಲಯದ ಅವಲೋಕನಗಳು ಹಾಗೂ ಬಂಧನ ಮತ್ತು ಬಿಡುಗಡೆಯ ಸ್ವೇಚ್ಛೆಯ ಸ್ವರೂಪವನ್ನು ಗಮನಿಸಿದರೆ, ಇಡೀ ಪ್ರಕರಣವನ್ನು ಅತ್ಯಂತ ದುರ್ಬಲ ತಳಹದಿಯಲ್ಲಿ ಕಟ್ಟಿರುವಂತಿದೆ. ವ್ಯಕ್ತಿಯೊಬ್ಬರನ್ನು ಆರು ತಿಂಗಳ ಕಾಲ ಬಂಧನದಲ್ಲಿಡುವುದಕ್ಕೆ ಹಾಗೂ ಯಾವುದೇ ವಿಶ್ವಾಸಾರ್ಹ ವಿವರಣೆಯಿಲ್ಲದೆ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಅವಕಾಶ ಕಲ್ಪಿಸುತ್ತದೆ ಎನ್ನುವುದು ನಾಗರಿಕರಿಗೆ ಆತಂಕಕಾರಿ ಸಂದೇಶವನ್ನು ರವಾನಿಸುವಂತಿದೆ. ಆರೋಪಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಲು ನ್ಯಾಯಾಲಯ ಅಥವಾ ಆರೋಪಿಗೆ ಅವಕಾಶವನ್ನೇ ಕೊಡದೆ ಬಹಳ ಸುಲಭವಾಗಿ ಬಂಧಿಸಬಹುದು ಮತ್ತು ಬಿಡುಗಡೆ ಮಾಡಬಹುದು ಎನ್ನುವುದನ್ನು ಈ ಪ್ರಕರಣ ಬಹಿರಂಗಪಡಿಸುವಂತಿದೆ. ನಾಗರಿಕನೊಬ್ಬನ ಜೀವನ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳನ್ನು ಒಳಗೊಂಡಿದ್ದ ಈ ಪ್ರಕರಣದಲ್ಲಿನ ಸುದೀರ್ಘ ವಿಚಾರಣೆಗಳು ನ್ಯಾಯವನ್ನು ಮುಂದೂಡಿದವು ಎನ್ನುವುದು ಗಮನಿಸಬೇಕಾದ ಸಂಗತಿ. ವಾಂಗ್ಚುಕ್ ಅವರ ಬಿಡುಗಡೆಯು ಪ್ರಕರಣವನ್ನು ಕೊನೆಗೊಳಿಸುವುದಿಲ್ಲ ಹಾಗೂ ಈ ಪ್ರಕರಣಕ್ಕೆ ಮೂಲವಾಗಿರುವ ಸಮಸ್ಯೆಗಳನ್ನು ಅಪ್ರಸ್ತುತಗೊಳಿಸುವುದಿಲ್ಲ. ಕೋರ್ಟ್ ಮುಂದಿರುವ ಅರ್ಜಿ ತಾಂತ್ರಿಕವಾಗಿ ನಿಷ್ಪ್ರಯೋಜಕವಾಗಿದ್ದರೂ, ಪ್ರಕರಣ ಇನ್ನೂ ಇತ್ಯರ್ಥವಾಗಿಲ್ಲ. ಬಂಧಿತರನ್ನು ಬಿಡುಗಡೆ ಮಾಡುವುದರಿಂದ ಅಕ್ರಮ ಬಂಧನದ ಪ್ರಕರಣ ತನ್ನಷ್ಟಕ್ಕೆ ಕೊನೆಗೊಳ್ಳುವುದಿಲ್ಲ ಎಂದು ಕೋರ್ಟ್ ಈ ಹಿಂದಿನ ತೀರ್ಪುಗಳಲ್ಲಿ ಹೇಳಿದೆ ಹಾಗೂ ಸಂತ್ರಸ್ತರಿಗೆ ಪರಿಹಾರವನ್ನು ನೀಡುವಂತೆ ಆದೇಶಿಸಿದೆ. ಪ್ರಸಕ್ತ ಪ್ರಕರಣದಲ್ಲಿ ವಾಂಗ್ಚುಕ್ ಅವರ ಬಂಧನವನ್ನು ನ್ಯಾಯಾಂಗದ ಸ್ಪಷ್ಟ ಪರಿಭಾಷೆಯಲ್ಲಿ ವ್ಯಾಖ್ಯಾನಿಸಬೇಕಾಗಿದೆ. ಈ ಪ್ರಕರಣದ ಆಧಾರದಲ್ಲಿ, ಕಾನೂನುಬಾಹಿರ ಬಂಧನಗಳ ವಿರುದ್ಧ ರಕ್ಷಣೆಯನ್ನು ಖಚಿತಪಡಿಸುವುದು ಹಾಗೂ ಕಾನೂನು ಪರಿಶೀಲನೆಗಳಿಂದ ನುಣುಚಿಕೊಳ್ಳಲು ಪ್ರಯತ್ನಿಸುವ ಪ್ರಕ್ರಿಯೆಗಳನ್ನು ಪ್ರಾರಂಭಿಸುವುದರಿಂದ ಸರ್ಕಾರವನ್ನು ತಡೆಯುವುದರ ಬಗ್ಗೆ ಸುಪ್ರೀಂ ಕೋರ್ಟ್ ಗಮನಹರಿಸಬಹುದಾಗಿದೆ.

# ರಾಮಾಯಣ



## ಸ್ವಯಂ ಪ್ರಭೆಯ ಗುಹೆಗೆ ಅಂಗದಾದಿಗಳ ಪ್ರವೇಶ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಮಹಾ ಗಭೀರವಾದ ಆ ಬಿಲವನ್ನು ಹೊಕ್ಕು ದೇವೇಂದ್ರನ ಅರಮನೆಗಿಂತಲೂ ಅತಿರಮ್ಯವೂ ಮನೋಹರವೂ ಆದ ಆ ಬಿಲದ್ವಾರವನ್ನು ಕಂಡರು. ಆಗ ಪರ್ವತದ ಶಿಖರಕ್ಕೆ ಸಮಾನವಾದ ಶರೀರವುಳ್ಳ ಹನುಮಂತನು ಸುವರ್ಣದಂತೆ ತನುಕಾಂತಿಯುಳ್ಳ ಮಿಕ್ಕ ಕಪಿನಾಯಕರನ್ನು ಕರೆದು ಎಲೈ ಕಪಿನಾಯಕರುಗಳಿರಾ, ನಾವೆಲ್ಲರೂ ತೆಂಕಣದಿಕ್ಕಿಗೆ ಬಂದು ಅನೇಕ ಪರ್ವತಗಳಲ್ಲಿ ತಿರುಗಿ ಬಹು ಪ್ರಯಾಸದಿಂದ ಹುಡುಕಿದರೂ ಸೀತಾದೇವಿಯನ್ನು ಕಾಣದೆ ಹೋದೆವು. ಈ ಬಿಲದಿಂದ ನೆನೆದ ಗರಿಯುಳ್ಳ ಹಂಸಪಕ್ಷಿ ಮೊದಲಾದವುಗಳು ಬರುತ್ತಿವೆ. ಈ ಬಿಲದಲ್ಲಿ ಅವಶ್ಯವಾಗಿ ಒಂದು ಸರೋವರವಾದರೂ ದೊಡ್ಡ ಮಡುವಾದರೂ ಇರಬೇಕು. ನಾವು ಈ ಬಿಲವನ್ನು ಪ್ರವೇಶಿಸಿ ನಮ್ಮ ನೀರಡಿಕೆಯನ್ನು ಪರಿಹರಿಸಿಕೊಂಡು ಸೀತಾದೇವಿಯನ್ನು ಅರಸಿಕೊಂಡು ಬರೋಣ. ಎಂದು ನುಡಿದನು. ಆ ಬಳಿಕ ಕಪಿನಾಯಕರು ಆತನನ್ನು ಕೂಡಿಕೊಂಡು ಚಂದ್ರಸೂರ್ಯರ ಪ್ರಕಾಶವಿಲ್ಲದೆ ಭಯಂಕರವಾಗಿದ್ದ ಆ ಬಿಲವನ್ನು ಹೊಕ್ಕರು. ಅಲ್ಲಿಂದ ಸಿಂಹಶಾರ್ದೂಲಾದಿಮೃಗಗಳೂ ಪಕ್ಷಿಗಳೂ ಹೊರಬರುತ್ತಿರುವುದನ್ನು ಕಂಡರು. ಅಂಧಕಾರದಿಂದ ಒಬ್ಬರನ್ನೊಬ್ಬರು ಕಾಣದೆ ಪರಸ್ಪರರ ಕೈಗಳನ್ನು ಹಿಡಿದುಕೊಂಡು ಕತ್ತಲೆಯಲ್ಲಿಯೇ ಒಳಗೆ ಹೋದರು. ಆ ಕಪಿನಾಯಕರು ಹಸಿವು ಬಾಯರಿಕೆಗಳಿಂದ ಬಳಲಿ ನೀರು ಸಿಕ್ಕೀತೆಂಬ ಪ್ರತ್ಯಾಸೆಯಿಂದ ಹೀಗೆಯೇ ಹೋಗುತ್ತಿರಲು ಅತ್ಯಂತ ಪ್ರಕಾಶಮಾನವಾದ ಒಂದು ಪ್ರದೇಶವನ್ನು ಕಂಡರು. ಅಲ್ಲಿ ಸಾಲ ತಾಲ ತಮಾಲ ಚಂಪಕಾದಿ ವಿವಿಧ ವೃಕ್ಷಗಳು ಹೂಗಳಿಂದ ಶೋಭಿಸುತ್ತಿದ್ದವು. ನಾನಾ ಬಗೆಯ ಬಳ್ಳಿಗಳು ಚಿಗುರುಗಳಿಂದ ವಿರಾಜಿಸುತ್ತಿದ್ದವು. ವಜ್ರವೈಡೂರ್ಯಾದಿ ಮಣಿಗಳಿಂದ ಕಟ್ಟಿದ ಕಟ್ಟೆಗಳೂ ಜಗುಲಿಗಳೂ ಅಂದವಾಗಿ ಬೆಳಗುತ್ತಿದ್ದವು. ಶುಭ್ರಜಲದಿಂದ ತುಂಬಿದ ಸರೋವರಗಳು ತಾವರೆಯ ಗಿಡಗಳಿಂದ ಮನೋಹರವಾಗಿ ಒಪ್ಪುತ್ತಿದ್ದವು. ಮರಗಳಲ್ಲಿ ರಸಮಯ ವಾದ ಹಣ್ಣುಗಳು ತುಂಬಿದ್ದವು. ಎಲ್ಲೆಲ್ಲಿಯೂ ವಿವಿಧ ವರ್ಣದ ವಸ್ತ್ರಗಳೂ ಶಲ್ಯಗಳೂ ಕಂಬಳಿಗಳೂ ತೂಗುಹಾಕಲ್ಪಟ್ಟಿದ್ದವು. ಕಪಿಗಳು ಅವುಗಳನ್ನು ನೋಡುತ್ತ ಆಶ್ಚರ್ಯಚಕಿತರಾಗಿ ಮುಂದೆ ಹೋಗುತ್ತಿರಲು ಸ್ವಲ್ಪದೂರದಲ್ಲಿ ಕೃಷ್ಣಾಜಿನವನ್ನುಟ್ಟು ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಒಬ್ಬ ತಪಸ್ವಿನಿಯು ಕಾಣಿಸಿದಳು. ವಾನರರೆಲ್ಲರೂ ಆಶ್ಚರ್ಯದಿಂದ ಅವಳ ಬಳಿಗೆ ಹೋಗಿ ನಿಂತುಕೊಳ್ಳಲು, ಹನುಮಂತನು ಆ ತಪಸ್ವಿನಿಯನ್ನು ಕುರಿತು ನೀನು ಯಾರು ಈ ಗುಹೆ ಯಾರದು ಎಂಬುದಾಗಿ ಕೈಮುಗಿದುಕೊಂಡು ವಿನಯದಿಂದ ಪ್ರಶ್ನೆ ಮಾಡಿದನು.

### ಸ್ವಯಂ ಪ್ರಭೆಯು ಆಂಜನೇಯಾದಿಗಳಿಗೆ ಮಾಡಿದ ಆತಿಥ್ಯ

ಅಲ್ಲಿ ಕೃಷ್ಣಾಜಿನವನ್ನು ಹೊದ್ದು ಆಹಾರನಿಯಮದಿಂದ ತಪಸ್ಸನ್ನು ಮಾಡಿಕೊಂಡಿದ್ದ ಸ್ವಯಂ ಪ್ರಭೆಯೆಂಬ ಆ ಸ್ತ್ರೀಯನ್ನು ಕುರಿತು ಹನುಮಂತನು ಪುನಃ ಹೀಗೆಂದನು: ಮಹಾತ್ಮಳೆ, ನಾನೂ ಈ ಕಪಿನಾಯಕರೂ ಹಸಿವು ತೃಷೆಗಳಿಂದ ಕಂಗೆಟ್ಟು ಈ ಬಿಲವನ್ನು ಪ್ರವೇಶಿಸಿದೆವು. ಈಗ ನಿನ್ನ ಸನ್ನಿಧಾನದಲ್ಲಿರುವ ಅತ್ಯದ್ಭುತವಾದ ಭೋಗವಸ್ತುಗಳನ್ನು ಕಂಡು ವಿಸ್ಮಿತರಾಗಿದ್ದೇವೆ. ಈ ಸ್ವಯಂಪ್ರಕಾಶದೇಶದಲ್ಲಿ ಬಾಲಸೂರ್ಯನ ಕಾಂತಿಯಂತೆ ಕಾಂತಿಯುಳ್ಳ ಸುವರ್ಣ ಮಯವಾದ ವೃಕ್ಷಗಳಿವೆ. ಈ ವನದಲ್ಲಿ ರಮಣೀಯವಾದ ಕಂದ ಮೂಲ ಫಲಗಳಿವೆ. ಎಲ್ಲಿ ನೋಡಿದರೂ ರಜತಮಯವಾದ ಮನೆಗಳೂ ಸುವರ್ಣಮಯವಾದ ವಿಮಾನಗಳೂ ಅಪರಂಜಿಯಲ್ಲಿ ಮಾಡಿದ ಗವಾಕ್ಷಗಳೂ ಇರುವ ಈ ಅರಮನೆಯ ಬಾಗಿಲುಗಳಲ್ಲಿ ಕುಸುಮಿತವಾದ ಪರಿಮಳವುಳ್ಳ ಪುಷ್ಪಗಳಿಂದಲೂ ಪಕ್ವವಾದ ಫಲಗಳಿಂದಲೂ ಇಟ್ಟಣಿಸಿದ ಸುವರ್ಣಮಯವಾದ ವೃಕ್ಷಗಳಿವೆ. ನಿರ್ಮಲೋದಕವುಳ್ಳ ಈ ಕೊಳಗಳಲ್ಲಿ ಸುವರ್ಣಮಯವಾದ ಕಮಲಗಳಿರುವುವಲ್ಲದೆ ಸುವರ್ಣ ವರ್ಣದ ಆಮೆಗಳೂ ಮೀನುಗಳೂ ಸಂಚರಿಸುತ್ತಿವೆ.

ಮುಂದುವರಿಯುವುದು...

# ಹಸಿರು ಕನಸಿಗೆ ಹಸಿರು ಹೆಜ್ಜೆ

## ಮಲೆನಾಡಿನಲ್ಲಿ ಲಕ್ಷ ವೃಕ್ಷ ಅಭಿಯಾನಕ್ಕೆ ವೇಗ

ಮಲೆನಾಡಿನ ಸಾಂಸ್ಕೃತಿಕ, ಪರಿಸರ ಮತ್ತು ನೀರಿನ ಮೂಲಗಳನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ಕರ್ನಾಟಕದ ಉದ್ದಗಲಕ್ಕೂ ಹಸಿರು ಫೌಂಡೇಶನ್ ಸಂಸ್ಥೆ ವತಿಯಿಂದ ನಿರಂತರ ಸಮಾಜಮುಖಿ ಕಾರ್ಯ ನೆಡಸಲು ಯೋಜನೆ ರೂಪಿಸಿಕೊಳ್ಳಲಾಗಿದೆ.

**ಲಕ್ಷ ವೃಕ್ಷ ಅಭಿಯಾನ:** ಪರಿಸರ ಸಂರಕ್ಷಣೆ ಹಾಗೂ ಕಾಳಜಿಗಾಗಿ ಹುಟ್ಟಿಕೊಂಡಿದ್ದ ಹಸಿರು ಫೌಂಡೇಶನ್ (ರಿ)ಸಂಸ್ಥೆ ರತನ್ ದೇವ್ ಊರುಬಗೆ ನೇತೃತ್ವದಲ್ಲಿ ನೂರಾರು ಯುವಕರ ತಂಡ ಸೇರಿ ಸಂಸ್ಥೆ ಕಟ್ಟಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವೆಂದುಕೊಂಡು ಜನಸಾಮಾನ್ಯರಿಗೂ ತಿಳಿಸುತ್ತಾ ತಾವು ಕಾರ್ಯರೂಪಕ್ಕೆ ತರುವಲ್ಲಿಯಶಸ್ವಿಯಾಗಿದ್ದಾರೆ. ಮೊದಲಿಗೆ ಮಲೆನಾಡಿನ ಭಾಗಗಳಲ್ಲಿ ಲಕ್ಷವೃಕ್ಷ ಅಭಿಯಾನ ಹಮ್ಮಿಕೊಂಡು ಶಾಲೆ ಕಾಲೇಜುಗಳಲ್ಲಿ ಪ್ರವಾಸಿ ತಾಣಗಳಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಮುಖಾಂತರ ಸಸಿ ನೆಟ್ಟು ಯಶಸ್ವಿಯಾಯಿತು.

**ಬೀಜ ಬಿತ್ತನೆ ಕಾರ್ಯಕ್ರಮಗಳು:** ಪಶ್ಚಿಮ ಘಟ್ಟಗಳಲ್ಲಿ ಮೂಲ ಸಮಸ್ಯೆ ಕಾಡು ಪ್ರಾಣಿಗಳು, ಮಾನವ ಸಂಘರ್ಷ ಇದನ್ನು ಕಡಿಮೆ ಮಾಡಲು ಅರಣ್ಯ ಇಲಾಖೆ ಪ್ರಯತ್ನ ಪಟ್ಟರು ಯಾವುದೇ ಪ್ರಯೋಜನವಿಲ್ಲವೆಂದು ಅರಿತು ಕಾಡು ಪ್ರಾಣಿಗಳ ಆಹಾರ ಉಧಾಹರಣೆ ಆನೆಗೆ ಹಲಸು ಬೈನೆ ಬಿದಿರು ಹೀಗೆ ಅವುಗಳ ಆಹಾರ ಬೆಳೆ ಬೆಳೆಯಲು ಹಲಸು ಹಾಗೂ ಬೈನೆ ಬೀಜ ಬಿತ್ತನೆ ಕಾರ್ಯವನ್ನು ಪಶ್ಚಿಮ ಘಟ್ಟಗಳ ಕರ್ನಾರ್ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾಯಿತು. ಬಿದಿರು ನಾಟಿ ಕಾರ್ಯಕ್ರಮ, ವಿವಿಧ ಜಾತಿಯ ಕಾಡು ಹಣ್ಣುಗಳ ಬೀಜಗಳನ್ನು ಬಿತ್ತನೆ ಮಾಡಲಾಯಿತು.

**ಸ್ವಚ್ಛತೆಗೆ ಆಧ್ಯತೆ:** ಮುಖ್ಯವಾಗಿ ಪರಿಸರ ಸಂರಕ್ಷಣೆಯಾಗಬೇಕೆಂದರೇ ಸ್ವಚ್ಛತೆ ಕೂಡ ಮುಖ್ಯವಾಗುತ್ತದೆ. ಪ್ಲಾಸ್ಟಿಕ್ ನಿಯಂತ್ರಣ ಮುಖ್ಯ ನಮ್ಮ ಪ್ರಧಾನ ಮಂತ್ರಿಗಳು ಕೂಡ ಪ್ಲಾಸ್ಟಿಕ್ ನಿಯಂತ್ರಣಕ್ಕಾಗಿ 2025-26ನೇ ಇಸವಿಯ ಜೂನ್ 5ರಂದು ಪರಿಸರ ದಿನಾಚರಣೆಯಂದು ಘೋಷಿಸಿದರು ಅದರ ಮುಖೇನ ಹಸಿರು ಫೌಂಡೇಶನ್ ನಿರಂತರವಾಗಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ ಬರುತ್ತಿದೆ. ಮುಖ್ಯವಾಗಿಮಲೆನಾಡಿನ ಪ್ರವಾಸಿ ತಾಣಗಳು ಎತ್ತಿನ ಭುಜ, ಚಾರ್ಮಾಡಿ ಘಾಟ್, ಮೈದಾಡಿ, ಬೆಟ್ಟದ ಭೈರವೇಶ್ವರ ಹೀಗೆ ಅನೇಕ ಕಡೆಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಯಶಸ್ವಿಯಾಗಿ ಮಾಡಿ ಮುಗಿಸಿದೆ.

**ಪರಿಸರ ಪೂರಕ ವಿಶೇಷ ಕಾರ್ಯಕ್ರಮಗಳು:** ಮುಖ್ಯವಾಗಿ ಗಣೇಶ ಚತುರ್ಥಿ, ದೀಪಾವಳಿ ಹಬ್ಬಗಳಲ್ಲಿ ಸಾಕಷ್ಟು ಪರಿಸರ ಮಾಲಿನ್ಯವಾಗುತ್ತದೆ ಎಂದು ಎಲ್ಲರಿಗೂ ತಿಳಿದಿದೆ, ಅದನ್ನ ತಡೆಗಟ್ಟಲು ಗಣೇಶ ಚತುರ್ಥಿಯಲ್ಲಿ ವಿದ್ಯಾರ್ಥಿಗಳಿಗೆ ರಾಸಾಯನಿಕ ರಹಿತ ಕೇವಲ ಮಣ್ಣಿನ ಗಣಪತಿ ಬಿಡಿಸಿ ಬಹುಮಾನ ಗೆಲ್ಲಿರಿ ಕಾರ್ಯಕ್ರಮಗಳು. ದೀಪಾವಳಿ ಹಬ್ಬದಲ್ಲಿ ಹಸಿರು ಪಟಾಕಿಗಳನ್ನು ಬಳಸುವಂತೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತ ಬರುತ್ತಿದೆ.

ಸಾಮಾನ್ಯವಾಗಿ ಪಾದಯಾತ್ರೆ ಮಾಡುವ ಜನರು ಎಲ್ಲೆಂದರಲ್ಲಿ ಪ್ಲಾಸ್ಟಿಕ್

ಉದಯವಾಹಿನಿ ಚಿತ್ರ




ತ್ಯಾಜ್ಯಗಳನ್ನು ಎಸೆಯುತ್ತಾರೆ ಇದನ್ನು ತಡೆಗಟ್ಟಲು ಮುಖ್ಯವಾಗಿ ಹೈವೇ ರಸ್ತೆಗಳಲ್ಲಿ ಚೀಲಗಳನ್ನು ಇರಿಸಿ ಕಸ ಎಲ್ಲೆಂದರಲ್ಲಿ ಎಸೆಯುವುದನ್ನು ತಪ್ಪಿಸುವ ಕಾರ್ಯಗಳು ಮಾಡುತ್ತ ಬರುತ್ತಿದೆ.

**ನದಿ ಮೂಲಗಳ ಸಂರಕ್ಷಣೆ:** ಮಲೆನಾಡಿನಲ್ಲಿ ಹುಟ್ಟಿ ಬೆಳೆದು ರಾಜ್ಯದ ಕೃಷಿ ಭೂಮಿ ಹಾಗೂ ಜೀವ ಸಂಕುಲದ ಜೀವನಾಡಿಯಾಗಿರುವ ನದಿಗಳ ಮೂಲ ಉಳಿಸುವ ನಿಟ್ಟಿನಲ್ಲಿ ಜನ ಜಾಗೃತಿ ಅಭಿಯಾನ ಹಾಗೂ ಬೈಕ್ ಜಾಥಾಗಳು, ಹಮ್ಮಿಕೊಳ್ಳಲಾಗುತ್ತಿದೆ.

**ಶಾಲೆ ಕಾಲೇಜುಗಳ ಸ್ವಚ್ಛತಾ ಕಾರ್ಯಕ್ರಮ:** ಮುಖ್ಯವಾಗಿ ಶಾಲೆ ಕಾಲೇಜುಗಳಲ್ಲಿ ಸ್ವಚ್ಛತೆಗೆ ಆಧ್ಯತೆ ನೀಡಿದರೆ ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ತಮ್ಮ ಸುತ್ತ ಮುತ್ತಲಿನ ಪರಿಸರ ಸ್ವಚ್ಛವಾಗಿ ಇಟ್ಟುಕೊಳ್ಳುವರು ಜೊತೆಗೆ ಬೇರೆಯವರಿಗೂ ಮಾರ್ಗದರ್ಶನ ಮಾಡುವರು ಆ ಕಾರಣದಿಂದ ಶಾಲಾ ಕಾಲೇಜುಗಳ ಸುತ್ತ ಮುತ್ತ ಸ್ವಚ್ಛತಾ ಕಾರ್ಯಕ್ರಮ ಮಾಡುತ್ತ ಬರುತ್ತಿದ್ದಾರೆ.

**ಪರಿಸರ ಪ್ರೇಮ ಬೆಳೆಸಿ**

**ಪರಿಸರ ಜಾಗೃತಿ ಹಾಗೂ ಪ್ಲಾಸ್ಟಿಕ್ ನಿಯಂತ್ರಣ ಜಾಗೃತಿ ಅಭಿಯಾನಗಳು ಮತ್ತು ಜಾಥಾಗಳು ಚಿಕ್ಕಮಗಳೂರು, ಹಾಸನ, ಮಂಗಳೂರು ಶಿವಮೊಗ್ಗ ಜಿಲ್ಲೆಗಳಲ್ಲಿ ವಿಶೇಷವಾಗಿ ಪರಿಸರ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ನಿಯಂತ್ರಣ ಕೂಡ ಜಾಗೃತಿ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳು, ಅಧಿಕಾರಿಗಳು ಜನಸಾಮಾನ್ಯರು, ಎಲ್ಲರಲ್ಲೂ ಪರಿಸರ ಪ್ರೇಮ ಬೆಳೆಸಿ ಸಂರಕ್ಷಣೆಯಲ್ಲಿ ತೊಡಗಿಸಿಕೊಕೊಳ್ಳುವಂತೆ ನೋಡಿ ಕೊಳ್ಳಲಾಗುತ್ತಿದೆ. ಪ್ಲಾಸ್ಟಿಕ್ ಮಿತ ಬಳಕೆ ಹಾಗೂ ದಿನದಿಂದ ದಿನಕ್ಕೆ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಕೂಡ ಹಸಿರು ಫೌಂಡೇಶನ್ ಟೊಂಕಕಟ್ಟಿ ನಿಂತಿದೆ...**

**ನರ್ಸರಿ:** ಮುಖ್ಯವಾಗಿ ಮಲೆನಾಡಿನ ಪ್ರದೇಶವನ್ನು ಹೊರತು ಪಡಿಸಿ ಹಳೆ ಮೈಸೂರು ಪ್ರಾಂತ್ಯದ ಬಯಲು ಸೀಮೆ ಹಾಗೂ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಬೆಳೆಯುವ ಸಸಿಗಳು ಹಾಗೂ ಮಲೆನಾಡಿನಲ್ಲಿ ಬೆಳೆಯುವ ಸಸಿಗಳನ್ನು ಹಸಿರು ಫೌಂಡೇಶನ್ ಪಾಲಿ ಹೌಸ್ ನರ್ಸರಿ ಮುಖಾಂತರ ಬೆಳೆದು ಎಲ್ಲಾ ಕಡೆ ಹಸಿರು ಫೌಂಡೇಶನ್ ವಿಸ್ತರಿಸಿ ಕರ್ನಾಟಕದ ಉದ್ದಗಲಕ್ಕೂ ಹಸಿರು ಉಳಿಸಿ ಬೆಳೆಸುವ ಕಾರ್ಯರೂಪಕ್ಕೆ ತರಲು ಶ್ರಮವಹಿಸಲಾಗುತ್ತಿದೆ.

ಫೌಂಡೇಶನ್ ನಿರಂತರ ಕಾರ್ಯಗಳಿಗೆ ಪರಿಸರಸಾಕ್ತಾರ ಸಹಕಾರ, ದಾನಿಗಳ ಪ್ರೋತ್ಸಾಹ ಕೂಡ ಮುಖ್ಯವಾಗುತ್ತದೆ. ಲಕ್ಷಾಂತರ ಸಸಿಗಳನ್ನು ಬೆಳೆಯಲು ಪೋಷಿಸಲು ಸಾಕಷ್ಟು ಆರ್ಥಿಕ ಸಹಕಾರದ ನೆರವು ಕೂಡ ಮುಖ್ಯವಾಗಿದೆ. ಎಲ್ಲರ ಸಹಕಾರದಿಂದ ಕರ್ನಾಟಕದ ಪರಿಸರವು ಹಚ್ಚ ಹಸಿರನಿಂದ ಕಂಗೊಳಿಸಲು ಸಾಧ್ಯ.

**ಧನ್ಯವಾದಗಳೊಂದಿಗೆ**
**ಟೀಮ್ ಹಸಿರು ಫೌಂಡೇಶನ್.**


# ಮೆನಿಂಜೈಟಿಸ್ ಸೋಂಕು ಎಂದರೇನು ಯಾವಾಗ ವೈದ್ಯರನ್ನು ಸಂಪರ್ಕಿಸಬೇಕು?

ಮೆನಿಂಜೈಟಿಸ್ ಅನ್ನು ಅತ್ಯಂತ ಗಂಭೀರ. ಸಂಭಾವ್ಯವಾಗಿ ಮಾರಣಾಂತಿಕ ಕಾಯಿಲೆ ಎಂದು ಪರಿಗಣಿಸಲಾಗುತ್ತದೆ. ಯುಕೆಯ ಕೆಂಟ್‌ನಲ್ಲಿ ಆಕ್ರಮಣಕಾರಿ ಮೆನಿಂಜೈಟಿಸ್‌ನಲ್ಲಿ 18 ವರ್ಷದ ಹಾಗೂ 21 ವರ್ಷದ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿದ್ದು, 11 ಮಂದಿ ಆಸ್ಪತ್ರೆಗೆ ದಾಲಾಗಿದ್ದಾರೆ ಎನ್ನುತ್ತಿದೆ ಯುಕೆ ಹೆಲ್ತ್ ಸೆಕ್ಯುರಿಟಿ ಏಜೆನ್ಸಿ. ಎಂದು ದೃಢಪಡಿಸಲಾಗಿದೆ. ಹಾಗಾದ್ರೆ ಏನಿದು ಮೆನಿಂಜೈಟಿಸ್ ಸೋಂಕು, ಇದು ಎಷ್ಟು ಹಾನಿಕಾರಕ, ಇದರ ಲಕ್ಷಣಗಳು ಯಾವ ರೀತಿ ಇರುತ್ತವೆ ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

**ಮೆನಿಂಜೈಟಿಸ್ ಮತ್ತು ಆಕ್ರಮಣಕಾರಿ ಮೆನಿಂಜೈಟಿಸ್ ಎಂದರೇನು?**

ಮೆನಿಂಜೈಟಿಸ್ ಎನ್ನುವುದು ಮೆದುಳು, ಬೆನ್ನುಹುರಿಯನ್ನು ಸುತ್ತುವರೆದಿರುವ ರಕ್ಷಣಾತ್ಮಕ ಪೊರೆಗಳ ಸೋಂಕು. ಇದನ್ನು ಉರಿಯೂತ ಎಂದು ಕರೆಯಲಾಗುತ್ತದೆ. ಈ ಪೊರೆಗಳನ್ನು ಮೆನಿಂಜಸ್ ಎಂದು ಕರೆಯಲಾಗುತ್ತದೆ.

ಇದು ಯಾರ ಮೇಲೂ ಪರಿಣಾಮ ಬೀರಬಹುದು ಆದರೆ ಶಿಶುಗಳು, ಚಿಕ್ಕ ಮಕ್ಕಳು, ಹದಿಹರೆಯದವರು ಮತ್ತು ದುರ್ಬಲ ರೋಗನಿರೋಧಕ ಶಕ್ತಿ ಇರುವವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತ್ವರಿತವಾಗಿ ಚಿಕಿತ್ಸೆ ನೀಡದಿದ್ದರೆ ಇದು ತುಂಬಾ ಗಂಭೀರವಾಗಬಹುದು ಎನ್ನುತ್ತಾರೆ ಹೆಣ್ಣೂರು ರಸ್ತೆಯ ಸ್ಪರ್ಶ ಆಸ್ಪತ್ರೆಯ ಡಾ. ಮನೋಹರ್ ಕೆ ಎನ್.



**ಮೆನಿಂಜೈಟಿಸ್ ಮುಖ್ಯವಾಗಿ ಬ್ಯಾಕ್ಟೀರಿಯಾ ಅಥವಾ ವೈರಲ್ ಕಾರಣಗಳಿಂದ ಮೆದುಳು ಬೆನ್ನುಹುರಿಯನ್ನು ಸುತ್ತುವರೆದಿರುವ ಪೊರೆಗಳ ಉರಿಯೂತಕ್ಕೆ ಕಾರಣವಾಗುತ್ತದೆ. ಇದು ಸಾಮಾನ್ಯವಾಗಿ ಉಸಿರಾಟದ ಹನಿಗಳು, ನಿಕಟ ಸಂಪರ್ಕಗಳ ಮೂಲಕ ಹರಡುತ್ತದೆ, ಇದು ಏಕಾಏಕಿ ಸಮಯದಲ್ಲಿ ಜನದಟ್ಟಣೆಯ ಪರಿಸರವನ್ನು ದುರ್ಬಲಗೊಳಿಸುತ್ತದೆ.**
**-ಡಾ. ಮನೋಹರ್ ಕೆ.ಎನ್**

# ಬೇಳೆ ಒಬ್ಬಟ್ಟು ಒಮ್ಮೆ ಟ್ರೈ ಮಾಡಿ

ತೆಂಗಿನ ಕಾಯಿ ಹೋಳಿಗೆ, ತೊಗರಿಬೇಳೆ ಒಬ್ಬಟ್ಟು. ಕಡಲೆಬೇಳೆಯನ್ನ ಬಳಸಿಯೂ ಒಬ್ಬಟ್ಟು ಮಾಡ್ತಾರೆ ಇವತ್ತಿನ ನಮ್ಮ ರೆಸಿಪಿಯಲ್ಲಿ ಸುಲಭವಾಗಿ ಬೇಳೆ ಒಬ್ಬಟ್ಟು ಯಾವ ರೀತಿ ಮಾಡುವುದು ಎಂಬುದನ್ನು ತಿಳಿಸಿಕೊಡುತ್ತಿದ್ದೇವೆ. ಹಾಗಿದ್ರೆ ನೀವೂ ಕೂಡ ಹಬ್ಬದ ದಿನ ನಿಮ್ಮ ಮನೆಯಲ್ಲಿ ಈ ರೆಸಿಪಿಯನ್ನು ಟ್ರೈ ಮಾಡಿ.

**ಬೇಗಾಗುವ ಸಾಮಾಗ್ರಿಗಳು:** ತೊಗರಿ ಬೇಳೆ 1/2 ಕೆಜಿ, ಚಿರೋಟಿ ರವೆ ಕಾಲು ಕಪ್, ಮೈದಾಹಿಟ್ಟು 2 ಬಟ್ಟಲು ಬೆಲ್ಲ 1/2 ಕೆಜಿ ಅಥವಾ ನಿಮಗೆ ಎಷ್ಟು ಸಿಹಿ ಬೇಕೋ ಅದಕ್ಕೆ ಅನುಗುಣವಾಗಿ ಬಳಸಿ ತೆಂಗಿನಕಾಯಿ ತುರಿ ಒಂದು ಬಟ್ಟಲು, ಏಲಕ್ಕಿ ಪುಡಿ ಸ್ವಲ್ಪ, ತುಪ್ಪ ಎರಡು ಚಮಚ, ಎಣ್ಣೆ 1 ಕಪ್, ಉಪ್ಪು 1 ಚಿಟಿಕೆ, ಅರಶಿಣ ಪುಡಿ 1 ಚಿಟಿಕೆ

**ಮಾಡುವ ವಿಧಾನ:** ಒಂದು ಪಾತ್ರೆಯಲ್ಲಿ ಮೈದಾಹಿಟ್ಟು, ಚಿರೋಟಿ ರವೆ, ಅರಿಶಿನ, ಒಂದು ಚಿಟಿಕೆ ಉಪ್ಪು ಮತ್ತು ತುಪ್ಪ ಹಾಕಿ ಅಗತ್ಯಕ್ಕೆ ತಕ್ಕಷ್ಟು ನೀರು ಹಾಕಿ ಚಪಾತಿ ಹಿಟ್ಟಿಗಿಂತ ತುಂಬಾ ಮೃದುವಾಗಿ ಕಲಸಿಕೊಳ್ಳಿ. ನಂತರ ಇದಕ್ಕೆ 1/2 ಕಪ್ ಎಣ್ಣೆ ಹಾಕಿ ಚೆನ್ನಾಗಿ ನಾದಿಕೊಂಡು 30 ನಿಮಿಷ ನೆನೆಯಲು ಬಿಡಿ. ಬೆಲ್ಲವನ್ನು ಪುಡಿ ಮಾಡಿಟ್ಟುಕೊಳ್ಳಿ. ಒಂದು ಪಾತ್ರೆಯಲ್ಲಿ ತೊಗರಿಬೇಳೆ, ಚಿಟಿಕೆ ಅರಿಶಿನ ಮತ್ತು ಒಂದು ಚಮಚ ಎಣ್ಣೆ ಹಾಗೂ ಅಗತ್ಯಕ್ಕೆ ತಕ್ಕಷ್ಟು ನೀರು ಹಾಕಿ ಬೇಯಿಸಿಕೊಳ್ಳಿ.

ಬೇಳೆ ನುಣ್ಣಗಾಗುವಂತೆ ಬೇಯಿಸಬೇಡಿ. ಸ್ವಲ್ಪ ಗಟ್ಟಿಯಿರುವಾಗಲೇ ಇದಕ್ಕೆ ಪುಡಿ ಮಾಡಿದ ಬೆಲ್ಲ, ತೆಂಗಿನಕಾಯಿ ತುರಿ, ಮತ್ತು ಏಲಕ್ಕಿ ಪುಡಿ ಹಾಕಿ ಮಿಕ್ಸ್ ಮಾಡಿ ಒಲೆಯಿಂದ ಇಳಿಸಿ.





ಈ ಮಿಶ್ರಣ ತಣ್ಣಗಾದ ನಂತರ ನುಣ್ಣಗೆ ರುಬ್ಬಿಕೊಳ್ಳಬೇಕು (ನೀರು ಸೇರಿಸಬಾರದು). ಹೀಗೆ ನುಣ್ಣಗೆ ರುಬ್ಬಿದ ಮಿಶ್ರಣವನ್ನ ಸಣ್ಣ ಸಣ್ಣ ಉಂಡೆಗಳಾಗಿ ಮಾಡಿಕೊಳ್ಳಿ.

**ಹೋಳಿಗೆ ಮಾಡುವುದು:** ಕಲಸಿಟ್ಟ ಮೈದಾ ಮಿಶ್ರಣವನ್ನು ತೆಗೆದುಕೊಂಡು ಮತ್ತೊಮ್ಮೆ ಚೆನ್ನಾಗಿ ನಾದಿಕೊಳ್ಳಿ.

ಒಂದು ಮಣೆ ಮೇಲೆ ಬಾಳೆ ಎಲೆ/ ಪ್ಲಾಸ್ಟಿಕ್ ಕವರ್ ಹಾಕಿ ಅದರ ಮೇಲೆ ಸ್ವಲ್ಪ ಎಣ್ಣೆ ಸವರಿ, ಸ್ವಲ್ಪ ಮೈದಾ ಮಿಶ್ರಣವನ್ನು ತೆಗೆದುಕೊಂಡು ಅದರ ಮೇಲೆ ತಟ್ಟಿಕೊಳ್ಳಿ.

ಇದರ ಮಧ್ಯೆ ಹೂರಣದ ಉಂಡೆಯನ್ನು ಇಟ್ಟು ಎಲ್ಲಾ ಬದಿಯಿಂದ ಮೇಲ್ಮುಖವಾಗಿ ಮೈದಾ ಹಿಟ್ಟಿನಿಂದ ಹೂರಣವನ್ನು ಮುಚ್ಚಿ.

ಹೂರಣವನ್ನು ಮುಚ್ಚಿದ ತುದಿಯನ್ನು ಕೆಳಭಾಗಕ್ಕೆ ತಿರುಗಿಸಿ ಕೈಗೆ ಎಣ್ಣೆ ಸವರಿಕೊಂಡು ಲಘುವಾಗಿ ತಟ್ಟಿಕೊಳ್ಳಿ.

ಒಬ್ಬಟ್ಟು ತಟ್ಟುವಾಗ ತೀರಾ ತೆಳ್ಳಗೆ ತಟ್ಟಿದರೆ ಬೇಯಿಸುವಾಗ ಮುರಿದು ಹೋಗುತ್ತದೆ. ಆದ್ದರಿಂದ ತೀರಾ ತೆಳ್ಳಗೂ ಅಲ್ಲದೆ ದಪ್ಪವೂ ಅಲ್ಲದೆ ಮಧ್ಯಮ ಗಾತ್ರದಲ್ಲಿ ತಟ್ಟಿಕೊಳ್ಳಿ.

ಒಲೆ ಮೇಲೆ ತವಾ ಇಟ್ಟು ಸ್ವಲ್ಪ ಎಣ್ಣೆ ಅಥವಾ ತುಪ್ಪ ಸವರಿ. ತವಾ ಬಿಸಿಯಾದ ನಂತರ ಅದರ ಮೇಲೆ ತಟ್ಟಿಕೊಂಡ ಒಬ್ಬಟ್ಟು ಹಾಕಿ ಎರಡೂ ಬದಿ ಹದವಾಗಿ ಬೇಯಿಸಿದ್ರೆ, ಬೇಳೆ ಒಬ್ಬಟ್ಟು ರೆಡಿ. ಇದನ್ನು ಬಿಸಿ ಇರುವಾಗಲೇ ತುಪ್ಪ, ಬಿಸಿ ಮಾಡಿದ ಹಾಲಿನೊಂದಿಗೆ ಸವಿಯಬಹುದು.

**ಸಕ್ಕರೆ ಬಳಸದೇ ಹಾಗೂ ಹಾಲನ್ನು ಕಡಿಮೆ ಬಳಕೆ ಮಾಡಿ ಚಹಾ ತಯಾರು ಮಾಡಿ ಕುಡಿಯಬೇಕು ಎನ್ನುವುದು ತಜ್ಞರ ಸಲಹೆ. ಆದರೆ ಸಕ್ಕರೆ ಬಳಸದೇ ಚಹಾ ಕಾಫಿ ಕುಡಿಯಲು ಹೆಚ್ಚಿನವರಿಗೆ ಮನಸ್ಸು ಒಪ್ಪಲ್ಲ. ಹೀಗಾಗಿ ಸಕ್ಕರೆ ಇಲ್ಲದೆ ನಿಮ್ಮ ಚಹಾವನ್ನು ಸಿಹಿಗೊಳಿಸಲು ಸುಲಭ ಮತ್ತು ಆರೋಗ್ಯಕರ ಮಾರ್ಗಗಳನ್ನು ಕಲಿಯಿರಿ. ಇದಕ್ಕಾಗಿ ಸ್ಟೀವಿಯಾ, ಜೇನುತುಪ್ಪ, ಬೆಲ್ಲದಂತಹ ಆರೋಗ್ಯಕರ ಆಯ್ಕೆಗಳು ಸುವಾಸನೆಯನ್ನು ಸೇರಿಸುತ್ತವೆ ಮತ್ತು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತವೆ.**

# ಸಕ್ಕರೆ ಬದಲು ಚಹಾವನ್ನು ಸಿಹಿಗೊಳಿಸಲು ಬಳಸಬಹುದಾದ ನೈಸರ್ಗಿಕ ಸಿಹಿಕಾರಕಗಳು

ಬೆಳಗ್ಗೆ ಎದ್ದ ಕೂಡಲೇ ಟೀ ಕಾಫಿ ಕುಡಿಯುವ ಅಭ್ಯಾಸ ಎಷ್ಟು ಜನರಿಗೆ ಇದೆ ಎಂದರೆ ಬಹುತೇಕ ಎಲ್ಲರೂ ಹೌದು ಎನ್ನುತ್ತಾರೆ. ಏಕೆಂದರೆ ನಮ್ಮಲ್ಲ ಈಗಾಗಲೇ ಬಹುತೇಕ ಜನರಿಗೆ ಬೆಳಗಿನ ಉಪಹಾರಕ್ಕೆ ಮುಂಚೆ ಒಂದು ಲೋಟ ಟೀ ಕಾಫಿ ಕುಡಿಯಬೇಕು ಎನ್ನುವ ಹವ್ಯಾಸ ರೂಢಿಯಾಗಿ ಬಿಟ್ಟಿದೆ. ಇನ್ನು ನಮ್ಮಲ್ಲಿ ಹೆಚ್ಚಿನವರು ಕಾಫಿ ಟೀ ತಯಾರು ಮಾಡುವ ಎಲ್ಲರೂ ಕೂಡ ಕಾಫಿ ಪುಡಿ ಅಥವಾ ಚಹಾಪುಡಿ ಹಾಕುವ ಮುಂಚೆಯೇ ಹಾಲು ಮತ್ತು ಸಕ್ಕರೆಯನ್ನು ಹಾಕಿರುತ್ತಾರೆ ಯಾಕೆಂದರೆ ಸಕ್ಕರೆ ಹಾಕದೆ ತಯಾರು ಮಾಡಿದ ಟೀ ಕಾಫಿ ಯಾರಿಗೂ ಇಷ್ಟವಾಗಲ್ಲ. ಆದರೆ ಆರೋಗ್ಯ ತಜ್ಞರು ಹೇಳುವ ಪ್ರಕಾರ ನಮ್ಮ ದೈನಂದಿನ ಆಹಾರ ಪದಾರ್ಥಗಳಲ್ಲಿ ಹಾಗೂ ದಿನನಿತ್ಯ ಸೇವಿಸುವ ಪಾನೀಯಗಳಲ್ಲಿ ( ಟೀ-ಕಾಫಿ) ಸಕ್ಕರೆ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡುತ್ತಾರೆ. National Institutes of Health ನಲ್ಲಿ ಹಂಚಿಕೊಂಡಿರುವ ಮಾಹಿತಿಯ ಪ್ರಕಾರ ಅತಿಯಾದ ಸಕ್ಕರೆ ಸೇವನೆಯು, ವಿಶೇಷವಾಗಿ ಸೇರಿಸಿದ ಸಕ್ಕರೆಗಳು, ಬೊಜ್ಜು, ಟೈಪ್ 2 ಮಧುಮೇಹ, ಹೃದಯರಕ್ತನಾಳದ ಕಾಯಿಲೆ ಮತ್ತು ಆಲ್ಕೊಹಾಲ್ಯುಕ್ತವಲ್ಲದ ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ.ಹೆಚ್ಚಿನ ಸಕ್ಕರೆ ಸೇವನೆಯು ದೀರ್ಘಕಾಲದ ಉರಿಯೂತ, ಮೆಟಾಬಾಲಿಕ್ ಸಿಂಡ್ರೋಮ್, ದಂತ ಕ್ಷಯವನ್ನು ಪ್ರೇರೇಪಿ ಸುತ್ತದೆ ಮತ್ತು ಅರಿವಿನ ಕುಸಿತ ಮತ್ತು ವ್ಯಸನದಂತಹ ನಡವಳಿಕೆಗಳಿಗೆ ಕಾರಣವಾಗಬಹುದಂತೆ!



ಹೆಚ್ಚುವರಿ ಸಕ್ಕರೆ ಸೇವನೆಯು ಅನಾರೋಗ್ಯಕರ ಮತ್ತು ತೂಕ ಹೆಚ್ಚಾಗಲು ಕಾರಣವಾಗಬಹುದು ಎನ್ನುವುದು ಈಗಾಗಲೇ ಹೆಚ್ಚಿನವರಿಗೆ ಈಗಾಗಲೇ ತಿಳಿದಿದೆ. ಹೀಗಾಗಿ ಆರೋಗ್ಯದ ಕಾರಣಗಳಿಗಾಗಿ ನೆಚ್ಚಿನ ಚಹಾ, ಕಾಫಿಯಯನ್ನು ಬಿಡಲು ಯೋಚಿಸುತ್ತಿದ್ದರೆ, ಚಿಂತಿಸ ಬೇಕಿಲ್ಲ. ಸಕ್ಕರೆ ಇಲ್ಲದೆ ಸುವಾಸನೆ ಮತ್ತು ಸಿಹಿ ಚಹಾವನ್ನು ತಯಾರಿಸಬಹುದು. ಇತ್ತೀಚಿನ ದಿನಗಳಲ್ಲಿ, ಜನರು ನೈಸರ್ಗಿಕ ಸುವಾಸನೆ ಮತ್ತು ಆರೋಗ್ಯಕರ ಆಯ್ಕೆಗಳತ್ತ ಹೆಚ್ಚು ತಿರುಗುತ್ತಿದ್ದಾರೆ ಮತ್ತು ಅದಕ್ಕಾಗಿಯೇ ಸಕ್ಕರೆಯ ಬದಲಿಗೆ ನೈಸರ್ಗಿಕ ಪದಾರ್ಥಗಳೊಂದಿಗೆ ಚಹಾವನ್ನು ಸಿಹಿಗೊಳಿಸುವುದು ಟ್ರೆಂಡಿಂಗ್ ಆಗಿದೆ. ಅದರಲ್ಲೂ ಸಕ್ಕರೆಯ ಬದಲಿಗೆ ನೈಸರ್ಗಿಕ ಪದಾರ್ಥಗಳನ್ನು ಬಳಸುವುದರಿಂದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ಆಯ್ಕೆ ಎನ್ನುವುದರಲ್ಲಿ ಎರಡ ಮಾತಿಲ್ಲ



**ಸಕ್ಕರೆಯ ಬದಲು ಸ್ಟೀವಿಯಾ ಬಳಸಿ:** ನೀವು ಆರೋಗ್ಯಕರ ಪರ್ಯಾಯವನ್ನು ಹುಡುಕುತ್ತಿದ್ದರೆ, ಸ್ಟೀವಿಯಾವನ್ನು ಪ್ರಯತ್ನಿಸಿ. ಇದು ಸಸ್ಯ ಆಧಾರಿತ ನೈಸರ್ಗಿಕ ಸಿಹಿಕಾರಕವಾಗಿದ್ದು ಅದು ತುಂಬಾ ಸಿಹಿಯಾಗಿರುತ್ತದೆ ಆದರೆ ಸಕ್ಕರೆಯನ್ನು ಹೆಚ್ಚಿಸುವುದಿಲ್ಲ. ಇದನ್ನು ಎಲೆ ಮತ್ತು ಪುಡಿ ರೂಪದಲ್ಲಿ ಬಳಸಬಹುದು. ಇಂದಿನ ದಿನಗಳಲ್ಲಿ ಸ್ಟೀವಿಯಾ ಸಕ್ಕರೆಗೆ ನೈಸರ್ಗಿಕ ಮತ್ತು ಆರೋಗ್ಯಕರ ಪರ್ಯಾಯವಾಗಿದ್ದು, ಇತ್ತೀಚಿನ ದಿನಗಳಲ್ಲಿ ತುಂಬಾನೇ ಜನಪ್ರಿಯತೆ ಪಡೆಯುತ್ತಿದೆ. ಹೀಗಾಗಿ ದೈನಂದಿನ ಟೀ ಕಾಫಿ ಅಥವಾ ಮನೆಯಲ್ಲಿ ಮಾಡುವಂತಹ ನೈಸರ್ಗಿಕ ಪಾನೀಯಗಳು, ಜ್ಯೂಸ್ ಗಳಿಗೆ ಸಕ್ಕರೆಯ ಬದಲು ಕಾಫಿ, ಚಹಾ, ಸಕ್ಕರೆಯ ಬದಲಾಗಿ ಸ್ಟೀವಿಯಾ ಪುಡಿ ಅಥವಾ ದ್ರವವನ್ನು ಬಳಸಬಹುದು.

health.clevelandclinic.org ನಲ್ಲಿ ನೀಡಲಾಗಿರುವ ವರದಿಯ ಪ್ರಕಾರ ಸ್ಟೀವಿಯಾ (ಸ್ಟೀವಿಯಾ ರೆಬೌಡಿಯಾನಾ) ನೈಸರ್ಗಿಕ, ಶೂನ್ಯ-ಕ್ಯಾಲೋರಿ ಸಿಹಿಕಾರಕವಾಗಿದ್ದು, ರಕ್ತದ ಗ್ಲೂಕೋಸ್ ನಿಯಂತ್ರಣದಲ್ಲಿ ಸುಧಾರಣೆ, ರಕ್ತದೊತ್ತಡವನ್ನು ಕಡಿಮೆ ಮಾಡುವುದು ಮತ್ತು ಉರಿ ಯೂತ ನಿವಾರಕ ಗುಣಲಕ್ಷಣಗಳನ್ನು ಒಳಗೊಂಡಂತೆ ಗಮನಾರ್ಹ ಚಯಾಪಚಯ ಪ್ರಯೋಜನಗಳನ್ನು ನೀಡುತ್ತದೆ. ಇದು ಬೊಜ್ಜು, ಮಧುಮೇಹವನ್ನು ನಿರ್ವಹಿಸಲು ಸುರಕ್ಷಿತ ಸಕ್ಕರೆ ಬದಲಿಯಾಗಿ ಕಾರ್ಯನಿರ್ವಹಿಸುತ್ತದೆ

**ತೆಂಗಿನಕಾಯಿ ಸಕ್ಕರೆ:** ತೆಂಗಿನಕಾಯಿಗಳು ನೈಸರ್ಗಿಕವಾಗಿ ಸಿಹಿಯಾಗಿರುತ್ತವೆ. ತೆಂಗಿನಕಾಯಿಯಿಂದ ತಯಾರಿಸಿದ ತೆಂಗಿನಕಾಯಿ ಸಕ್ಕರೆ ಉತ್ತಮ ಆಯ್ಕೆಯಾಗಿದೆ. ಇದರ ರುಚಿ ಸ್ವಲ್ಪ ಬೆಲ್ಲದಂತಿದ್ದು, ಚಹಾಕ್ಕೆ ವಿಶಿಷ್ಟವಾದ ಪರಿಮಳವನ್ನು ನೀಡುತ್ತದೆ.

ಇತ್ತೀಚಿನ ದಿನಗಳಲ್ಲಿ ಆರೋಗ್ಯ ಪ್ರಜ್ಞೆಯುಳ್ಳ ಗ್ರಾಹಕರು ಇದನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದಾರೆ.

**ಮಾಂಕ್ ಫ್ರೂಟ್:** ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮ, ಮಾರುಕಟ್ಟೆಯಲ್ಲಿ ಮಾಂಕ್ ಫ್ರೂಟ್ ಹೆಚ್ಚಿನ ಗಮನ ಸೆಳೆಯುತ್ತಿದೆ. ಇದು ಸಸ್ಯ ಆಧಾರಿತ ಸಿಹಿಕಾರಕವಾಗಿದ್ದು, ಸಕ್ಕರೆಗಿಂತ ಸಿಹಿಯಾಗಿರುತ್ತದೆ ಆದರೆ ದೇಹದ ಮೇಲೆ ಸೌಮ್ಯ ಪರಿಣಾಮ ಬೀರುತ್ತದೆ. ಇದನ್ನು ವ್ಯಾಪಕವಾಗಿ ಬಳಸಲಾಗುತ್ತದೆ, ವಿಶೇಷವಾಗಿ ವಿದೇಶಗಳಲ್ಲಿ ಇದರ ಬಳಕೆ ಹೆಚ್ಚಾಗಿದೆ. ಪ್ರಮುಖವಾಗಿ ಇದು ಸಕ್ಕರೆಯಂತೆಯೇ ರುಚಿಯನ್ನು ನೀಡುತ್ತದೆ. webmd.comನಲ್ಲಿ ಹಂಚಿಕೊಂಡಿರುವ ಮಾಹಿತಿಯ ಪ್ರಕಾರ, ಇದರಲ್ಲಿ ಮೋಗ್ರೊಸೈಡ್ಸ್ ಎಂಬ ಪ್ರಬಲ ಆಂಟಿ ಆಕ್ಸಿಡೆಂಟ್ ಅಂಶಗಳು ಕಂಡು ಬರುವುದರಿಂದ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು. ಪ್ರಮುಖವಾಗಿ ಇದನ್ನು ಚಹಾ, ಕಾಫಿ, ಬೇಕರಿ ಸಿಹಿ ತಿಂಡಿಗಳಲ್ಲಿ ಸಕ್ಕರೆಯ ಬದಲಿಗೆ ಬಳಸಬಹುದು. ಪ್ರಮುಖವಾಗಿ ಇದರಲ್ಲಿ ಕಂಡುಬರುವ ನೈಸರ್ಗಿಕ ಸಕ್ಕರೆಯಂಶವು, ರಕ್ತದಲ್ಲಿನ ಸಕ್ಕರೆಮಟ್ಟವನ್ನು ಏರಿಸುವುದಿಲ್ಲ ಎಂದು ಅಧ್ಯಯನಗಳು ಸೂಚಿಸುತ್ತವೆ.

**ಜೇನುತುಪ್ಪ:** ಸಕ್ಕರೆ ಇಲ್ಲದೆ ಚಹಾವನ್ನು ಸಿಹಿಗೊಳಿಸಲು ಜೇನುತುಪ್ಪವು ಜನಪ್ರಿಯ ಮತ್ತು ಆರೋಗ್ಯಕರ ನೈಸರ್ಗಿಕ ಪರ್ಯಾಯವಾಗಿದೆ. ಜೇನುತುಪ್ಪವು ಯಾವುದೇ ಪಾನೀಯಕ್ಕೆ ಉತ್ತಮ ಸಿಹಿಕಾರಕವಾಗಿದೆ. ಚಹಾ ಸ್ವಲ್ಪ ತಣ್ಣಗಾದ ನಂತರವೇ ಜೇನುತುಪ್ಪವನ್ನು ಸೇರಿಸಲು ಮರೆಯದಿರಿ. ಇದು ಅದರ ಪ್ರಯೋಜನಕಾರಿ ಗುಣಗಳನ್ನು ಕಾಪಾಡುತ್ತದೆ, ಚಹಾದ ರುಚಿಯನ್ನು ಸ್ವಲ್ಪ ಸಿಹಿಗೊಳಿಸುತ್ತದೆ.



**ಬೆಲ್ಲ ಬಳಸಿ:** ಬೇರೇನೂ ಲಭ್ಯವಿಲ್ಲದಿದ್ದರೆ, ನೀವು ಬೆಲ್ಲದಿಂದ ಚಹಾ ತಯಾರಿಸಬಹುದು. ಇದು ಸಕ್ಕರೆಯಷ್ಟು ಸಂಸ್ಕರಿಸಲ್ಪಟ್ಟಿಲ್ಲ ಮತ್ತು ಕಬ್ಬಿಣ ದಂತಹ ಖನಿಜಗಳನ್ನು ಸಹ ಹೊಂದಿರುತ್ತದೆ. ಆದಾಗ್ಯೂ, ಅದನ್ನು ಮಿತವಾಗಿ ಸೇವಿಸಿ. ಚಹಾದಲ್ಲಿರುವ ಬೆಲ್ಲವು ಸಂಸ್ಕರಿಸಿದ ಸಕ್ಕರೆಗೆ ಖನಿಜ-ಸಮೃದ್ಧ, ಕಡಿಮೆ ಸಂಸ್ಕರಿಸಿದ ಪರ್ಯಾಯವನ್ನು ನೀಡುತ್ತದೆ, ಕಬ್ಬಿಣ, ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್ ಅನ್ನು ಒದಗಿಸುತ್ತದೆ, ಇದು ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸಂಶೋಧನೆಯ ಪ್ರಕಾರ ಬೆಲ್ಲವು ನೈಸರ್ಗಿಕ ಸಿಹಿಕಾರಕವಾಗಿ ಕಾರ್ಯನಿರ್ವಹಿಸುತ್ತದೆ, ಇದು ತೀವ್ರ ಸಕ್ಕರೆ ಕುಸಿತಕ್ಕೆ ಕಾರಣವಾಗದೆ ಶಕ್ತಿಯ ಮಟ್ಟಕ್ಕೆ ಸಹಾಯ ಮಾಡುತ್ತದೆ, ಆದರೂ ಇದನ್ನು ಮಿತವಾಗಿ ಬಳಸಬೇಕು.

**ಹಳೆಯ ಬೆಲ್ಲ ಬಳಸಿ:** ಆಯುರ್ವೇದದಲ್ಲಿ ಹಳೆಯ ಬೆಲ್ಲವನ್ನು ಹೆಚ್ಚಾಗಿ ಉತ್ತಮವೆಂದು ಪರಿಗಣಿಸಲಾಗುತ್ತದೆ. ಪ್ರಮುಖವಾಗಿ ಹಳೆಯ ಬೆಲ್ಲವು ಔಷಧೀಯ ಗುಣಗಳಿಂದ ಸಮೃದ್ಧವಾಗಿದೆ ಹಾಗೂ ಹೊಸ ಬೆಲ್ಲಕ್ಕೆ ಹೋಲಿಸಿದರೆ ಆರೋಗ್ಯಕ್ಕೆ ಬಹಳ ಒಳ್ಳೆಯದು ಹಾಗೂ ಹೆಚ್ಚಿನ ಪೌಷ್ಟಿಕಾಂಶದ ಮೌಲ್ಯವನ್ನು ಒದಗಿಸುತ್ತವೆ

## ಸಾಮಾಜಿಕ ಬಹಿಷ್ಕಾರ: ಸಂತ್ರಸ್ತರ ಅವಲಂಬಿತರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ: ಟಿ.ವೆಂಕಟೇಶ್

# ಮೊದಲನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ

• ಉದಯವಾಹಿನಿ ಚಿತ್ರದುರ್ಗ

ಚಳ್ಳಕೆರೆ ತಾಲ್ಲೂಕಿನ ಕೂನಿಗರಹಳ್ಳಿ, ದೊಡ್ಡ ಬೀರನಹಳ್ಳಿ, ಹಿರಿಯೂರು ತಾಲ್ಲೂಕಿನ ಕಂಭತ್ತನಹಳ್ಳಿ, ಶಿವನಗರ ಹಾಗೂ ಹೊಸದುರ್ಗ ತಾಲ್ಲೂಕಿನ ದೊಡ್ಡಘಟ್ಟ, ಜಂತಿಕೊಳಲು ಗ್ರಾಮಗಳಲ್ಲಿ 2013-14 ರಲ್ಲಿ ನಡೆದ ಸಾಮಾಜಿಕ ಬಹಿಷ್ಕಾರ ಪ್ರಕರಣದಲ್ಲಿನ ಸಂತ್ರಸ್ತರ ಅವಲಂಬಿತರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಸೂಕ್ತ ಪರಿಹಾರ ನೀಡುವಂತೆ ಕೋರಿ ಒಂದು ವಾರದ ಒಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಜಿಲ್ಲಾಧಿಕಾರಿ ಟಿ ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ 2026-27ನೇ ಸಾಲಿನ ಮೊದಲನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಮಾಜಿಕ ಬಹಿಷ್ಕಾರದ ಸಂತ್ರಸ್ತರಿಗೆ ಸರ್ಕಾರದ ಸವಲತ್ತುಗಳು ತಲುಪಿಲ್ಲ ಎಂದು ಹಲವು ಸಂಘಟನೆಗಳು ಹೋರಾಟ ನಡೆಸಿ ಮನವಿ ಸಲ್ಲಿಸಿದ್ದವು. ಈ ಹಿನ್ನೆಲೆಯಲ್ಲಿ ಸಂತ್ರಸ್ತರ ಅವಲಂಬಿತರಿಗೆ ಪುನರ್ ವಸತಿ ಕಲ್ಪಿಸಲು ಜಿಲ್ಲೆಯಲ್ಲಿ ಸಮಗ್ರ ಪರಿಶೀಲನೆ ನಡೆಸುವಂತೆ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರಿಂದ ನಿರ್ದೇಶನ ಬಂದಿತ್ತು. 6 ಗ್ರಾಮಗಳಲ್ಲಿ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ 3 ತಾಲ್ಲೂಕಿನ ತಹಶೀಲ್ದಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಪರಿಶಿಷ್ಟ ಜಾತಿ ಮನೆಗಳ ಜಂಟಿ ಸಮೀಕ್ಷೆ ನಡೆಸಿದ್ದಾರೆ. ಪೋಲಿಸ್ ದೋಷಾರೋಪಣೆ ಪಟ್ಟಿ ಆಧರಿಸಿ ಅರ್ಹ ಸಂತ್ರಸ್ತರ ಪಟ್ಟಿ ಸಿದ್ಧಪಡಿಸಲಾಗಿದೆ. ನಂತರ ಸಂತ್ರಸ್ಥರ ವಂಶವೃಕ್ಷ ಪಡೆದು, ದೌರ್ಜನ್ಯ ಸಮಯದಲ್ಲಿನ ಗ್ರಾಮದ ಮತದಾರರ ಪಟ್ಟಿಯೊಂದಿಗೆ ತಾಳೆ ಮಾಡಿ 18 ವರ್ಷ ಮೇಲ್ಪಟ್ಟ ಅವಲಂಬಿತರ ಪಟ್ಟಿ ತಯಾರಿಸಲಾಗಿದೆ. ಇದರ ಜೊತೆಗೆ, ಘಟನೆ ಸಂದರ್ಭದಲ್ಲಿ ಸಂತ್ರಸ್ತರೊಂದಿಗೆ ಇದ್ದ 18 ವರ್ಷ ತುಂಬದ ಮಕ್ಕಳ ಪ್ರತ್ಯೇಕ ಪಟ್ಟಿ ತಯಾರಿಸಲಾಗಿದೆ. ಒಟ್ಟು 45 ನೈಜ ಸಂತ್ರಸ್ತರು ಇದ್ದು 200 ಅವಲಂಬಿತರನ್ನು ಗುರುತಿಸಲಾಗಿದೆ. ಅವಲಂಬಿತರ ಪಟ್ಟಿಗೆ ಸೇರ್ಪಡೆ ಮಾಡಿದಕ್ಕೆ ಸಕಾರಣಗಳನ್ನು ನೀಡಿ ದೌರ್ಜನ್ಯ ಕಾಯ್ದೆ 1989ರ ಕಾಂಟೆಜೆನ್ಸಿ ಯೋಜನೆ 15(1)ರಡಿ ಪುನರ್ ವಸತಿ ಪರಿಹಾರಕ್ಕೆ ಸರ್ಕಾರಕ್ಕೆ ಕಳುಹಿಸುತ್ತಿರುವುದಾಗಿ ಜಿಲ್ಲಾಧಿಕಾರಿ ಟಿ ವೆಂಕಟೇಶ್ ತಿಳಿಸಿದರು.

ಜುಲೈ 2025 ರಿಂದ ಫೆಬ್ರವರಿ 2026 ವರೆಗೆ ಜಿಲ್ಲೆಯಾದ್ಯಂತ ಒಟ್ಟು 68 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಒಟ್ಟು 71 ಸಂತ್ರಸ್ತರಿಗೆ ರೂ.85.42 ಲಕ್ಷ ಪರಿಹಾರವನ್ನು ಮೊದಲ ಹಂತದಲ್ಲಿ ನೀಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಸಭೆಯಲ್ಲಿ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ದೌರ್ಜನ್ಯ ತಡೆ ಕಾಯ್ದೆ ಕುರಿತು ಹೆಚ್ಚಿನ ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗದಂತೆ ನೋಡಿಕೊಳ್ಳಬೇಕು. ಎಸ್.ಸಿ.ಪಿ ಹಾಗೂ ಟಿ.ಎಸ್.ಪಿ ಅನುದಾನದ ಬಳಕೆ ಸಮರ್ಪಕವಾಗಿ ಆಗಬೇಕು. ತಾಲ್ಲೂಕು ಹಂತದಲ್ಲಿಯೂ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಪೋಲೀಸ್ ಠಾಣೆಗಳನ್ನು ತೆರೆಯಬೇಕು. ಜಿಲ್ಲೆಯಲ್ಲಿ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ತಲಾ 300 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಮಹಿಳಾ ವಿದ್ಯಾರ್ಥಿ ನಿಲಯಗಳ ಬಳಿ ಪೋಲೀಸ್ ಗಸ್ತು ಹೆಚ್ಚಿಸಬೇಕು. ದೌರ್ಜನ್ಯ ಸಂತ್ರಸ್ತರಿಗೆ ನಿವೇಶನಗಳನ್ನು ನೀಡಬೇಕು. ದೌರ್ಜನ್ಯ ಪ್ರಕರಣದಲ್ಲಿ ಮೃತಪಟ್ಟವರ ಅವಲಂಬಿತರಿಗೆ ಖಾಯಂ ಸರ್ಕಾರಿ ನೌಕರಿ ನೀಡಬೇಕು.

ಸ ಗ್ರಾಮಗಳಲ್ಲಿ ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಜಾಗೃತಿ ಸಮಿತಿ ಸದಸ್ಯರು ಸಭೆಯಲ್ಲಿ ಒತ್ತಾಯಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಡಾ.ಆಕಾಶ್, ಜಿ.ಪಂ.ಯೋಜನಾ ನಿರ್ದೇಶಕಿ ಗಾಯಿತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್, ಜಾಗೃತಿ ಸಮಿತಿ ಸದಸ್ಯರಾದ ಟಿ.ಡಿ.ರಾಜಗಿರಿ, ಬಿ.ರಾಜಪ್ಪ, ಮುದ್ದಪ್ಪ. ವೈ, ಪ್ರಶಾಂತ್ ಕುಮಾರ್, ಟಿ.ರವೀಂದ್ರ, ಹೇಮೆಗೌಡ, ಜಿ.ಪಿ.ರವಿಶಂಕರ್, ಎಂ.ರಾಮಣ್ಣ ಕಾನೂನು ಸಲಹೆಗಾರ ಅವಿನಾಶ್.ಸಿ.ಎಲ್, ಸಾಮಾಜಿಕ ಬಹಿಷ್ಕಾರ ಮಾಹಿತಿ ಪ್ರತಿನಿಧಿ ಓಂಕಾರ ಮೂರ್ತಿ, ಅರುಣ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**ದೌರ್ಜನ್ಯ ಪ್ರಕರಣದಲ್ಲಿ ಖುಲಾಸೆ ಪ್ರಮಾಣ ಹೆಚ್ಚಳಕ್ಕೆ ಕಳವಳ**

ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಖುಲಾಸೆ ಪ್ರಮಾಣ ಹೆಚ್ಚಳವಾಗುತ್ತಿರುವುದಕ್ಕೆ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಳವಳ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ 2021 ರಿಂದ ಇಲ್ಲಿಯವರೆಗೆ 300ಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣ ದಾಖಲಿಸಲಾಗಿದೆ. ಆದರೆ ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆಯಾಗಿದೆ. ಶಿಕ್ಷೆ ಪ್ರಮಾಣ ಹೆಚ್ಚಿಸುವ ಮುಂದಿನ ಕಾನೂನು ಕ್ರಮಗಳ ಬಗ್ಗೆ ಸರ್ಕಾರಿ ಅಭಿಯೋಜಕರು ಗಮನ ಹರಿಸುವಂತೆ ನಿರ್ದೇಶನ ನೀಡಿದರು.

**2013-14 ರಲ್ಲಿ ನಡೆದ ಸಾಮಾಜಿಕ ಬಹಿಷ್ಕಾರ**

> ಗ್ರಾಮಗಳಲ್ಲಿ ರಾಜಿ ಪಂಚಾಯಿತಿಗಳ ಮೂಲಕ ದೂರುದಾರರು ಹಾಗೂ ಸಾಕ್ಷಿಗಳ ಮನಃಪರಿವರ್ತನೆ ಮಾಡುವುದರಿಂದ ನ್ಯಾಯಾಲಯದಲ್ಲಿ ಸಾಕ್ಷಿಗಳು ವ್ಯತಿರಿಕ್ತವಾಗಿ ಹೇಳಿಕೆ ನೀಡಿ, ಪ್ರಕರಣಗಳಿಗೆ ಪ್ರತಿಕೂಲ ಪರಿಸ್ಥಿತಿ ಉಂಟಾಗಿದೆ. ಮೇ-2025 ರಿಂದ ಫೆಬ್ರವರಿ -2026 ವರೆಗೆ ಒಟ್ಟು 10 ಪ್ರಕರಣಗಳಲ್ಲಿ ಆರೋಪಿತರ ಬಿಡುಗಡೆಯಾಗಿದೆ. ಕೇವಲ 1 ಪ್ರಕರಣದಲ್ಲಿ ಶಿಕ್ಷೆಯಾಗಿದೆ. 153 ಪ್ರಕರಣಗಳ ವಿಚಾರಣೆ ನಡೆಯುತ್ತಿದೆ.
> -ಕೆ.ಬಿ.ನಾಗವೇಣಿ ಸರ್ಕಾರಿ ಅಭಿಯೋಜಕಿ

> ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಪೋಲೀಸ್ ಠಾಣೆಯಲ್ಲಿ ಕಳೆದ ವರ್ಷ 44 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 39 ಪ್ರಕರಣಗಳಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ. 3 ಪ್ರಕರಗಳಲ್ಲಿ ನ್ಯಾಯಾಲಯ ತಡೆ ನೀಡಿದೆ. 01 ಪ್ರಕರಣದಲ್ಲಿ ಬಿ ರಿಪೋರ್ಟ್ ಹಾಕಲಾಗಿದೆ. ಪ್ರಸಕ್ತ ವರ್ಷದಲ್ಲಿ ವಿವಿಧ ಠಾಣೆಗಳಲ್ಲಿ 71 ಪ್ರಕರಣಗಳು ದಾಖಲಾಗಿವೆ. ಪೋಲೀಸ್ ಠಾಣೆಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕುಂದು ಕೊರತೆ ಅಲಿಕೆ ಸಭೆಗಳನ್ನು ನಡೆಸಲಾಗುತ್ತಿದೆ. ಪ್ರಕರಣ ದಾಖಲಾಗಿ 60 ದಿನ ಒಳಗಾಗಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುತ್ತಿದೆ. -ರಂಜಿತ್ ಕುಮಾರ್ ಬಂಡಾರು ಪೋಲೀಸ್ ವರಿಷ್ಠಾಧಿಕಾರಿ

---

## ಡಾ.ಬಾಬು ಜಗಜೀನರಾಮ್ ಜಯಂತಿಯ ಅಂಗವಾಗಿ
# ಜಯಂತೋತ್ಸವ ಕರಪತ್ರ ಬಿಡುಗಡೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಪ್ರವಾಸಿ ಮಂದಿರದಲ್ಲಿ ಡಾ. ಬಾಬು ಜಗಜೀವನರಾಂ ರವರ 119ನೇ ಜಯಂತೋತ್ಸವ ಅಂಗವಾಗಿ ಜಯಂತಿಯ ಕರಪತ್ರ ಬಿಡುಗಡೆ ಮಾಡುವ ಮೂಲಕ ಜಯಂತಿ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ 119ನೇ ಜಯಂತೋತ್ಸವ ಸಮಿತಿ ಅಧ್ಯಕ್ಷ ರಾಜು ಹದನೂರ ಮಾತನಾಡಿ, ಈ ಬಾರಿ ಕಲಬುರಗಿ ಜಿಲ್ಲೆಯ ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ಡಾ.ಬಾಬು ಜಗಜೀವನರಾಮು ಜಯಂತಿಯೂ ಹಮ್ಮಿಕೊಂಡಿದ್ದು ಈ ಜಯಂತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಯಂತಿಯನ್ನು ಯಶ್ವಸಿಗೊಳಿಸಬೇಕೆಂದು ಅವರು ಮನವಿ ಮಾಡಿಕೊಂಡರು. ನಂತರ ಸಮಿತಿ ಗೌರವಾಧ್ಯಕ್ಷ ಮಂಜುನಾಥ ನಾಲವಾರಕರ್ ಮಾತನಾಡಿ, ಈ ಕಾರ್ಯಕ್ರಮಕ್ಕೆ ಮಾದಿಗ ಸಮಾಜದ ಹಿರಿಯ ದಲಿತ ಒಕ್ಕೂಟಗಳ ಹೋರಾಟಗಾರ ಮಂದಕೃಷ್ಣ ಮಾದಿಗ, ಹಿರಿಯ ನ್ಯಾಯವಾದಿಗಳಾದ ಅರುಣಕುಮಾರ, ಸಮಾಜದ ಮುಖಂಡರಾದ ಭಾಸ್ಕರ, ಅವರ ಜೊತೆ ಕನ್ನಡ ಚಲನಚಿತ್ರ ನಟರು ಹಾಗೂ ಹೋರಾಟಗಾರರಾದ ಅಹಿಂಸಾ ಚೇತನ ಅವರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅವರೆಲ್ಲ ಆಗಮಿಸಿ ಮಾದಿಗ ಸಮಾಜದ ಒಳ ಮೀಸಲಾತಿ ಕುರಿತು ಮಾತನಾಡಲಿದ್ದಾರೆ ಎಂದು ಅವರು ಹೇಳಿದರು. ಮುಖಂಡರಾದ ರಾಜು ಕಟ್ಟಿಮನಿ, ಬಸವರಾಜ ಜವಳಿ, ಅಫಜಲಪೂರ ಜಯಂತಿ ಅಧ್ಯಕ್ಷ ಭಾಗಣ್ಣಾ ಘತ್ತರಗಿ ಕಟ್ಟಿಮನಿ, ಅರವಿಂದ ನಾಟೀಕಾರ, ಸುಂದರ ಡಿ ಸಾಗರ, ಆನಂದ ತೆಗನೂರ, ಶಿವಶಂಕರ ದೊಡ್ಡಮನಿ ಸೇರಿದಂತೆ ಇನ್ನಿತರರು ಇದ್ದರು.

---

# ವಿಶ್ವವಿಖ್ಯಾತ ಮಳಖೇಡ ರಾಷ್ಟ್ರಕೂಟರ ಕೋಟೆ ರಕ್ಷಣೆ ಅಗತ್ಯ

• ಉದಯವಾಹಿನಿ ಸೇಡ

ಮಳಖೇಡ ಕೋಟೆಯಲ್ಲಿ ಮಲಮೂತ್ರ ವಿಸರ್ಜನೆ ಮಾಡಬಾರದು, ಕಾಡಿನಂತೆ ಬೆಳೆದ ಮುಳ್ಳು ಕಂಟಿಗಳನ್ನು ಕಡಿದು ಸ್ವಚ್ಛಗೊಳಿಸಬೇಕು, ಕನ್ನಡ ಕಟ್ಟಿದ ಕೋಟೆಯ ರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಸಂಶೋಧಕ ಸಾಹಿತಿ ಹಾಗು ಕಲಬುರಗಿ ಜಿಲ್ಲಾ 22ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ ಮುಡುಬಿ ಗುಂಡೇರಾವ ಅಭಿಮತ ವ್ಯಕ್ತಪಡಿಸಿದರು. ತಾಲ್ಲೂಕಿನ ಮಳಖೇಡ ಐತಿಹಾಸಿಕ ರಾಷ್ಟ್ರಕೂಟರ ಕೋಟೆಯಲ್ಲಿ ಕನ್ನಡ ಅಭಿಮಾನಿ ಬಳಗ ಹಮ್ಮಿಕೊಂಡ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಜಗತ್ತಿನ ನಾಲ್ಕು ಸಾಮ್ರಾಜ್ಯಗಳ ಪೈಕಿ ರಾಷ್ಟ್ರಕೂಟರ ಸಾಮ್ರಾಜ್ಯವಾಗಿತ್ತು. ಕನ್ನಡದ ಕೀರ್ತಿಯನ್ನು ಹೆಚ್ಚಿಸಿದವರು, ಕಾವೇರಿಯಿಂದ ಮಹಾ ಗೋದಾವರಿಯವರೆಗೆ ಸಾಮ್ರಾಜ್ಯ ವಿಸ್ತರಿಸಿದವರು, ಕನ್ನಡಕ್ಕೆ ಪ್ರಥಮ ಗ್ರಂಥ ಕವಿರಾಜ ಮಾರ್ಗ ನೀಡಿದ ಹೆಗ್ಗಳಿಕೆ, ಏಕ ಶಿಲೆಯಲ್ಲಿ ಎಲ್ಲೋರದ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದವರು, ಪ್ರಜಾನುರಾಗಿ ದೊರೆ ಅಮೋಘವರ್ಷ ನೃಪತುಂಗ ಚಕ್ರವರ್ತಿಯು 64 ವರ್ಷ ಸುಧೀರ್ಘವಾಗಿ ಆಳ್ವಿಕೆ ಮಾಡಿದ್ದು ಶ್ಲಾಘನೀಯ. ಇಂದ್ರನ ಅಮರಾವತಿ ನಾಚಿಸುವಂತ ನಗರ ಮಳಖೇಡವಾಗಿತ್ತು, ಇಂತಹ ಅದ್ಭುತ ಇತಿಹಾಸ ಹೊಂದಿರುವ ಮಳಖೇಡ ಕೋಟೆಯ ರಕ್ಷಣೆ ಮಾಡಬೇಕು ಮತ್ತು ಇದರ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

ಕೋಟೆ ಸ್ವಚ್ಛತೆ ಅಭಿಯಾನಕ್ಕೆ ಗ್ರಾಪಂ ಮಾಜಿ ಅಧ್ಯಕ್ಷ ರಾಜಶೇಖರ ಪುರಾಣಿಕ ಚಾಲನೆ ನೀಡಿ ಮಾತನಾಡಿ ಮಳಖೇಡ ಕೋಟೆಯ ಅಭಿವೃದ್ದಿಗೆ ಸಚಿವ ಡಾ. ಶರಣಪ್ರಕಾಶ ಪಾಟೀಲರು ಮತ್ತೆ ವಿಶೇಷ ಅನುದಾನ ಬಿಡುಗಡೆಗೆ ಮತ್ತು ರಾಷ್ಟ್ರಕೂಟ ಉತ್ಸವ ಆಚರಣೆಗೆ ಕ್ರಮಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದರು.

ಓಂ ಸಾಯಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಹೇಶ ಧರಿ ಮಾತನಾಡಿ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ ನಾಡಿನ ಇತಿಹಾಸ ಸಾರುವ ಕೋಟೆ ಕೊತ್ತಲಗಳೆ ನಮ್ಮ ನಿಜವಾದ ಆಸ್ತಿಯಾಗಿದೆ ಎಂದರು. ಈ ವೇಳೆಯಲ್ಲಿ ಮಾಜಿ ಗ್ರಾಪಂ ಅಧ್ಯಕ್ಷರಾದ ರಾಜಶೇಖರ ಪುರಾಣಿಕ ಸಾಹಿತಿ ಪತ್ರಕರ್ತ ರಂಗಕರ್ಮಿ ಸಿದ್ದಲಿಂಗಯ್ಯ ಸ್ವಾಮಿ ಕೊಡಗಿಮಠ ಮಲಕೂಡ, ಪತ್ರಕರ್ತ ಸುರೇಶ್ ಬಿಜನಳ್ಳಿ, ಮಲ್ಲಪ್ಪ ಆರಬೋಳ, ದೇವು ಪುರಾಣಿಕ, ರಾಜಪ್ಪ ಮಂಗಾ, ಮಿರ್ಜಾ ಸರಕಾರ, ಜಗದೀಶ ಹಿರೇಮಠ, ಪ್ರವಾಸಿ ಮಿತ್ರ ಅಶೋಕ ಮುಂತಾದವರಿದ್ದರು.


ಉದಯವಾಹಿನಿ ಚಿತ್ರ

> ಕನ್ನಡವನ್ನು ಕಟ್ಟಿ ಬೆಳೆಸಿದ ಕೋಟೆಯ ಸ್ಥಿತಿ ಅಧೋಗತಿಯಾಗಿದೆ, ಕನ್ನಡ ಅಭಿಮಾನವುಳ್ಳವರೆಲ್ಲರೂ ಒಗ್ಗಟ್ಟಿನಿಂದ ಕೋಟೆ ಸ್ವಚ್ಛತೆ ಮಾಡಿ ಸುಂದರಗೊಳಿಸೋಣ ಎಂದರು. ಕರವೇ ಅಧ್ಯಕ್ಷ ಹಣಮಂತ ಹೊಕ್ಕಳ ಮಾತನಾಡಿ ಮಳಖೇಡ ಇತಿಹಾಸವನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು ಮತ್ತು ರಾಷ್ಟ್ರಕೂಟ ಉತ್ಸವ ಆಚರಿಸಬೇಕು. -ಚಂದ್ರಕಲಾ ಅತನೂರು ಕನ್ನಡ ಅಭಿಮಾನಿ ಬಳಗ ಸಂಚಾಲಕಿ

---

# ಬೆಸಿಗೆಯಲ್ಲಿ ನೀರಿನ ಸಮಸ್ಯೆ ಆಗದಂತೆ ಕ್ರಮಕ್ಕೆ ಸೂಚನೆ

• ಉದಯವಾಹಿನಿ ಸುಳ್ಯ

ಬೇಸಗೆಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ನ.ಪಂ.ಮುಖ್ಯಾಧಿಕಾರಿಗಳಿಗೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಸಂತೋಷ್ ಕುಮಾರ್ ಸೂಚನೆ ನೀಡಿದ್ದಾರೆ.

ಸುಳ್ಯ ತಾಲ್ಲೂಕು ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅವರು ಅಧಿಕಾರಿಗಳು ಸೂಚನೆ ನೀಡಿದರು. ಸಭೆಯಲ್ಲಿ ಮಾತನಾಡಿದ ಅವರು ಬೇಸಗೆಯಲ್ಲಿ ನೀರಿನ ಸಮಸ್ಯೆ ಇದೆಯಾ, ಪರ್ಯಾಯ ವ್ಯವಸ್ಥೆ ಏನು ಮಾಡಲಾಗಿದೆ ಎಂದು ಸಂತೋಷ್ ಪ್ರಶ್ನಿಸಿದರು. ಉತ್ತರಿಸಿದ ಅಧಿಕಾರಿಗಳು ಸದ್ಯಕ್ಕೆ ನೀರಿನ ಸಮಸ್ಯೆ ಉಂಟಾಗಿಲ್ಲ. ನೀರಿನ ಸಮಸ್ಯೆ ಉಂಟಾದಲ್ಲಿ ಆ ಪ್ರದೇಶಕ್ಕೆ ನೀರು ಪೂರೈಸಸಲು ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕಿನ ಮಕ್ಕಳಲ್ಲಿ ಅಪೌಷ್ಠಿಕತೆ ಕಂಡುಬಂದಿರುವುದಕ್ಕೆ ಯಾವ ಕ್ರಮವಹಿಸಲಾಗಿದೆ ಎಂದು ಆಡಳಿತಾಧಿಕಾರಿ ಪ್ರಸ್ತಾಪಿಸಿದರು. ಜನವರಿಯಲ್ಲಿ ತಾಲ್ಲೂಕು ಆಸ್ಪತ್ರೆಯಲ್ಲಿ ನಡೆದ ವಿಶೇಷ ಆರೋಗ್ಯ ತಪಾಸಣೆ ನಡೆಸಲಾಗಿದೆ. ಸುಳ್ಯದ ಎನ್ಆರ್ಸಿ ಕೇಂದ್ರದಲ್ಲಿ 3 ಮಕ್ಕಳನ್ನು ದಾಖಲಿಸಲಾಗಿದೆ. ಅವರು ಪ್ರಗತಿ ಹೊಂದಿದ್ದಾರೆ ಎಂದರು. ಅಂಗನವಾಡಿ ವ್ಯಾಪ್ತಿಯ ಮೂಲಕ ಮಕ್ಕಳ ಪೌಷ್ಠಿಕತೆ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು. ಕುಡಿತ, ತಂಬಾಕು ಸೇವನೆ ಮಾಡುತ್ತಿರುವ ಪೋಷಕರ ಮಕ್ಕಳು ಹೆಚ್ಚಾಗಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಬಗ್ಗೆ ಪ್ರಸ್ತಾಪಿಸಲಾಯಿತು. ಆಡಳಿತಾಧಿಕಾರಿ ಸಂತೋಷ್ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜೊತೆಯಾಗಿ ಅಂತಹ ಪ್ರದೇಶಗಳನ್ನು ಗುರುತಿಸಿ ಗ್ರಾಮ ಮಟ್ಟದಿಂದ ಜಾಗೃತಿ ಕಾರ್ಯ ಮಾಡಿಕೊಳ್ಳಬೇಕು. ಅಪೌಷ್ಠಿಕ ಮಕ್ಕಳನ್ನು ಕೇಂದ್ರಕ್ಕೆ ಸೇರಿಸುವ ಬಗ್ಗೆ ಪೋಷಕರ ಮನವೊಲಿಸುವ ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಿದರು. ಅಪೌಷ್ಠಿಕ ಮಕ್ಕಳನ್ನು ಕೇಂದ್ರಕ್ಕೆ ಸೇರಿಸಿದರೂ ಅಲ್ಲಿಂದ ಅವರು ಹೇಳದೇ ತೆರಳಿರುವ ಪ್ರಕರಣ ನಡೆದಿದೆ ಎಂದು ಅಧಿಕಾರಿಯೋರ್ವರು ತಿಳಿಸಿದರು. ನಗರದ ಘನತ್ಯಾಜ್ಯ ವಿಲೇವಾರಿ ದುಗ್ಗಲಡ್ಕದಲ್ಲಿ ಕಾಯ್ದಿರಿಸುವ ಜಮೀನು ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಚರ್ಚೆ ನಡೆಯಿತು. ಪ್ರಸ್ತಾಪಿತ ಘನತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲು ಕೆಎಫ್‌ಡಿಸಿ ವತಿಯಿಂದ ಆಕ್ಷೇಪಣೆ ಇರುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಪ್ರಕ್ರಿಯೆಗಳನ್ನು ಆದಷ್ಟುಬೇಗ ಮುಗಿಸಲು ಆಡಳಿತಾಧಿಕಾರಿ ಸೂಚಿಸಿದರು.


ಉದಯವಾಹಿನಿ ಚಿತ್ರ

**ತಾ.ಪಂ ಸಾಮಾನ್ಯ ಸಭೆ**

---

# ಸಾಮ್ರಾಜ್ಯಶಾಹಿ ಧೋರಣೆಯೇ ಯುದ್ಧಕ್ಕೆ ಕಾರಣ: ರವಿ

• ಉದಯವಾಹಿನಿ ಬಳ್ಳಾರಿ

ಇಂದಿನ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ವಸಾಹತುಶಾಹಿಗಳು ವ್ಯಾಪಾರ ಮತ್ತು ಸಂಪತ್ತಿನ ಲೂಟಿಗಾಗಿ ಯುದ್ಧಕ್ಕೆ ಕಾರಣವಾಗುತ್ತಿದ್ದಾರೆ. ಯುದ್ಧದ ಮೂಲಕ ಅಪಾರ ಜೀವ ಸಂಕುಲದ ನಾಶಕ್ಕೆ ನಾಂದಿಯಾಡುತಿದ್ದಾರೆ ಎಂದು ( ಸಿಪಿಡಿಆರ್ ಎಸ್) ಜನತಾಂತ್ರಿಕ ಹಕ್ಕುಗಳು ಮತ್ತು ಧರ್ಮಾತೀತ ರಕ್ಷಣಾ ಕೇಂದ್ರದ ರಾಜ್ಯ ಸಂಚಾಲಕ ಎನ್. ರವಿ ಅಭಿಪ್ರಾಯಪಟ್ಟರು.

ನಗರದ ಸರಳಾದೇವಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನತಾಂತ್ರಿಕ ಹಕ್ಕುಗಳು ಮತ್ತು ಧರ್ಮಾತೀತ ರಕ್ಷಣಾ ಕೇಂದ್ರ ಹಾಗೂ ರಾಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ ಯುದ್ಧ ಮತ್ತು ಶಾಂತಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಳೆದ ಒಂದುವರೆ ದಶಕದಿಂದ ವಿಶ್ವದಲ್ಲೆಡೆ ಯುದ್ಧವು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಶ್ರೀಮಂತ ರಾಷ್ಟ್ರಗಳಲ್ಲಿರುವ ಅತೀ ಹೆಚ್ಚು ಯುದ್ಧೋಪಕರಣಗಳ ಸಂಗ್ರಹವು ಆಧಾರವಾಗಿದ್ದು, ಲಕ್ಷಾಂತರ ಮುಗ್ಧ ಮಕ್ಕಳು ಸೇರಿದಂತೆ ಸಾಮಾನ್ಯ ಜನರ ಜೀವಕ್ಕೆ ಬೆಲೆಯೇ ಇಲ್ಲದಾಗಿದೆ. ಇದಕ್ಕೆ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ಬಂಡವಾಳಶಾಹಿಗಳ ದುರಾಸೆಯೇ ಬಲವಾದ ಕಾರಣವೆಂದು ಬೇಸರ ವ್ಯಕ್ತಪಡಿಸಿದರು. ಅಮೇರಿಕಾದ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ಬೌದ್ಧಿಕ ಸ್ಥಿಮಿತತೆ ಕಳೆದುಕೊಂಡಿದ್ದು ಇರಾನ್ ಯುದ್ಧಕ್ಕೆ ದಿನಕ್ಕೊಂದ್ದು ಕಾರಣ ಕೊಡುತ್ತಿರುವುದು ವಿಷಾದನೀಯ. ಹೀಗಾಗಿ ವಿಶ್ವದ ಯಾವುದೇ ದೇಶ ಟ್ರಂಪ್ ಗೆ ಬೆಂಬಲ ನೀಡುತ್ತಿಲ್ಲ. ಸ್ವಹಿತಾರಕ್ಷಣೆಗೆ ನಡೆಯುತ್ತಿರುವ ಯುದ್ಧದ ದುಷ್ಪರಿಣಾಮ ಅಪಾರವಾಗಿದ್ದು, ಜೀವವಿರೋಧಿ ನೀತಿ ಮಾನವ ವಿನಾಶಕ್ಕೆ ಮೂಲವಾಗುತ್ತಿದೆ. ಬಹಳ ಮುಖ್ಯವಾಗಿ ಅಮೇರಿಕಾದ ವ್ಯಾಪಾರ ಸಾಮ್ರಾಜ್ಯಶಾಹಿ ನೀತಿಯನ್ನು ಪ್ರತಿಯೊಂದು ದೇಶ ತೀವ್ರವಾಗಿ ವಿರೋಧಿಸಬೇಕಾದ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಹೊನ್ನೂರಾಲಿ ಜನಸಾಮಾನ್ಯರಿಗೆ ಯುದ್ಧದ ದುಷ್ಪರಿಣಾಮಗಳ ಬಗೆಗೆ ಅರಿವಿಲ್ಲ. ದಿನಬಳಕೆಯ ವಸ್ತುಗಳ ಬೆಲೆ ಹೇರಿಕೆಯ ಬಿಸಿ ತಟ್ಟಿದಾಗ ಜನರು ಯುದ್ಧ ಬೇಡ ಎನ್ನುತ್ತಾರೆ. ಹೊಸ ತಲೆಮಾರಿಗೆ ಜಾಗೃತಿ ಮೂಡಿಸುವ ಕೆಲಸ ಜರೂರಿದೆ.ಮಾನವ ವಿರೋಧಿ ಸಾಮಾಜಿಕ ಜಾಲ ತಾಣಗಳ ತಪ್ಪು ಮಾಹಿತಿಗಳನ್ನು ನಂಬಿ ಯುದ್ಧೋನ್ಮಾದ ಅನುಭವಿಸಿದ್ದು ತಪ್ಪು. ಹೀಗಾಗಿ ಯುದ್ಧ ಪಿಪಾಸೆಗಳಿಗೆ ರಾಜಾತಿಥ್ಯ ದೊರೆಯುತ್ತಿರುವುದು ವಿಷಾದನೀಯ ಎಂದರು.


ಉದಯವಾಹಿನಿ ಚಿತ್ರ

---

• ಉದಯವಾಹಿನಿ ವಿಜಯಪುರ

# ಖಾಲಿ ಇರುವ ಗ್ರಂಥಪಾಲಕರ ಹುದ್ದೆ ಭರ್ತಿಗೆ ಮನವಿ

ರಾಜ್ಯದ ವಿವಿಧ ಶಿಕ್ಷಣ, ಸರ್ಕಾರಿ ಇಲಾಖೆಗಳಲ್ಲಿನ ದೀರ್ಘ ಕಾಲದಿಂದ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳನ್ನು ತುರ್ತಾಗಿ ನೇಮಕ ಮಾಡಿಕೊಳ್ಳುವಂತೆ ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದಿಂದ ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ಈ ಸಂಧರ್ಭದಲ್ಲಿ ಮಾತನಾಡಿದ ಜಿಲ್ಲಾ ಗ್ರಂಥಾಲಯ ಸಂಘದ ಅಧ್ಯಕ್ಷ ಎಂ.ಕೆ. ಬಿರಾದಾರ, ರಾಜ್ಯದ ವಿಶ್ವವಿದ್ಯಾಲಯಗಳು, ಸರ್ಕಾರಿ ಹಾಗೂ ಅನುದಾನಿತ ಪ್ರಥಮದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಪಿಯು ಕಾಲೇಜುಗಳಲ್ಲಿ ಅನೇಕ ಮಾನ್ಯಿತ ಗ್ರಂಥ ಪಾಲಕರ ಹುದ್ದೆಗಳು ದೀರ್ಘ ಕಾಲದಿಂದ ಖಾಲಿಯಾಗಿವೆ. ಇದಲ್ಲದೆ ಸಾರ್ವಜನಿಕ ಗ್ರಂಥಾಲಯಗಳು ರಾಜ್ಯ, ಕೇಂದ್ರ, ಜಿಲ್ಲಾ ಕೇಂದ್ರ, ನಗರ ಕೇಂದ್ರ ಹಾಗೂ ತಾಲ್ಲೂಕು ಗ್ರಂಥಾಲಯಗಳು, ಸರ್ಕಾರಿ ವೈದ್ಯಕೀಯ ಕಾಲೇಜುಗಳ ಗ್ರಂಥಾಲಯಗಳು, ಕರ್ನಾಟಕ ಪಬ್ಲಿಕ್ ಶಾಲೆಗಳ ಗ್ರಂಥಾಲಯಗಳು ಹಾಗೂ ಹೈಕೋರ್ಟ್, ಜಿಲ್ಲಾ ನ್ಯಾಯಾಲಯಗಳು, ವಿಧಾನಸೌಧ, ಪುರಾತತ್ವ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಲ್ಲಿಯೂ ಗ್ರಂಥಪಾಲಕರ ಕೊರತೆ ತೀವ್ರವಾಗಿದೆ ಎಂದು ಹೇಳಿದರು. ಗ್ರಂಥಾಲಯವು ಶಿಕ್ಷಣ ಸಂಸ್ಥೆಯ ಹೃದಯ ಮಾತ್ರವಲ್ಲ, ಅದು ಆಡಳಿತ ನ್ಯಾಯಾಂಗ ವೈದ್ಯಕೀಯ ಮತ್ತು ಸಂಶೋಧನಾ ಕ್ಷೇತ್ರಗಳಿಗೆ ಜ್ಞಾನಾಧಾರೆ ಒದಗಿಸುವ ಜೀವನಾಡಿಯಾಗಿದೆ.

ಆದರೆ ಅರ್ಹ ಗ್ರಂಥಪಾಲಕರ ಕೊರತೆಯಿಂದ ವಿದ್ಯಾರ್ಥಿಗಳು ಸಮರ್ಪಕ ಶೈಕ್ಷಣಿಕ ಮತ್ತು ಸಂಶೋಧನಾ ಮಾರ್ಗದರ್ಶನದಿಂದ ವಂಚಿತರಾಗುತ್ತಿದ್ದಾರೆ. ಡಿಜಿಟಲ್ ಹಾಗೂ ಈ-ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಹಿನ್ನಡೆಯಾಗುತ್ತಿದೆ. ಎನ್‌ಎಎಸಿ/ಎನ್‌ಬಿಎ ಮಾನ್ಯತಾ ಮೌಲ್ಯಮಾಪನದಲ್ಲಿ ರಾಜ್ಯದ ಸಂಸ್ಥೆಗಳು ಹಿನ್ನಡೆಯಾಗುತ್ತಿವೆ. ಸಾರ್ವಜನಿಕ ಗ್ರಂಥಾಲಯಗಳ ಸೇವಾ ಗುಣಮಟ್ಟ ಕುಸಿಯುತ್ತಿದೆ. ನ್ಯಾಯಾಂಗ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಮಾಹಿತಿ ಲಭ್ಯತೆ ವಿಳಂಭವಾಗುತ್ತಿದೆ ಎಂದು ಹೇಳಿದರು. ಇದು ಕೇವಲ ಹುದ್ದೆಯ ಪ್ರಶ್ನೆಯಲ್ಲ, ಇದು ಸಾವಿರಾರು ವಿದ್ಯಾವಂತ ಯುವಕರ ಬದುಕಿನ ಆಶಯಗಳ ಪ್ರಶ್ನೆಯಾಗಿದೆ. ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಅನೇಕ ಯುವಕರು ಉನ್ನತ ಶಿಕ್ಷಣ ಪಡೆದು ವರ್ಷಗಳಿಂದ ನಿರೀಕ್ಷೆಯಲ್ಲಿದ್ದಾರೆ.

---

# ಮಿನಿ ನ್ಯೂಸ್

## ನೀರಾವರಿ ಯೋಜನೆಗಳ ಸಭೆಯಲ್ಲಿ ರಾಜ್ಯಸಭಾ ಸದಸ್ಯರು ಭಾಗಿ

• ಉದಯವಾಹಿನಿ ಬಳ್ಳಾರಿ

ರಾಜ್ಯಸಭಾ ಸದಸ್ಯರಾದ ಡಾ. ಸೈಯದ್ ನಾಸೀರ್ ಹುಸೇನ್ ಅವರು ಕರ್ನಾಟಕ ಭವನದಲ್ಲಿ ನಡೆದ ಮಹತ್ವದ ನೀರಾವರಿ ಯೋಜನೆಗಳ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದರು. ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಿತು. ಈ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸ್ ರಾಜು, ನವದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಹಾಗೂ ಕಾನೂನು ತಜ್ಞರ ತಂಡ ಭಾಗವಹಿಸಿದ್ದರು.

ಯುಕೆಪಿ-3, ಮೇಕೆದಾಟು ಮತ್ತು ಮಹಾದಾಯಿ ಸೇರಿದಂತೆ ಪ್ರಮುಖ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆಗಳನ್ನು ಪಡೆಯುವ ಬಗ್ಗೆ ಚರ್ಚೆಗಳು ಗಮನಹರಿಸಿದವು. ಈ ಸರ್ವಪಕ್ಷ ನಿಯೋಗವು ಗೌರವಾನ್ವಿತ ಪ್ರಧಾನ ಮಂತ್ರಿ ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಅಗತ್ಯ ಅನುಮೋದನೆಗಳಿಗಾಗಿ ಒತ್ತಾಯಿಸಲು ಸಜ್ಜಾಗಿದ್ದು, ಒಗ್ಗಟ್ಟಿನ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

## ಅಂಗನವಾಡಿ ಸಿಬ್ಬಂದಿಯ ವೇತನ ಹೆಚ್ಚಿಸಿ

• ಉದಯವಾಹಿನಿ ಔರಾದ್

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ವೇತನ ಹೆಚ್ಚಿಸುವಂತೆ ಅಧಿವೇಶನದಲ್ಲಿ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಸರ್ಕಾರಕ್ಕೆ ಒತ್ತಾಯಿಸಿದರು. ವಿಧಾನಸಭಾ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕುರಿತ ಚರ್ಚೆಯ ಸಂದರ್ಭದಲ್ಲಿ ಶಾಸಕರು ಮಾತನಾಡಿ, ಮಕ್ಕಳಿಗೆ ಬಿಸಿಯೂಟ ಪೂರೈಕೆ, ಅಪೌಷ್ಟಿಕತೆ ನಿವಾರಣೆ, ಗರ್ಭಿಣಿಯರು ಹಾಗೂ ತಾಯಂದಿರಿಗೆ ಸರ್ಕಾರಿ ಯೋಜನೆಗಳನ್ನು ತಲುಪಿಸುವುದು ಒಳಗೊಂಡು ಹಲವಾರು ವಿಧದಲ್ಲಿ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ತಮ್ಮ ಜವಾಬ್ದಾರಿಯ ಜೊತೆಗೆ ಸರ್ಕಾರಗಳು ಅನ್ಯ ಕೆಲಸಗಳನ್ನು ವಹಿಸುತ್ತವೆ. ಸಂಕಷ್ಟಗಳ ನಡುವೆಯೂ ಎಲ್ಲಾ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಇವರು ವೇತನ ಹೆಚ್ಚಿಸುವಂತೆ ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ. ಕೆಲ ದಿನಗಳ ಹಿಂದೆಯೇ ಭೇಟಿಯಾಗಿ ಮನವಿ ಪತ್ರ ನೀಡಿದ್ದರು. ಅದರಂತೆ ಎಲ್ಲಾ ಶಾಸಕರನ್ನು ಭೇಟಿಯಾಗುತ್ತಿದ್ದಾರೆ.

ಇವರಿಗೆ ಪ್ರಸ್ತುತ ಕೊಡುತ್ತಿರುವ ವೇತನ ಬಹಳಷ್ಟು ಕಡಿಮೆಯಿದ್ದು, ಬೆಲೆಗಳ ಏರಿಕೆಯ ಸಂದರ್ಭದಲ್ಲಿ ಈಗಿರುವ ವೇತನ ಯಾವುದಕ್ಕೂ ಸಾಲುವುದಿಲ್ಲ. ಹಾಗಾಗಿ ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ವೇತನ ಹೆಚ್ಚಳ ಪ್ರಮುಖ ಬೇಡಿಕೆಯಾಗಿದ್ದು, ಸರ್ಕಾರ ಇವರ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ವೇತನ ಹೆಚ್ಚಿಸಿ, ಅಗತ್ಯ ಸೌಕರ್ಯಗಳನ್ನು ಒದಗಿಸಬೇಕೆಂದು ತಿಳಿಸಿದರು.

## ಸುರಕ್ಷಿತ ಪ್ರಯಾಣಕ್ಕೆ ಆಟೋಗಳಿಗೆ ವಿಶೇಷ ಸಂಖ್ಯೆ

• ಉದಯವಾಹಿನಿ ಭದ್ರಾವತಿ

ನಗರದಲ್ಲಿ ಸಂಚರಿಸುವ ಆಟೋ ರಿಕ್ಷಾಗಳ ದಾಖಲೆಗಳನ್ನು ಪರಿಶೀಲಿಸಿ ಅವುಗಳಿಗೆ ವಿಶೇಷ ಸಂಖ್ಯೆ ನೀಡುವ ಅಭಿಯಾನವನ್ನು ಪೊಲೀಸ್ ಇಲಾಖೆ ಆರಂಭಿಸಿದೆ. ಆಟೋ ರಿಕ್ಷಾಗಳಿಗೆ ಸಂಬಂಧಿಸಿದ ವಾಹನ ವಿಮೆ, ವಾಹನದ ನೋಂದಣಿ ಪತ್ರ, ಚಾಲನಾ ಪರವಾನಗಿ ದಾಖಲೆ, ವಾಯು ಮಾಲಿನ್ಯ ತಪಾಸಣೆ ಮೊದಲಾದ ದಾಖಲೆಗಳನ್ನು ಪೊಲೀಸ್ ಇಲಾಖೆ ಪರಿಶೀಲಿಸುತ್ತದೆ. ದಾಖಲೆಗಳು ಸಮರ್ಪಕವಾಗಿದ್ದರೆ, ಅಂತಹ ವಾಹನಕ್ಕೆ ಬಿಡಿವಿಟಿ ಎಂಬ ಅಕ್ಷರಗಳಿಂದ ಆರಂಭವಾಗುವ ಸಂಖ್ಯೆ ನೀಡಲಾಗುತ್ತದೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎ.ಜಿ. ಕಾರಿಯಪ್ಪ ಪೂರಕ ದಾಖಲೆಗಳನ್ನು ಒದಗಿಸಿರುವ ಆಟೋಗಳಿಗೆ ವಿಶೇಷ ಸಂಖ್ಯೆಯ ಸ್ಟಿಕ್ಕರ್ ವಿತರಿಸಿದರು.

ವಿಶೇಷ ಸಂಖ್ಯೆ ಇರುವ ಆಟೋಗಳ ಸಮಗ್ರ ಮಾಹಿತಿ ಪೊಲೀಸ್ ಇಲಾಖೆಯ ಬಳಿ ಇರುತ್ತದೆ. ಇದರಿಂದ ಆಟೋ ಪ್ರಯಾಣದ ವೇಳೆ ನಡೆಯಬಹುದಾದ ಸಂಭಾವ್ಯ ಅಪರಾಧಗಳಿಗೆ ಹಾಗೂ ಕಾನೂನು ಉಲ್ಲಂಘನೆಗಳಿಗೆ ಕಡಿವಾಣ ಹಾಕಿದಂತಾಗುತ್ತದೆ. ಈ ಅಭಿಯಾನ ಆಟೋ ರಿಕ್ಷಾ ಸೇವೆಗಳನ್ನು ಕಾನೂನು ಚೌಕಟ್ಟಿನ ಒಳಗೆ ತರುವ ಪ್ರಯತ್ನವಾಗಿದೆ ಎಂದು ತಿಳಿಸಿದರು.

## ಅಕ್ಕಿ ಗಿರಣಿ ಮಾಲೀಕರಿಗೆ ಸಂಕಷ್ಟ

• ಉದಯವಾಹಿನಿ ಕೊಪ್ಪಳ

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಅಕ್ಕಿ ರಫ್ತಾಗಲು ಅವಕಾಶ ಸಿಗದ ಕಾರಣಕ್ಕೆ ರಾಜ್ಯದ ಅಕ್ಕಿ ಗಿರಣಿಗಳ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದೇಶದಾದ್ಯಂತ ಡಿಸೆಂಬರ್ ಅಂತ್ಯ ಹಾಗೂ ಜನವರಿಯಲ್ಲಾದ ಅಕ್ಕಿ ಉತ್ಪಾದನೆಯನ್ನು ಮೂರ್ನಾಲ್ಕು ತಿಂಗಳ ಅವಧಿಯಲ್ಲಿ ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಈಗ ಇರಾನ್‌ನಲ್ಲಿ ಯುದ್ಧ ನಡೆಯುತ್ತಿರುವುದು ಮತ್ತು ಕೊಲ್ಲಿ ರಾಷ್ಟ್ರಗಳಿಗೂ ಅದರ ಬಿಸಿ ತಟ್ಟಿರುವುದರಿಂದ ವಿವಿಧೆಡೆಯಿಂದ ರಫ್ತಗಾಗಿ ತೆರಳಿದ್ದ ಅಕ್ಕಿ ಬಂದರಿನಲ್ಲೇ ಉಳಿದುಕೊಂಡಿದೆ. ಇನ್ನು ಕೆಲವು ಕಡೆ ಅಕ್ಕಿ ಹೊತ್ತು ಹೋಗಿದ್ದ ಲಾರಿಗಳು ವಾಪಸ್ ಬಂದಿವೆ. ಈಗಿರುವ ದಾಸ್ತಾನು ಒಂದಡೆಯಾದರೆ ಇನ್ನೊಂದು ತಿಂಗಳಲ್ಲಿ ದೇಶದ ಬಹುತೇಕ ಕಡೆ ಹೊಸ ಅಕ್ಕಿ ಬರಲಿದೆ. ಆ ಫಸಲು ಬರುವುದರ ಒಳಗೆ ಈಗ ಉಳಿದ ದಾಸ್ತಾನು ಕಡಿಮೆ ಮಾಡಿಕೊಳ್ಳಬೇಕಾದ ಸಂಕಷ್ಟ ಅಕ್ಕಿಗಿರಣಿಗಳ ಮಾಲೀಕರಿಗೆ ಎದುರಾಗಿದೆ. ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಬೆಳೆಯುವ ಸೋನಾಮಸೂರಿ ತಳಿಯ ಅಕ್ಕಿಗೆ ವಿದೇಶಗಳಲ್ಲಿ ವ್ಯಾಪಕ ಬೇಡಿಕೆಯಿದೆ. ರೈತರಿಂದ ಈಗಾಗಲೇ ಭತ್ತ ಖರೀದಿಸಿರುವ ಅಕ್ಕಿ ಗಿರಣಿಗಳ ಮಾಲೀಕರು ಅವರ ಹಣ ಪಾವತಿಸಿದ್ದಾರೆ.

---

# ಭದ್ರಾ ಮೇಲ್ದಂಡೆ: ಕಾಮಗಾರಿಯಿಂದ ಮೂಲ ಸೌಕರ್ಯಗಳ ಕೊರತೆ

## ಭದ್ರಾ ಮೇಲ್ದಂಡೆ ಯೋಜನೆ ಪ್ರಥಮ ಹಂತದ ಕಾಮಗಾರಿ ವ್ಯಾಪ್ತಿಯ ಗ್ರಾಮಗಳ ದುಸ್ಥಿತಿ

• ಉದಯವಾಹಿನಿ ನರಸಿಂಹರಾಜಪುರ

ಮುತ್ತಿನಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆರಂಭಗೊಂಡಿರುವ ಭದ್ರಾ ಮೇಲ್ದಂಡೆ ಯೋಜನೆಯ ಪ್ರಥಮ ಹಂತದ ಕಾಮಗಾರಿಯಿಂದ ಹಲವು ಗ್ರಾಮಗಳಲ್ಲಿ ಮೂಲಸೌಕರ್ಯಗಳ ಕೊರತೆ ಉಂಟಾಗಿದೆ.

ಯೋಜನೆ ಕಾಮಗಾರಿಗಾಗಿ ಮುತ್ತಿನಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ. ಕಣಬೂರು, ಕುಸುಬೂರು, ಸಾತೋಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಕಾಲುವೆ (ಚಾನಲ್) ನಿರ್ಮಾಣಕ್ಕಾಗಿ ಲಕ್ಷಾಂತರ ಮರಗಳನ್ನು ಹನನ ಮಾಡಲಾಗಿದೆ. ಇದರಿಂದ ಜಲಮೂಲಗಳು ಬತ್ತಿ ಹೋಗುತ್ತಿದ್ದು, ಬೇಸಿಗೆಯಲ್ಲೂ ಸದಾ ನೀರಿನಿಂದ ತುಂಬಿರುತ್ತಿದ್ದ ಕರಿಬಸಪ್ಪನ ಹಳ್ಳ ಪ್ರಸ್ತುತ ಒಣಗಿ ಹೋಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಪ್ರಥಮ ಹಂತದಲ್ಲಿ ನೀರು ಎತ್ತಲು ಮುಂಡುಗೋಡು ಬಳಿ 100× 100 ಅಡಿ ಅಗಲ ಮತ್ತು ಆಳದ ಪಂಪ್‌ವೆಲ್‌ಗಾಗಿ ಬಾವಿ ನಿರ್ಮಿಸಲಾಗಿದೆ. ಸಾತೋಳಿ ಗ್ರಾಮದಲ್ಲಿ ಪೈಪ್‌ಲೈನ್ ಅಳವಡಿಸಲು ಸುರಂಗ ಮಾರ್ಗ ನಿರ್ಮಿಸಿರುವುದರಿಂದ ನೀರಿನ ಸೆಲೆಗಳು ಬತ್ತಿವೆ. ಇದರ ಪರಿಣಾಮವಾಗಿ ಗ್ರಾಮಗಳ ವ್ಯಾಪ್ತಿಯಲ್ಲಿರುವ 1ರಿಂದ 2 ಎಕರೆ ವಿಸ್ತೀರ್ಣದ ಸುಮಾರು 16 ಕೆರೆಗಳು ಒಣಗಿವೆ.

ಅಡಿಕೆ ತೋಟಗಳಿಗೆ ನೀರಾವರಿಗಾಗಿ ರೈತರು ಅವಲಂಬಿಸಿದ್ದ ಕೊಳವೆಬಾವಿಗಳಲ್ಲಿಯೂ ನೀರಿನ ಪ್ರಮಾಣ ಕುಸಿದಿದ್ದು, ಬೇಸಿಗೆಯಲ್ಲಿ ತೋಟಗಳನ್ನು ಉಳಿಸಿಕೊಳ್ಳುವುದು ಸವಾಲಾಗಿದೆ. ಕಾಲುವೆ ನಿರ್ಮಾಣಕ್ಕಾಗಿ ಅವೈಜ್ಞಾನಿಕವಾಗಿ ಸ್ಫೋಟಕಗಳನ್ನು ಬಳಸಿ, ಸ್ಫೋಟ ನಡೆಸಿರುವುದರಿಂದ ಗ್ರಾಮದಲ್ಲಿನ ಬಡವರ ಮನೆಗಳು ಜಖಂಗೊಂಡಿವೆ. ಹಾನಿಗೊಂಡ ಮನೆಗಳಿಗೆ ಇನ್ನೂ ಸೂಕ್ತ ಪರಿಹಾರ ನೀಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಗ್ರಾಮಗಳ ವ್ಯಾಪ್ತಿಯ ಕೆರೆಗಳನ್ನು ಜನವರಿಯಿಂದ ಮೇ ತಿಂಗಳವರೆಗೆ ತುಂಬಿಸುವಂತೆ ನೀರಾವರಿ ಸಚಿವರು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಾಮಗಾರಿಗಾಗಿ ಸಾಮಗ್ರಿಗಳನ್ನು ಸಾಗಿಸಲು ಲಾರಿಗಳು , ಇತರ ವಾಹನಗಳು ಸಂಚರಿಸಿರುವುದರಿಂದ ಕೆ. ಕಣಬೂರು ಕಾಲೊನಿ ವ್ಯಾಪ್ತಿಯ ಸೇತುವೆ ಶಿಥಿಲಾವಸ್ಥೆಗೆ ತಲುಪಿದೆ. ಮುತ್ತಿನಕೊಪ್ಪ-ಸಾತೋಳಿ ಸಂಪರ್ಕ ರಸ್ತೆ ಹಾಗೂ ಸಾತೋಳಿ-ನರಸಿಂಹರಾಜಪುರ-ಉಂಬಳೇಬೈಲು ಸಂಪರ್ಕಿಸುವ ರಸ್ತೆ ಸಂಪೂರ್ಣ ಹಾಳಾಗಿ ಸಂಚಾರಕ್ಕೆ ಅಸಾಧ್ಯವಾಗಿದೆ ಎನ್ನುತ್ತಾರೆ ಸಾರ್ವಜನಿಕರು.

ಈ ರಸ್ತೆಗಳು ಹಾಗೂ ಸೇತುವೆಗಳ ನಿರ್ಮಾಣಕ್ಕೆ ಕರೆದಿರುವ ಟೆಂಡರ್ ಮೂರು ತಿಂಗಳು ಕಳೆದರೂ ಅಂತಿಮಗೊಳಿಸದೆ ಕಾಮಗಾರಿ ರದ್ದುಪಡಿಸುವ ಯತ್ನ ನಡೆಯುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಹೊಸ ನಾಲೆ ನಿರ್ಮಾಣದಿಂದ ಈ ಹಿಂದೆ ರೈತರು ಕೃಷಿ ಕೆಲಸಕ್ಕಾಗಿ ಬಳಸುತ್ತಿದ್ದ 4 ಕಿ.ಮೀ ರಸ್ತೆ ಕೆಸರುಮಯವಾಗಿದೆ. ಈ ಭಾಗದಲ್ಲಿ ಕಾಡಾನೆಗಳ ಉಪಟಳವೂ ಹೆಚ್ಚಿರುವುದರಿಂದ ರಸ್ತೆಯನ್ನು ಶೀಘ್ರ ಅಭಿವೃದ್ಧಿಪಡಿಸಬೇಕು ಎಂದು ಜನರು ಆಗ್ರಹಿಸಿದ್ದಾರೆ.


**ಲಕ್ಷಾಂತರ ಮರಗಳ ಹನನ**


ಉದಯವಾಹಿನಿ ಚಿತ್ರ

> ಭದ್ರಾ ಜಲಾಶಯ ಮುಳುಗಡೆಯಾಗಿ ಪುನರ್ವಸತಿ ಪಡೆದವರು ತುಂಗಾ ಮತ್ತು ಭದ್ರಾ ನದಿಗಳ ಮಧ್ಯದ 8 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದೇವೆ. ಹೊಸ ಯೋಜನೆಯಿಂದ ಮತ್ತಷ್ಟು ತೊಂದರೆ ಎದುರಿಸುತ್ತಿದ್ದೇವೆ. ಸಾಕಷ್ಟು ಮಳೆಯಾದರೂ ಇಲ್ಲಿನ ನಿವಾಸಿಗಳಿಗೆ ನೀರಿನ ಕೊರತೆ ಉಂಟಾಗಿದೆ. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಕಾಮಗಾರಿ ಸ್ಥಗಿತಗೊಳಿಸಿ. ಪ್ರತಿಭಟನೆ ನಡೆಸಲಾಗುವುದು. -ರವಿಕುಮಾರ್, ಗ್ರಾಮಸ್ಥ

> ಭದ್ರಾ ಮೇಲ್ದಂಡೆ ಯೋಜನೆ ಪ್ರಥಮ ಹಂತದ ಕಾಮಗಾರಿ ಕೈಗೊಂಡಿರುವ ಗ್ರಾಮಗಳ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಸೇತುವೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿ ಅನುಮೋದನೆ ದೊರೆತಿದೆ. ಎರಡು-ಮೂರು ದಿನಗಳಲ್ಲಿ ಕಾಮಗಾರಿ ಆರಂಭವಾಗಲಿದೆ. -(ಎಇಇ) ಗೋವರ್ಧನ್ ಭದ್ರಾ ಮೇಲ್ದಂಡೆ ಯೋಜನೆಯ ಸಹಾಯಕ ಕಾರ್ಯನಿರ್ವಹಣಾಧಿಕಾರಿ

## ಇರಾನ್ ಆಡಳಿತ ಅಸ್ತಿತ್ವದಲ್ಲೇ ಇದ್ದರೂ ದುರ್ಬಲ:ಜಾನ್ ರ್‍ಯಾಟ್‌ಕ್ಲಿಫ್



**ವಾಷಿಂಗ್ಟನ್:** ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ಅವರು ಇರಾನ್ ಆಡಳಿತವು ಇನ್ನೂ ಅಸ್ತಿತ್ವದಲ್ಲಿದ್ದರೂ, ಅದರ ಸೈನಿಕ ಹಾಗೂ ನಾಯಕತ್ವ ಸಾಮರ್ಥ್ಯ ಗಂಭೀರವಾಗಿ ಕುಗ್ಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ ಕಾಂಗ್ರೆಸ್‌ನಲ್ಲಿ ನಡೆದ ಮಹತ್ವದ ವಿಚಾರಣೆಯಲ್ಲಿ ಮಾತನಾಡಿದ ಅವರು, ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಗಳ ಪರಿಣಾಮವಾಗಿ ಇರಾನ್‌ನ ಸೈನಿಕ ಸಾಮರ್ಥ್ಯವು ಬಹುಮಟ್ಟಿಗೆ ನಾಶವಾಗಿದೆ ಎಂದು ಹೇಳಿದರು. ಫೆಬ್ರವರಿ ಅಂತ್ಯದ ವೇಳೆ ಆರಂಭವಾದ ಯುದ್ಧದ ಬಳಿಕ ನಡೆದ ಮೊದಲ ಸಾರ್ವಜನಿಕ ಗುಪ್ತಚರ ವಿವರಣೆ ಇದಾಗಿದೆ.

ವಿಚಾರಣೆಯಲ್ಲಿ ಜಾನ್ ರ್‍ಯಾಟ್‌ಕ್ಲಿಫ್ ಸೇರಿದಂತೆ ಸಿಐಎ, ಎಫ್‌ಬಿಐ ಹಾಗೂ ಇತರ ಪ್ರಮುಖ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಈ ವೇಳೆ ಇರಾನ್ ಅಮೆರಿಕಕ್ಕೆ ತಕ್ಷಣದ ಭೀತಿ ಉಂಟುಮಾಡಿತ್ತೇ ಎಂಬ ಪ್ರಶ್ನೆಗೆ ಗಬ್ಬಾರ್ಡ್ ಸ್ಪಷ್ಟ ಉತ್ತರ ನೀಡುವುದನ್ನು ತಪ್ಪಿಸಿದರು. ತಕ್ಷಣದ ಭೀತಿ ಏನು ಎಂಬುದನ್ನು ನಿರ್ಧರಿಸುವ ಅಧಿಕಾರ ರಾಷ್ಟ್ರಪತಿಗೇ ಇದೆ ಎಂದು ಅವರು ಹೇಳಿದರು.

ಈ ನಡುವೆ, ಅಮೆರಿಕದ ಮಾಜಿ ಕೌಂಟರ್‌ಟೆರರಿಸಂ ಕೇಂದ್ರ ನಿರ್ದೇಶಕ ಜೊಕೆಂಟ್ ಅವರು ರಾಜೀನಾಮೆ ನೀಡಿ, ಇರಾನ್ ಅಮೆರಿಕಕ್ಕೆ ತಕ್ಷಣದ ಅಪಾಯವಾಗಿರಲಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇದನ್ನು ರಾಟ್‌ಕ್ಲಿಫ್ ತಳ್ಳಿ ಹಾಕಿ, ಇರಾನ್ ದೀರ್ಘಕಾಲದಿಂದಲೇ ಅಮೆರಿಕಕ್ಕೆ ಅಪಾಯಕಾರಿಯಾಗಿದೆ ಎಂದು ಹೇಳಿದರು. ಅಮೆರಿಕದ ಮಾಜಿ ರಾಷ್ಟ್ರಪತಿ ಟ್ರಂಪ್ ಅವರ ಆಡಳಿತವು ಇರಾನ್ ಮೇಲೆ ದಾಳಿ ನಡೆಸಲು ಕಾರಣವಾಗಿ, ಅದರ ಅಣ್ವಸ್ತ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಉಲ್ಲೇಖಿಸಿತ್ತು. ಆದರೆ ಈ ವಿಚಾರದಲ್ಲಿ ರಾಜಕೀಯ ವಲಯದಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಇನ್ನೂ, ಹೊರ್ಮುಝ್ ಕಣಿವೆಯಂತಹ ಮಹತ್ವದ ತೈಲ ಸಾಗಾಣಿಕೆ ಮಾರ್ಗದ ಮೇಲೆ ಇರಾನ್ ಹಿಡಿತ ಸಾಧಿಸುವ ಸಾಧ್ಯತೆ ಬಗ್ಗೆ ಅಮೆರಿಕ ಗುಪ್ತಚರ ಸಂಸ್ಥೆಗಳು ಮುಂಚಿತವಾಗಿಯೇ ಎಚ್ಚರಿಕೆ ನೀಡಿದ್ದವು ಎಂದು ಗಬ್ಬಾರ್ಡ್ ಹೇಳಿದರು.

### ● ಭಾರತದ ಕ್ಷಿಪಣಿಗಳ ಮುಂದೆ ನಮ್ಮದೇನೂ ಇಲ್ಲ – ಇಸ್ಲಾಮಾಬಾದ್

# ಯುಎಸ್ ಓಲೈಸಲು ಹೋಗಿ ಸಿಕ್ಕಾಕಿಕೊಂಡ ಪಾಕ್



**ಇಸ್ಲಾಮಾಬಾದ್:** ಅಮೆರಿಕಕ್ಕೆ ಪಾಕಿಸ್ತಾನವೂ ಸೇರಿದಂತೆ ಹಲವು ರಾಷ್ಟ್ರಗಳ ಪರಮಾಣು ಬೆದರಿಕೆ ಇದೆ ಎನ್ನುವ ಅಲ್ಲಿನ ಗುಪ್ತಚರ ಇಲಾಖೆಯ ವರದಿಗೆ, ಪಾಕ್ ಬೆಚ್ಚಿಬಿದ್ದಿದೆ. ಈಗಾಗಲೇ ಆರ್ಥಿಕವಾಗಿ ಜರ್ಝರಿತರಾಗಿರುವ ಪಾಕಿಸ್ತಾನಕ್ಕೆ ಎಲ್ಲಿ ಈ ವರದಿ ಬುಡಕ್ಕೆ ಬರುತ್ತೋ ಎಂದು ಅಮೆರಿಕಕ್ಕೆ ಸ್ಪಷ್ಟನೆಯನ್ನು ನೀಡಿದೆ.

ರಾಜತಾಂತ್ರಿಕವಾಗಿ ಹೇಳಿಕೆಯನ್ನು ನೀಡುವುದನ್ನು ಬಿಟ್ಟು, ಕೊಟ್ಟ ಸ್ಪಷ್ಟನೆಯಲ್ಲಿ ಇನ್ನಷ್ಟು ಆಂತರಿಕ ಶಕ್ತಿಯನ್ನು ಬಯಲು ಮಾಡಿಕೊಂಡಿದೆ. ಕಳವಳಕಾರಿಯಾಗಿರುವುದು ನಮ್ಮ ಪರಮಾಣು ಕಾರ್ಯಕ್ರಮವಲ್ಲ, ಬದಲಿಗೆ ಭಾರತದ ಶಸ್ತ್ರಾಸ್ತ್ರಗಳ ಮುಂದೆ ನಮ್ಮದೇನೂ ಇಲ್ಲ ಎಂದು ಪರೋಕ್ಷವಾಗಿ ಹೇಳಿದೆ.

- **ಅಮೆರಿಕಕ್ಕೆ ಪಾಕ್ ನಿಂದ ಪರಮಾಣು ಬೆದರಿಕೆ ವರದಿ : ಭಾರತದ ಕ್ಷಿಪಣಿ ಸಾಮರ್ಥ್ಯ ಕಳವಳಕಾರಿ**
- **ಯುಎಸ್'ನನ್ನು ಓಲೈಸುವ ತಂತ್ರಗಾರಿಕೆ ವಿಫಲ ಪರಮಾಣು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಪಾಕಿಸ್ತಾನಕ್ಕೆ ಹಿನ್ನಡೆ**
- **ಅಮೆರಿಕದ ವರದಿಗೆ ಪಾಕಿಸ್ತಾನ ತಳಮಳ ಅಮೆರಿಕದ ಮುಂದೆ ಬೆತ್ತಲಾದ ಪಾಕಿಸ್ತಾನ**

**ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮಗಳು:** ಪಾಕಿಸ್ತಾನದ ದೀರ್ಘ ಶ್ರೇಣೀಯ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಅಮೆರಿಕವನ್ನು ಗುರಿಯಾಗಿಸುವ ಸಾಮರ್ಥ್ಯವನ್ನು ಹೊಂದಿದೆ. ಆ ದೇಶದ ಹೆಚ್ಚಿನ ಪರಮಾಣು ಕಾರ್ಯಕ್ರಮಗಳು, ಅಮೆರಿಕವನ್ನು ಟಾರ್ಗೆಟ್ ಮಾಡುವ ರೀತಿಯಲ್ಲಿ ಸಿದ್ಧಪಡಿಸಲಾಗುತ್ತಿದೆ ಎಂದು ಇಂಟೆಲ್ ಮುಖ್ಯಸ್ಥೆ ತುಳಸಿ ಗಬ್ಬಾರ್ಡ್ ಇತ್ತೀಚೆಗೆ ವರದಿಯನ್ನು ನೀಡಿದ್ದರು. ಈ ವರದಿಯು ಪಾಕಿಸ್ತಾನದಲ್ಲಿ ಸಂಚಲನವನ್ನು ಮೂಡಿಸಿತ್ತು. ಮತ್ತು, ಇದಕ್ಕೆ ಸ್ಪಷ್ಟನೆ ಕೊಡುವ ಅನಿವಾರ್ತೆಗೆ ಪಾಕ್ ಬಿದ್ದಿತ್ತು. ಅಂದ್ರಾಬಿ ಸ್ಪಷ್ಟನೆಯನ್ನು ಮುಂದುವರಿಸುತ್ತಾ, ಭಾರತದ ಕ್ಷಿಪಣಿ ಸಾಮರ್ಥ್ಯದ ಮುಂದೆ ನಮ್ಮದೇನೂ ಇಲ್ಲ. ನಮ್ಮದು ಖಂಡಾಂತರ ವ್ಯಾಪ್ತಿಗಿಂತ ಕಮ್ಮಿಯಿದೆ. ಭಾರತವು 12 ಸಾವಿರ ಕಿಲೋಮೀಟರ್‌ಗಿಂತಲೂ ಹೆಚ್ಚು ವ್ಯಾಪ್ತಿಯನ್ನು ಹೊಂದಿರುವ ಕ್ಷಿಪಣಿ ಸಾಮರ್ಥ್ಯವನ್ನು ಹೊಂದಿದೆ. ಪ್ರಾದೇಶಿಕ ಭದ್ರತೆಯ ಆಲೋಚನೆಗಳನ್ನು ಮೀರಿ ಭಾರತ ತನ್ನ ಶಸ್ತ್ರಾಸ್ತ್ರವನ್ನು ವೃದ್ಧಿಗೊಳಿಸುತ್ತಿದೆ. ಇದು, ಖಂಡಿತವಾಗಿಯೂ, ನೆರೆಹೊರೆಯ ರಾಷ್ಟ್ರಗಳಿಗೆ ಕಳವಳಕಾರಿ ವಿಚಾರವಾಗಿದೆ ಎಂದು ಹೇಳಿಕೆಯನ್ನು ನೀಡಿದ್ದಾರೆ.

### ನಮ್ಮ ಗುರಿ ಏನಿದ್ದರೂ ಇಂಡಿಯಾ ಎಂದ ಪಾಕ್

ತನ್ನ ದೇಶದ ಕ್ಷಿಪಣಿ ಸಾಮರ್ಥ್ಯದ ಕುರಿತು ಅಮೆರಿಕದ ಗುಪ್ತಚರ ವರದಿಯನ್ನು ಪಾಕಿಸ್ತಾನ ಸ್ಪಷ್ಟವಾಗಿ ತಿರಸ್ಕರಿಸಿದೆ. ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಹೋಗಿ ಪಾಕಿಸ್ತಾನವು, ಭಾರತವನ್ನು ಎಳೆದು ತಂದಿದೆ. ನಮ್ಮ ದೇಶದ ಕ್ಷಿಪಣಿ ಕಾರ್ಯಕ್ರಮಗಳು ಖಂಡಾಂತರ ವ್ಯಾಪ್ತಿಗಿಂತ ಕೆಳಗಿದೆ. ನಮ್ಮ ಪರಮಾಣು ಕಾರ್ಯಕ್ರಮಗಳು, ಭಾರತದ ವಿರುದ್ಧ ಕನಿಷ್ಠ ಪ್ರತಿರೋಧವನ್ನು ತೋರುವ ಸಿದ್ಧಾಂತವನ್ನು ಇಟ್ಟುಕೊಂಡು ಸಿದ್ಧಪಡಿಸಲಾಗಿದೆ. ಪಾಕಿಸ್ತಾನವು, ಅಮೆರಿಕದ ಜೊತೆಗೆ ಪರಸ್ಪರ ಗೌರವ ಮತ್ತು ಸತ್ಯದ ಆಧಾರದ ಮೇಲೆ ರಚನಾತ್ಮಕವಾಗಿ ತೊಡಗಿಸಿಕೊಳ್ಳಲು ಬದ್ಧವಾಗಿದೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ವಕ್ತಾರರಾದ ತಾಹಿರ್ ಅಂದ್ರಾಬಿ ಹೇಳಿದ್ದಾರೆ.

### ಪಾಕ್ ಹೇಳಿಕೆಗೆ ಭಾರತದ ಪ್ರತಿಕ್ರಿಯೆ

ಪಾಕಿಸ್ತಾನದ ಈ ಹೇಳಿಕೆಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರತಿಕ್ರಿಯಿಸಿದೆ. ಪಾಕಿಸ್ತಾನವು ರಹಸ್ಯವಾಗಿ ಪರಮಾಣು ಪ್ರಸರಣ ಮಾಡಿದ ಇತಿಹಾಸವನ್ನು ಹೊಂದಿದೆ. ಪಾಕಿಸ್ತಾನದ ಸ್ಪಷ್ಟನೆಯಲ್ಲೇ ಅವರು ಅದನ್ನು ಒಪ್ಪಿಕೊಂಡಿದ್ದಾರೆ. ರಹಸ್ಯ ಪರಮಾಣು ಕಾರ್ಯಾಚರಣೆಗಳಿಂದ ಜಗತ್ತಿಗೆ ಎಂತಹ ಅಪಾಯವಿದೆ ಎನ್ನುವುದು ಅವರ ಬಾಯಿಯಿಂದಲೇ ಬಂದಿದೆ ಎಂದು ರಣಧೀರ್ ಜೈಸ್ವಾಲ್ ತಿರುಗೇಟು ನೀಡಿದ್ದಾರೆ.

### ತುಳಸಿ ಗಬ್ಬಾರ್ಡ್ ಹೇಳಿದ್ದೇನು

ಅಮೆರಿಕದ ಸೆನೆಟ್ ಗುಪ್ತಚರ ಸಮಿತಿಯ ಮುಂದೆ 2026ರ ವಾರ್ಷಿಕ ಬೆದರಿಕೆ ಮೌಲ್ಯಮಾಪನ ವರದಿಯನ್ನು ಗುಪ್ತಚರ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಮಂಡಿಸಿದ್ದರು. ವರದಿಯಲ್ಲಿ, ಪಾಕಿಸ್ತಾನದ ಬಗ್ಗೆ ಗಂಭೀರ ಕಳವಳವನ್ನು ವ್ಯಕ್ತಪಡಿಸಿದ್ದರು. ರಷ್ಯಾ, ಚೀನಾ, ಉತ್ತರ ಕೊರಿಯಾ, ಪಾಕಿಸ್ತಾನ ಮುಂತಾದ ರಾಷ್ಟ್ರಗಳಿಂದ ಅಮೆರಿಕಕ್ಕೆ ಬೆದರಿಕೆ ಇದೆ ಎಂದು ಹೇಳಿದ್ದರು. ಪಾಕಿಸ್ತಾನವು ದೀರ್ಘ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಭವಿಷ್ಯದಲ್ಲಿ ಇವು ಅಮೆರಿಕದ ಭೂಭಾಗವನ್ನು ತಲುಪುವ ಸಾಮರ್ಥ್ಯ ಹೊಂದಲಿವೆ ಎನ್ನುವ ಅಂಶ, ಗಬ್ಬಾರ್ಡ್ ಸಲ್ಲಿಸಿದ ವರದಿಯಲ್ಲಿ ಉಲ್ಲೇಖವಾಗಿತ್ತು.

## ಕುವೈತ್ ತೈಲ ಸಂಸ್ಕರಣಾಗಾರದ ಮೇಲೆ ಇರಾನ್ ಡ್ರೋನ್ ದಾಳಿ

**ದುಬೈ:** ಮುಂಜಾನೆ ಕುವೈತ್ ತೈಲ ಸಂಸ್ಕರಣಾಗಾರದ ಮೇಲೆ ಇರಾನಿನ ಡ್ರೋನ್‌ಗಳು ದಾಳಿ ನಡೆಸಿವೆ ಮತ್ತು ಇಸ್ರೇಲ್‌ನಲ್ಲಿ ಬೆಂಕಿಯ ಎಚ್ಚರಿಕೆ ನೀಡುವ ಸೈರನ್‌ಗಳು ಸದ್ದು ಮಾಡಿವೆ ಆದರೆ ಇಸ್ರೇಲ್ ಪರ್ಷಿಯನ್ ಹೊಸ ವರ್ಷವನ್ನು ಆಚರಿಸುತ್ತಿದ್ದಂತೆ ಇರಾನ್ ಮೇಲೆ ದಾಳಿ ನಡೆಸುತ್ತಿದ್ದಂತೆ ಟೆಹ್ರಾನ್‌ನಲ್ಲಿ ಸ್ಫೋಟಗಳು ಭುಗಿಲೆದ್ದವು.

ಜಾಗತಿಕ ಆರ್ಥಿಕತೆಯನ್ನು ಬೆಚ್ಚಿಬೀಳಿಸಿದ ಯುದ್ಧವು ತನ್ನ ಮೂರನೇ ವಾರದ ಅಂತ್ಯವನ್ನು ಸಮೀಪಿಸುತ್ತಿದ್ದಂತೆ, ಇರಾನ್ ಗಲ್ಫ್ ಪ್ರದೇಶದ ಇಂಧನ ರಚನೆಯ ಮೇಲಿನ ದಾಳಿಯನ್ನು ನಿಲ್ಲಿಸುವ ಯಾವುದೇ ಲಕ್ಷಣಗಳನ್ನು ತೋರಿಸಲಿಲ್ಲ, ಏಕೆಂದರೆ ಕುವೈತ್ ತನ್ನ ಮಿನಾ ಅಲ್-ಅಹ್ಮದಿ ತೈಲ ಸಂಸ್ಕರಣಾಗಾರದ ಮೇಲೆ ಡ್ರೋನ್ ದಾಳಿಗಳು ಬೆಂಕಿಯನ್ನು ಹುಟ್ಟುಹಾಕಿದವು ಮತ್ತು ಸಿಬ್ಬಂದಿ ಬೆಂಕಿಯನ್ನು ನಿಯಂತ್ರಿಸಲು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದೆ.ದಿನಕ್ಕೆ ಸುಮಾರು 730,000 ಬ್ಯಾರೆಲ್ ತೈಲವನ್ನು ಸಂಸ್ಕರಿಸಬಲ್ಲ ಸಂಸ್ಕರಣಾಗಾರವು ಮತ್ತೊಂದು ಇರಾನಿನ ದಾಳಿಯಲ್ಲಿ ಹಾನಿಗೊಳಗಾಗಿದೆ. ಇದು



ಪರ್ಷಿಯನ್ ಕೊಲ್ಲಿಯ ಸಣ್ಣ, ತೈಲ-ಸಮೃದ್ಧ ರಾಷ್ಟ್ರವಾದ ಕುವೈತ್‌ನಲ್ಲಿರುವ ಮೂರು ತೈಲ ಸಂಸ್ಕರಣಾಗಾರಗಳಲ್ಲಿ ಒಂದಾಗಿದೆ.

ಇಸ್ರೇಲ್ ಪರ್ಷಿಯನ್ ಕೊಲ್ಲಿಯಲ್ಲಿ ಇರಾನ್‌ನ ಬೃಹತ್ ಸೌತ್ ಪಾರ್ಸ್ ಕಡಲಾಚೆಯ ನೈಸರ್ಗಿಕ ಅನಿಲ ಕ್ಷೇತ್ರವನ್ನು ಬಾಂಬ್ ದಾಳಿ ಮಾಡಿದ ನಂತರ ಇರಾನ್ ಗಲ್ಫ್ ಅರಬ್ ರಾಜ್ಯಗಳಲ್ಲಿನ ಇಂಧನ ತಾಣಗಳ ಮೇಲೆ ತನ್ನ ದಾಳಿಯನ್ನು ಹೆಚ್ಚಿಸಿತು.ದುಬೈನಲ್ಲಿ ಸ್ಫೋಟಗಳು ಸಂಭವಿಸಿದ್ದು, ಬಹ್ರೇನ್‌ನ ಗೋದಾಮು ಬೆಂಕಿಗಾಹುತಿಯಾಗಿದೆ, ನಗರದ ಮೇಲೆ ಜನರು ಈದ್ ಅಲ್-ಫಿತರ್ ಆಚರಿಸುತ್ತಿದ್ದಾಗ ವಾಯು ರಕ್ಷಣಾ ಪಡೆಗಳು ಮುಂಜಾನೆ ಬರುತ್ತಿರುವ ಬೆಂಕಿಯನ್ನು ತಡೆದಾಗ ಭಾರೀ ಸ್ಫೋಟಗಳು ಸಂಭವಿಸಿವೆ.

ಬಹ್ರೇನ್‌ನ ಆಂತರಿಕ ಸಚಿವಾಲಯವು ಗೋದಾಮಿನ ಮೇಲೆ ತಡೆಹಿಡಿಯಲಾದ ಉತ್ಕ್ಷೇಪಕದ ಚೂರುಗಳು ಬಿದ್ದ ನಂತರ ಬೆಂಕಿ ಕಾಣಿಸಿಕೊಂಡಿತು ಮತ್ತು ಸೌದಿ ಅರೇಬಿಯಾ ತನ್ನ ತೈಲ-ಸಮೃದ್ಧ ಪೂರ್ವ ಪ್ರಾಂತ್ಯವನ್ನು ಗುರಿಯಾಗಿಸಿಕೊಂಡು ಹಲವಾರು ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ವರದಿ ಮಾಡಿದೆ.

**ಪತ್ರಕರ್ತರ ಬಳಿಯೇ ಬಿತ್ತು ಇಸ್ರೇಲ್ ಕ್ಷಿಪಣಿ ವರದಿಗಾರ, ಕ್ಯಾಮೆರಾಮ್ಯಾನ್ ಪಾರು:** ಬೈರುತ್, ಮಾ.20- ದಕ್ಷಿಣ ಲೆಬನಾನ್‌ನಲ್ಲಿ ಯುದ್ಧದ ಲೈವ್ ವರದಿಗಾರಿಕೆ ಮಾಡುತ್ತಿದ್ದ ರಷ್ಯಾದ ಮಾಧ್ಯಮವೊಂದರ ವರದಿಗಾರನಪಕ್ಕದಲ್ಲೇ ಇಸ್ರೇಲ್ ಕ್ಷಿಪಣಿ ಬಿದ್ದಿದ್ದು, ಅದೃಷ್ಟವಶಾತ್ ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆತನಿಂದ ಸುಮಾರು 10 ಮೀಟರ್ ಅಂತರದಲ್ಲಿ ಬಾಂಬ್ ಬಿದ್ದಿದ್ದು, ವರದಿಗಾರ ಹಾಗೂ ಕ್ಯಾಮೆರಾಮೆನ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವರದಿಯಾಗಿದೆ.

## ಬಂಗಾಳಕ್ಕೆ ಮುಸ್ಲಿಂ ಸಿಎಂ ಅಥವಾ ಡಿಸಿಎಂ ಖಚಿತ

**ಕೋಲ್ಕತಾ:** ಮುರ್ಷಿದಾಬಾದ್‌ನಲ್ಲಿ ಹೊಸ ಬಾಬರಿ ಮಸೀದಿ ನಿರ್ಮಿಸುವ ಭಾವನಾತ್ಮಕ ವಿಷಯ ಹಾಗೂ ಮುಸ್ಲಿಮರಲ್ಲಿ ಹೆಚ್ಚುತ್ತಿರುವ ರಾಜಕೀಯ ಪ್ರತಿಪಾದನೆ 2026ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೇಲೆ ಪ್ರಭಾವ ಬೀರಬಹುದು ಎಂದು ಟಿಎಂಸಿ ಮಾಜಿ ಶಾಸಕ ಹುಮಾಯೂನ್ ಕಬೀರ್ ನಂಬಿದ್ದಾರೆ.



ಪಿಟಿಐಗೆ ನೀಡಿದ ಸಂದರ್ಶನದಲ್ಲಿ, ಹೆಚ್ಚಿನ ಪಣತೊಟ್ಟ ಚುನಾವಣೆಗೆ ಮುನ್ನ ಆಮ್ ಜನತಾ ಉನ್ನಾಯನ್ ಪಕ್ಷ (ಎಜೆಯುಪಿ) ಸ್ಥಾಪಿಸಿರುವ ಕಬೀರ್ ಅವರು, ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಮುಂದಿನ ರಾಜ್ಯ ಸರ್ಕಾರದಲ್ಲಿ ಮುಸ್ಲಿಂ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಯನ್ನು ನೋಡಬಹುದು ಎಂದು ಹೇಳಿದ್ದಾರೆ. ಎಐಎಂಐಎಂ ಜೊತೆ ಮೈತ್ರಿ ಮಾಡಿಕೊಂಡು ತಮ್ಮ ಪಕ್ಷ 182 ಸ್ಥಾನಗಳಲ್ಲಿ ಸ್ಪರ್ಧಿಸಲಿದ್ದು, ತೀರ್ಪು ಮುರಿದ ಜನಾದೇಶ ಬಂದರೆ ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರವಹಿಸಬಹುದು ಎಂದು ಅವರು ಹೇಳಿದರು. ನಮ್ಮ ಪಕ್ಷ ಸರ್ಕಾರ ರಚಿಸಿದರೆ, ಮೊದಲ ಬಾರಿಗೆ ಮುಸ್ಲಿಂ ಮುಖ್ಯಮಂತ್ರಿ ಇರುತ್ತಾರೆ. ಆದರೆ ನಾವು ಸರ್ಕಾರ ರಚಿಸದಿದ್ದರೂ, ಯಾವುದೇ ಸರ್ಕಾರವನ್ನು ರಚಿಸಲಾಗದಷ್ಟು ಸಂಖ್ಯೆಯನ್ನು ತರುತ್ತೇವೆ, ಎಂದು ಕಬೀರ್ ಹೇಳಿದರು.

ಆ ಪರಿಸ್ಥಿತಿಯಲ್ಲಿ ನಾನು ಉಪಮುಖ್ಯಮಂತ್ರಿ ಹುದ್ದೆಯನ್ನು ಬೇಡುತ್ತೇನೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ? ಈ ಚುನಾವಣೆಯ ನಂತರ ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಅಲ್ಲದಿದ್ದರೆ ಮುಸ್ಲಿಂ ಉಪ ಮುಖ್ಯಮಂತ್ರಿ ಇರುತ್ತಾರೆ. ನೀವು ಅದನ್ನು ನನ್ನಿಂದ ಲಿಖಿತವಾಗಿ ಪಡೆಯಬಹುದು ಎಂದು ಅವರು ಹೇಳಿದರು.

ಪಕ್ಷದ ನಾಯಕತ್ವದೊಂದಿಗಿನ ಸಾರ್ವಜನಿಕ ಭಿನ್ನಾಭಿಪ್ರಾಯಗಳ ಸರಣಿಯ ನಂತರ ಕಳೆದ ವರ್ಷ ಟಿಎಂಸಿಯಿಂದ ಅಮಾನತುಗೊಂಡಿದ್ದ ಕಬೀರ್ ಅವರು, ಇತ್ತೀಚಿನ ತಿಂಗಳುಗಳಲ್ಲಿ ಅಯೋಧ್ಯೆಯ ಕೆಡವಲಾದ ಬಾಬರಿ ಮಸೀದಿಯ ಮಾದರಿಯಲ್ಲಿ ಮುರ್ಷಿದಾಬಾದ್‌ನಲ್ಲಿ ಮಸೀದಿ ನಿರ್ಮಿಸುವ ಪ್ರಸ್ತಾಪದೊಂದಿಗೆ ರಾಜಕೀಯ ಗಮನ ಸೆಳೆದಿದ್ದಾರೆ. ಈ ಯೋಜನೆ ಆಡಳಿತ ಮತ್ತು ವಿರೋಧ ಪಕ್ಷಗಳಿಂದ ತೀವ್ರ ಪ್ರತಿಕ್ರಿಯೆಗಳನ್ನು ಉಂಟುಮಾಡಿದೆ.

## ಹೊಸ ಆದಾಯ ತೆರಿಗೆ ಕಾಯ್ದೆ-2025 ನಿಯಮಗಳ ಕುರಿತು ಅಧಿಸೂಚನೆ

**ನವದೆಹಲಿ:** ಕೇಂದ್ರ ನೇರ ತೆರಿಗೆ ಮಂಡಳಿ ಇಂದು ಹೊಸ ಆದಾಯ ತೆರಿಗೆ ಕಾಯ್ದೆ-2025ಕ್ಕೆ ಸಂಬಂಧಿಸಿದ ನಿಯಮಗಳನ್ನು ಕುರಿತು ಅಧಿಸೂಚನೆ ಹೊರಡಿಸಿದೆ. ಈ ನಿಯಮಗಳ ಪ್ರಕಾರ ವೇತನಭತ್ಯೆ ಪಡೆಯುವವರಿಗೆ ಮನೆ ಬಾಡಿಗೆ ಭತ್ಯೆ ಮೇಲೆ ಹೆಚ್ಚುವರಿ ತೆರಿಗೆ ಸೌಲಭ್ಯ ಒದಗಿಸಲಾಗಿದ್ದು, ಬಾಡಿಗೆದಾರ , ಮಾಲೀಕ ಹೆಸರು ಬಹಿರಂಗಪಡಿಸುವುದು ಕಡ್ಡಾಯವಾಗಿರಲಿದೆ.

ಈ ಆದಾಯ ತೆರಿಗೆ ನಿಯಮಗಳು, 2026 ಏಪ್ರಿಲ್ 1ರಿಂದ ಜಾರಿಗೆ ಬರಲಿದ್ದು, ಕಳೆದ ವರ್ಷ ಸಂಸತ್ತಿನಲ್ಲಿ ಅಂಗೀಕರಿಸಲಾದ ಸರಳೀಕೃತ ನೇರ ತೆರಿಗೆ ಕಾಯ್ದೆಯನ್ನು ಕಾರ್ಯರೂಪಕ್ಕೆ ತರುವುದಾಗಿದೆ. ಗೆಜೆಟ್ ಅಧಿಸೂಚನೆಯ ಪ್ರಕಾರ, ಈ ನಿಯಮಗಳನ್ನು ಆದಾಯ ತೆರಿಗೆ ನಿಯಮಗಳು, 2026 ಎಂದು ಕರೆಯಲಾಗುವುದು ಮತ್ತು ಅವು 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿವೆ ಎಂದು ತಿಳಿಸಲಾಗಿದೆ. 2025ರ ಆಗಸ್ಟ್ 12ರಂದು ಸಂಸತ್ತು ಹೊಸ ಆದಾಯ ತೆರಿಗೆ ಮಸೂದೆಯನ್ನು ಅಂಗೀಕರಿಸಿತ್ತು. ಇದು ಸುಮಾರು ಆರು ದಶಕಗಳ ಹಳೆಯ 1961ರ ಆದಾಯ ತೆರಿಗೆ ಕಾಯ್ದೆಯನ್ನು ಬದಲಿಸುತ್ತದೆ.




ಹೊಸ ಕಾಯ್ದೆಯಲ್ಲಿ ಯಾವುದೇ ಹೊಸ ತೆರಿಗೆ ದರಗಳನ್ನು ವಿಧಿಸದೇ, ಕಾನೂನಿನ ಭಾಷೆಯನ್ನು ಸರಳಗೊಳಿಸಲಾಗಿದೆ. ಈ ಕಾಯ್ದೆಯಡಿ ಅನಾವಶ್ಯಕ ಹಾಗೂ ಹಳೆಯ ವಿಧಿಗಳನ್ನು ತೆಗೆದುಹಾಕಲಾಗಿದ್ದು, ವಿಭಾಗಗಳ ಸಂಖ್ಯೆಯನ್ನು 819ರಿಂದ 536ಕ್ಕೆ ಹಾಗೂ ಅಧ್ಯಾಯಗಳನ್ನು 47ರಿಂದ 23ಕ್ಕೆ ಕಡಿತಗೊಳಿಸಲಾಗಿದೆ. ಪದಗಳ ಸಂಖ್ಯೆ 5.12 ಲಕ್ಷದಿಂದ 2.6 ಲಕ್ಷಕ್ಕೆ ಇಳಿಸಲಾಗಿದೆ. ಜೊತೆಗೆ, ಸ್ಪಷ್ಟತೆ ಹೆಚ್ಚಿಸಲು 39 ಹೊಸ ಪಟ್ಟಿಗಳು ಮತ್ತು 40 ಹೊಸ ಸೂತ್ರಗಳನ್ನು ಪರಿಚಯಿಸಲಾಗಿದೆ. ಹೊಸ ನಿಯಮಗಳು ಮೂಲಧನ ಲಾಭ, ಷೇರು ಮಾರುಕಟ್ಟೆ ವ್ಯವಹಾರಗಳು , ಅನಿವಾಸಿ ತೆರಿಗೆ ವಿಷಯಗಳಲ್ಲಿ ಕಟ್ಟುನಿಟ್ಟಿನ ನಿಯಂತ್ರಣಗಳನ್ನು ತರಲಿದ್ದು, ಇತರ ಬಹಿರಂಗಪಡಿಸುವ ವಿಧಾನಗಳನ್ನು ಸರಳಗೊಳಿಸಿವೆ.

## ಇರಾನ್ ಕ್ಷಿಪಣಿ ಉತ್ಪಾದಿಸುವ ಸಾಮರ್ಥ್ಯ ಕಳೆದುಕೊಂಡಿದೆ: ನೆತನ್ಯಾಹು

**ಜೆರುಸಲೇಮ್:** ಇರಾನ್ ಇನ್ನು ಮುಂದೆ ಯುರೇನಿಯಂ ಅನ್ನು ಉತ್ಕೃಷ್ಟಗೊಳಿಸುವ ಅಥವಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನೆತನ್ಯಾಹು ಅವರು, ಅಯತೊಲ್ಲಾ ಅಲಿ ಖಮೇನಿ ಕ್ಷಿಪಣಿ ಮತ್ತು ಪರಮಾಣು ಕಾರ್ಯಕ್ರಮಗಳನ್ನು ನವೀಕರಿಸಲು ಹಾಗೂ ಅವುಗಳನ್ನು ಆಳವಾಗಿ ಭೂಗತದಲ್ಲಿ ಹೂಳಲು ಆದೇಶಿಸಿದ್ದರು.

ಉಳಿದಿರುವ ಕೆಲವು ಕ್ಷಿಪಣಿಗಳನ್ನು ನಾಶಮಾಡುವುದಷ್ಟೇ ಅಲ್ಲದೆ, ಈ ಕಾರ್ಯಕ್ರಮಗಳ ಉತ್ಪಾದನೆಯನ್ನು ಸಕ್ರಿಯಗೊಳಿಸುವ ಕೈಗಾರಿಕೆಗಳನ್ನು ನಾಶಮಾಡಲು ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ಈಗ, 20 ದಿನಗಳ ನಂತರ, ಇರಾನ್ ಯುರೇನಿಯಂ ಅನ್ನು ಉತ್ಕೃಷ್ಟಗೊಳಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನೂ ಹೊಂದಿಲ್ಲ ಎಂದು ನಾನು ನಿಮಗೆ ಘೋಷಿಸಬಹುದು ಎಂದು ನೆತನ್ಯಾಹು ಹೀಬ್ರೂ ಭಾಷೆಯಲ್ಲಿ ತಮ್ಮ ಆರಂಭಿಕ ಹೇಳಿಕೆಗಳಲ್ಲಿ ಹೇಳಿದರು.

ಫೆಬ್ರವರಿ 28 ರಂದು ಇಸ್ರೇಲ್ ಮತ್ತು ಯುಎಸ್ ನಡೆಸಿದ ಪ್ರಮುಖ ದಾಳಿಯಲ್ಲಿ ಖಮೇನಿ ಕೊಲ್ಲಲ್ಪಟ್ಟರು. ಇರಾನ್ ಅನ್ನು ಎಂದಿಗಿಂತಲೂ ದುರ್ಬಲ ಎಂದು ಬಣ್ಣಿಸಿದ ನೆತನ್ಯಾಹು, ಇಸ್ರೇಲ್ ಪ್ರಾದೇಶಿಕ ಶಕ್ತಿ, ಮತ್ತು ಕೆಲವರು ವಿಶ್ವ ಶಕ್ತಿ ಎಂದೂ ಹೇಳುತ್ತಾರೆ ಎಂದು ಹೇಳಿದರು. ಈಗ 20ನೇ ದಿನದಲ್ಲಿರುವ ಯುಎಸ್ ಜೊತೆ ನಡೆಯುತ್ತಿರುವ ಜಂಟಿ ಮಿಲಿಟರಿ ಕಾರ್ಯಾಚರಣೆಗೆ ಸಮಯಸೂಚಿಯನ್ನು ನಿಗದಿಪಡಿಸದೇ, ಇಸ್ರೇಲ್ ಪ್ರಧಾನಿ ಕಾರ್ಯಾಚರಣೆಗಳು ಅಗತ್ಯವಿರುವವರೆಗೆ ಮುಂದುವರಿಯುತ್ತವೆ ಎಂದು ಹೇಳಿದರು.

**ಇರಾನ್ ಅನ್ನು ಎಂದಿಗಿಂತಲೂ ದುರ್ಬಲ ಎಂದು ಬಣ್ಣಿಸಿದ ನೆತನ್ಯಾಹು**



ವಿದೇಶಿ ಪತ್ರಿಕೆಗಳನ್ನು ಇಂಗ್ಲಿಷ್‌ನಲ್ಲಿ ಉದ್ದೇಶಿಸಿ ಮಾತನಾಡಿದ ನೆತನ್ಯಾಹು, ತಮ್ಮ ಸಾವಿನ ವದಂತಿಗಳನ್ನು ತಳ್ಳಿಹಾಕುತ್ತಾ, ನಾನು ಜೀವಂತವಾಗಿದ್ದೇನೆ ಎಂದು ಹೇಳಲು ಬಯಸುತ್ತೇನೆ ಮತ್ತು ನೀವು ಅದಕ್ಕೆ ಸಾಕ್ಷಿಗಳು ಎಂದು ಹೇಳಿದರು.

ಈಗ ನಾನು ಈ ಸುಳ್ಳು ಸುದ್ದಿಯನ್ನು ಅಲ್ಲಗಳೆದಿರುವ ಹಿನ್ನೆಲೆಯಲ್ಲಿ ನಿಮಗೆ ಒಂದು ಅಪ್‌ಡೇಟ್ ನೀಡಲು ಬಯಸುತ್ತೇನೆ ಅಮೆರಿಕ, ಇಸ್ರೇಲ್ ಮತ್ತು ಇರಾನ್‌ನಲ್ಲಿರುವ ಜನರ ವಿರುದ್ಧ ಯುದ್ಧ ಘೋಷಿಸಿರುವ ಹಾಗೂ ಅಮೆರಿಕಕ್ಕೆ ಸಾವು, ಇಸ್ರೇಲ್‌ಗೆ ಸಾವು ಮತ್ತು ಅದರ ಜನರಿಗೆ ಸಾವು ತರುತ್ತಿರುವ ಇರಾನ್ ಆಡಳಿತದಿಂದ ಅಸ್ತಿತ್ವದ ಬೆದರಿಕೆಗಳನ್ನು ತೆಗೆದುಹಾಕಲು ಈ ಕಾರ್ಯಾಚರಣೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ಹೇಳಿದರು.

ಇಸ್ರೇಲ್ ಅಮೆರಿಕವನ್ನು ಯುದ್ಧಕ್ಕೆ ಎಳೆದಿದೆ ಎಂಬ ಹೇಳಿಕೆಗಳನ್ನು ಅವರು ತಳ್ಳಿಹಾಕಿದರು. ಟ್ರಂಪ್‌ಗೆ ಏನು ಮಾಡಬೇಕೆಂದು ಯಾರಾದರೂ ಹೇಳಬಹುದು ಎಂದು ಯಾರಾದರೂ ನಿಜವಾಗಿಯೂ ಭಾವಿಸುತ್ತಾರೆಯೇ? ಬನ್ನಿ. ಟ್ರಂಪ್ ಯಾವಾಗಲೂ ಅಮೆರಿಕಕ್ಕೆ ಒಳ್ಳೆಯದು ಎಂದು ಭಾವಿಸುವುದರ ಆಧಾರದ ಮೇಲೆ ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ನಾನು ಸೇರಿಸಿದರೆ, ಭವಿಷ್ಯದ ಪೀಳಿಗೆಗೆ ಒಳ್ಳೆಯದು ಎಂಬುದರ ಆಧಾರದ ಮೇಲೂ ಎಂದು ಹೇಳಿದರು.

# ಇಸ್ರೇಲ್ ಟ್ರ್ಯಾಪ್‌ಗೆ ಟ್ರಂಪ್: ಖಮೇನಿ ಹತ್ಯೆಯೇ ದೊಡ್ಡ ಎಡವಟ್ಟು

### ಟ್ರಂಪ್ ಅವರ ಇಸ್ರೇಲ್ ಒಲವು, ಅಮೆರಿಕದ ಸಾಂಪ್ರದಾಯಿಕ ವಿದೇಶಾಂಗ ನೀತಿಗಿಂತ ಭಿನ್ನವಾದದ್ದು ಎನ್ನುವ ಆಪಾದನೆ

**ವಾಷಿಂಗ್ಟನ್:** ಎರಡು ದಿನಗಳ ಹಿಂದೆ ಇರಾನ್ ಮಿಲಿಟರಿ ಅಧಿಕಾರಿಯೊಬ್ಬರು ಅಮೆರಿಕಗೆ ಎಚ್ಚರಿಕೆಯನ್ನು ನೀಡಿದ್ದರು. ವಿಯಟ್ನಾಂ ನೆನಪಿದೆಯಾ ಎನ್ನುವ ಇರಾನ್‌ನ ಈ ಎಚ್ಚರಿಕೆಯ ಹಿಂದೆ, ಸುಮ್ಮನೆ ತಲೆಬಾಗುವ ಪ್ರಶ್ನೆಯೇ ಇಲ್ಲ ಎನ್ನುವುದು ಅತ್ಯಂತ ಸ್ಪಷ್ಟವಾಗಿತ್ತು. ಸಾವಿರಾರು ಕಿಲೋಮೀಟರ್ ದೂರದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ಅನಾವಶ್ಯಕವಾಗಿ ತಲೆಹಾಕಲು ಹೋಗಿ, ಅಮೆರಿಕ ಹಿನ್ನಡೆಯನ್ನು ಅನುಭವಿಸಲು ಆರಂಭಿಸಿದೆ ಎನ್ನುವ ಚರ್ಚೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೇಳಿಬರುತ್ತಿದೆ.

ಯುದ್ಧ ವಿಶ್ಲೇಷಕರ ಪ್ರಕಾರ, ಪ್ರಸಕ್ತ ಯುದ್ಧದಲ್ಲಿ ಅಮೆರಿಕ ಮಾಡಿಕೊಂಡ ದೊಡ್ಡ ಎಡವಟ್ಟು ಎಂದರೆ, ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಆಲಿ ಖಮೇನಿಯನ್ನು ಹತ್ಯೆಗೈದಿದ್ದು. ಇದು, ಇರಾನ್ ಪ್ರಜೆಗಳಲ್ಲಿ ನ್ಯಾಷನಲ್ ಸೆಂಟಿಮೆಂಟ್ ಜಾಸ್ತಿಯಾಗಲು ಕಾರಣವಾದ ಪ್ರಮುಖ ವಿದ್ಯಮಾನವಾಗಿದೆ. ಇದು, ಇಸ್ರೇಲ್ ಮತ್ತು ಯುಎಸ್ ವಿರುದ್ದ ಇರಾನ್ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಇದಕ್ಕೆ ಕಾರಣ ಇಲ್ಲದಿಲ್ಲ.

**ಅಯತೊಲ್ಲಾ ಆಲಿ ಖಮೇನಿ ಹತ್ಯೆಯ ಯುಎಸ್ ಯಡವಟ್ಟು**

ಹಾಗಂತ, ಖಮೇನಿಯನ್ನು ಅಲ್ಲಿನ ಎಲ್ಲಾ ಜನರು ಪ್ರೀತಿಸುತ್ತಿದ್ದರು ಎನ್ನುವುದಲ್ಲ. ಬದಲಿಗೆ, ತಮ್ಮ ದೇಶದ ಹಿರಿಯ ನಾಯಕನೊಬ್ಬನನ್ನು, ತಮ್ಮದೇ ನೆಲದಲ್ಲಿ ವಿದೇಶದ ಮಿಲಿಟರಿ ಪಡೆಗಳು ಕೊಂದು ಹಾಕುತ್ತವೆ ಎಂದರೆ? ಇದು ಇರಾನ್ ದೇಶದ ಜನರ ಸ್ವಾಭಿಮಾನಕ್ಕೆ ಬಿದ್ದ ದೊಡ್ಡ ಪೆಟ್ಟು ಎನ್ನುವುದು, ಖಮೇನಿ ಹತ್ಯೆಯ ನಂತರ ಆಗಿರುವ ಕ್ಷಿಪ್ರ ಬೆಳವಣಿಗೆಗಳು ಉದಾಹರಣೆಯಾಗಬಲ್ಲದು. ಇದುವೇ, ಇರಾನ್ ಸರ್ಕಾರಕ್ಕೆ / ಮಿಲಿಟರಿಗೆ ಇನ್ನಷ್ಟು ಶಕ್ತಿಯನ್ನು ತುಂಬುತ್ತಿದೆ ಎಂದು ಹೇಳಲಾಗುತ್ತಿದೆ. ಇರಾನ್‌ನ ಮಿಲಿಟರಿ ಅಧಿಕಾರಿಯ, ನಾವು ಇರಾಕ್ ಅಲ್ಲ, ವಿಯಟ್ನಾಂ ರೀತಿಯಲ್ಲಿ ತಿರುಗಿ ಬೀಳುವವರು ಎನ್ನುವ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಅಮೆರಿಕ ಮತ್ತು ಇಸ್ರೇಲ್ ಪಡೆಗಳಿಂದ ಪೆಟ್ಟಿನ ಮೇಲೆ ಪೆಟ್ಟು ಬೀಳುತ್ತಿದ್ದರೂ, ಇರಾನ್ ಜಗ್ಗುತ್ತಿಲ್ಲ. ಇರಾನ್ ದೇಶದ ಪ್ರತಿದಾಳಿ ನನ್ನನ್ನು ಅಕ್ಷರಶಃ ದಿಗ್ಭ್ರಮೆಗೆ ದೂಡಿದೆ ಎನ್ನುವ ಡೊನಾಲ್ಡ್ ಟ್ರಂಪ್ ಹೇಳಿಕೆಯ ಹಿಂದೆ ಏನು ಅಸಾಹಯಕತೆ ಇದೆಯೋ ಎನ್ನುವುದು ಗೊತ್ತಿಲ್ಲ.

- **ಡೊನಾಲ್ಡ್ ಟ್ರಂಪ್‌ಗೆ ಇಸ್ರೇಲ್ ಟ್ರ್ಯಾಪ್ : ಇರಾನ್ ಯುದ್ಧದಲ್ಲಿ ಹಿಂದೆ ಸರಿಯಲಾಗದ ಅಮೆರಿಕ**
- **ಬೆಂಜಮಿನ್ ನೆತನ್ಯಾಹು ಒತ್ತಡಕ್ಕೆ ಮಣಿದರೇ ಟ್ರಂಪ್ ಇರಾನ್ ಯುದ್ಧದಲ್ಲಿ ಅಮೆರಿಕ ಒಂಟಿ**
- **ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲ ಖಮೇನಿ ಹತ್ಯೆಗೈದು ಅಮೆರಿಕ ತಪ್ಪು ಮಾಡಿತೇ?**



**ಇಸ್ರೇಲ್ ಜೊತೆಗೆ ಟ್ರಂಪ್, ಗಳಸ್ಯ ಕಂಠಸ್ಯ:** ಮೊದಲನೇ ಅವಧಿಯಲ್ಲಿ ಮತ್ತು ಈಗಿನ ಅವಧಿಯಲ್ಲೂ ಇಸ್ರೇಲ್ ಜೊತೆ ಡೊನಾಲ್ಡ್ ಟ್ರಂಪ್ ಗಳಸ್ಯ ಕಂಠಸ್ಯ. ಟ್ರಂಪ್ ಅವರ ಈ ಸ್ನೇಹವನ್ನೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ನ್ಯಾಟೋ ರಾಷ್ಟ್ರಗಳ ಸಿಟ್ಟು ಕೂಡಾ. ಟ್ರಂಪ್ ಅವರ ಇಸ್ರೇಲ್ ಒಲವು, ಅಮೆರಿಕದ ಸಾಂಪ್ರದಾಯಿಕ ವಿದೇಶಾಂಗ ನೀತಿಗಿಂತ ಭಿನ್ನವಾದದ್ದು ಎನ್ನುವ ಆಪಾದನೆಯನ್ನು ಆ ರಾಷ್ಟ್ರದ ಚಿಂತಕರೇ ಮಾತನಾಡುವಂತಾಗಿದೆ. ಟ್ರಂಪ್ ಜೊತೆಗಿನ ಬಾಂಧವ್ಯದಿಂದ ಅಮೆರಿಕ ಏನು ಸಾಧಿಸಿತು ಎನ್ನುವುದಕ್ಕಿಂತ, ಇಸ್ರೇಲ್ ಏನು ದಕ್ಕಿಸಿಕೊಂಡಿತು ಎನ್ನುವುದೇ ಜಾಸ್ತಿ. ಇರಾನ್, ಅಣು ಒಪ್ಪಂದದಿಂದ ಹಿಂದೆ ಸರಿಯುವಂತೆ ಮಾಡಿದ್ದೇ ಅಮೆರಿಕ, ಇದಕ್ಕೆ ಇಸ್ರೇಲ್ ಒತ್ತಡವೇ ಕಾರಣ ಎನ್ನುವುದು ಗೊತ್ತಿರುವ ವಿಚಾರ.

ಪ್ಯಾಲೆಸ್ತೇನ್ ಮತ್ತು ಅರಬ್ ರಾಷ್ಟ್ರಗಳ ವಿರೋಧಕ್ಕೆ ತೀವ್ರ ವಿರೋಧಕ್ಕೆ ಕಾರಣವಾಗಿದ್ದದು ಜೆರುಸಲೆಂ ಅನ್ನು ಇಸ್ರೇಲ್ ರಾಜಧಾನಿಯನ್ನಾಗಿ ಮಾಡಿದ್ದು. ಇದರ ಹಿಂದೆಯೂ ಅಮೆರಿಕದ ಶಕ್ತಿ ಪ್ರದರ್ಶನವೂ ಇತ್ತು. ಅಮೆರಿಕವನ್ನು ಯಾವ ಮಟ್ಟಿಗೆ ಇಸ್ರೇಲ್ ಬಳಸಿಕೊಂಡಿತು ಎಂದರೆ, ಅಸಲಿಗೆ ಈಗಿನ ಯುದ್ಧದಲ್ಲಿ ಯುಎಸ್ ತನ್ನ ಮಿಲಿಟರಿ ಶಕ್ತಿಯನ್ನು ಬಳಸಿಕೊಳ್ಳುವ ಅವಶ್ಯಕತೆಯೇ ಇರಲಿಲ್ಲ. ಬದಲಿಗೆ, ವಿಶ್ವದ ದೊಡ್ಡಣ್ಣನ ಸ್ಥಾನದಲ್ಲಿ ಇರುವುದರಿಂದ, ಎರಡೂ ದೇಶಗಳ ಪ್ರಮುಖರನ್ನು ಕರೆಸಿ, ಶಾಂತಿಯುತ ಮಾತುಕತೆಯ ಮೂಲಕ ಕದನ ವಿರಾಮ ಮಾಡಿಸುವ ತಾಕತ್ತೂ ಆ ದೇಶಕ್ಕಿತ್ತು.

ಆ ರೀತಿಯಲ್ಲಿ ಆಗಲು ಇಸ್ರೇಲ್ ಬಿಡಲಿಲ್ಲವೇ? ಇಸ್ರೇಲ್, ಇರಾನ್ ಅಮೆರಿಕಗೆ ಯುದ್ಧದ ಉನ್ಮಾದವೇ ಎನ್ನುವುದೇ ಇಲ್ಲಿ ಕಾಡುವ ಪ್ರಶ್ನೆ.

**ಇರಾನ್ ಯುದ್ಧದಲ್ಲಿ ಯುಎಸ್ ಏಕಾಂಗಿ?**

### ಅಬ್ರಹಾಂ ರೆಕಾರ್ಡ್ಸ್ ಹೆಸರಿನಲ್ಲಿ ಒಪ್ಪಂದ

ಅಬ್ರಹಾಂ ರೆಕಾರ್ಡ್ಸ್ ಹೆಸರಿನಲ್ಲಿ ಇಸ್ರೇಲ್ ಮತ್ತು ನಾಲ್ಕು ಅರಬ್ ದೇಶಗಳ ನಡುವೆ ( ಸಂಯುಕ್ತ ಅರಬ್ ಗಣರಾಜ್ಯ, ಮೊರೊಕೊ, ಬಹ್ರೇನ್, ಸುಡಾನ್) ಒಪ್ಪಂದಗಳು ನಡೆದವು. ಇದು, ಇಸ್ರೇಲ್ ಪ್ರಭಾವವನ್ನು ಹೆಚ್ಚಿಸುವ ಒಪ್ಪಂದಗಳಾಗಿದ್ದವು. ಈ ಎಲ್ಲಾ ವಿದ್ಯಮಾನಗಳು, ಅಮೆರಿಕವನ್ನು ಬಳಸಿಕೊಂಡು, ಇಸ್ರೇಲ್ ಪಡೆದಂತಹ ಮೇಲುಗೈ ಆಗಿತ್ತು. ಅಮೆರಿಕವನ್ನು ಬಳಸಿಕೊಂಡು ತನ್ನತನವನ್ನು ಹೆಚ್ಚಿಸಿಕೊಳ್ಳುತ್ತಿರುವ ಇಸ್ರೇಲ್, ಈಗ, ಇರಾನ್ ಯುದ್ಧದಲ್ಲಿ ಅಮೆರಿಕವನ್ನು ಮಧ್ಯದಲ್ಲಿ ನಿಲ್ಲಿಸಿದೆ.

## ಮಿನಿ ನ್ಯೂಸ್

### ಮಧ್ಯ ಏಷ್ಯಾದಲ್ಲಿ ಬಿಕ್ಕಟ್ಟು ಮೋದಿ-ಮ್ಯಾಕ್ರನ್ ಮಾತುಕತೆ

**ನವದೆಹಲಿ:** ಮಧ್ಯ ಏಷ್ಯಾದಲ್ಲಿ ಬಿಕ್ಕಟ್ಟು ಪರಿಹರಿಸುವ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಜೊತೆ ಮಾತುಕತೆ ನಡೆಸಿದ್ದಾರೆ. ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಉದ್ವಿಗ್ನತೆಯನ್ನು ಶಮನಗೊಳಿಸುವ ತುರ್ತು ಅಗತ್ಯತೆ ಹಾಗೂ ರಾಜತಾಂತ್ರಿಕತೆಗೆ ಮರಳುವ ಬಗ್ಗೆ ಆತೀಯ ಸ್ನೇಹಿತ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಮಾತನಾಡಿದೆ ಎಂದು ಮೋದಿ ಎಕ್ಸ್ ಮಾಡಿದ್ದಾರೆ. ಈ ಪ್ರದೇಶಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಮುನ್ನಡೆಸಲು ನಮ್ಮ ನಿಕಟ ಸಮನ್ವಯವನ್ನು ಮುಂದುವರಿಸಲು ನಾವು ಎದುರು ನೋಡುತ್ತಿದ್ದೇವೆ ಎಂದು ಅವರು ಬರೆದಿದ್ದಾರೆ.

ಮ್ಯಾಕ್ರನ್ ಅಲ್ಲದೇ ಉದ್ವಿಗ್ನತೆಯನ್ನು ಶಮನಗೊಳಿಸುವ ನಿಟ್ಟಿನಲ್ಲಿ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ಒಮಾನ್ ಸುಲ್ತಾನ್ ಹೈತಮ್ ಬಿನ್ ತಾರಿಕ್ ಅಲ್ ಸೈದ್ ಅವರ ಜೊತೆ ಮೋದಿ ಮಾತನಾಡಿದ್ದಾರೆ ಎಂದು ವರದಿಯಾಗಿದೆ.

### ಮೊಮ್ಮಗಳ ಮೇಲೆ ತಾತನಿಂದ ಅತ್ಯಾಚಾರ

**ಭದೋಹಿ:** ಆರು ವರ್ಷದ ಮೊಮ್ಮಗಳ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ 58 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆತನ ಕುಟುಂಬ ಸದಸ್ಯರು ಈ ಕೃತ್ಯದಲ್ಲಿ ಭಾಗಿಯಾಗಿದ್ದಾಗ ಆ ವ್ಯಕ್ತಿಯನ್ನು ಹಿಡಿದರು, ಆದರೆ ಕುಟುಂಬವು ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ಹೊತ್ತಿಗೆ ಆತ ಪರಾರಿಯಾಗಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ.

ಮಾರ್ಚ್ 17 ರಂದು ಬೆಳಿಗ್ಗೆ 5 ಗಂಟೆ ಸುಮಾರಿಗೆ ನೆಲ ಮಹಡಿಯಲ್ಲಿದ್ದ ಬಾಲಕಿಯ ಕುಟುಂಬ ಸದಸ್ಯರು ಆಕೆಯ ಕಿರುಚಾಟವನ್ನು ಕೇಳಿ ಮಹಡಿಯ ಮೇಲಕ್ಕೆ ಧಾವಿಸಿ ನೋಡಿದಾಗ, ಆಕೆಯ ಅಜ್ಜ ಆಕೆಯ ಮೇಲೆ ಬಲವಂತ ಮಾಡುತ್ತಿರುವುದು ಕಂಡುಬಂದಿದೆ ಎಂದು ಕೊತ್ವಾಲಿ ಸ್ಟೇಷನ್ ಹೌಸ್ ಆಫೀಸರ್ ಸಚ್ಚಿದಾನಂದ ಪಾಂಡೆ ತಿಳಿಸಿದ್ದಾರೆ.

ನಂತರ ಬಾಲಕಿಯ ಕುಟುಂಬವು ಆಕೆಯನ್ನು ಆಸ್ಪತ್ರೆಗೆ ಸಾಗಿಸಿತು. ಅವಕಾಶವನ್ನು ಬಳಸಿಕೊಂಡು ಆರೋಪಿ ಸ್ಥಳದಿಂದ ಪರಾರಿಯಾಗಿದ್ದನು ಎಂದು ಪಾಂಡೆ ಹೇಳಿದರು. ಮಗುವಿನ ಸ್ಥಿತಿ ಸುಧಾರಿಸಿದ ನಂತರ, ಆಕೆಯ ತಂದೆ ರಾತ್ರಿ ತಡವಾಗಿ ತನ್ನ ತಂದೆಯ ವಿರುದ್ಧ ಲಿಖಿತ ದೂರು ದಾಖಲಿಸಿದ್ದಾರೆ.

### ಪುತ್ರಿ ಜೊತೆ ಯುದ್ಧ ಟ್ಯಾಂಕರ್‌ನಲ್ಲಿ ಸವಾರಿ ಮಾಡಿದ ಕಿಮ್ ಜಾಂಗ್ ಉನ್

**ಪ್ಯೊಂಗ್ಯಾಂಗ್:** ಮಧ್ಯಪ್ರಾಚ್ಯ ಯುದ್ಧದ ನಡುವೆ ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಇದೀಗ ಪುತ್ರಿ ಜೊತೆ ಯುದ್ಧ ಟ್ಯಾಂಕರ್‌ನಲ್ಲಿ ಸವಾರಿ ಮಾಡಿದ್ದಾರೆ. ಹೌದು, ಇತ್ತೀಚಿಗಷ್ಟೇ ಪುತ್ರಿ ಜೊತೆ ಕ್ರೂಸ್ ಕ್ಷಿಪಣಿ ಪರೀಕ್ಷಿಸಿ, ಶೂಟಿಂಗ್ ಮಾಡಿದ್ದರು. ಇದೀಗ ಮತ್ತೆ ಹೊಸ ಪ್ರಯತ್ನ ಮಾಡಿದ್ದಾರೆ. ಪ್ಯೊಂಗ್ಯಾಂಗ್‌ನಲ್ಲಿರುವ 60ನೇ ತರಬೇತಿ ನೆಲೆಗೆ ಭೇಟಿ ನೀಡಿದಾಗ ಕಿಮ್ ಮತ್ತು ಜು ಏ ಸಮರಾಭ್ಯಾಸ ವೀಕ್ಷಿಸಿ, ಒಂದೇ ತರಹದ ಉಡುಗೆ ಧರಿಸಿ, ಯುದ್ಧ ಟ್ಯಾಂಕರ್‌ನಲ್ಲಿ ಸವಾರಿ ಮಾಡಿದ್ದಾರೆ. ಈ ಕುರಿತು ಉತ್ತರ ಕೊರಿಯಾದ ಅಧಿಕೃತ ಸುದ್ದಿಸಂಸ್ಥೆ ಕೆಸಿಎನ್‌ಎ ಫೋಟೋಗಳನ್ನು ಬಿಡುಗಡೆ ಮಾಡಿದೆ. ಕೆಸಿಎನ್‌ಎ ಪ್ರಕಾರ, ಯುದ್ಧ ಟ್ಯಾಂಕರ್‌ಗಳು ಕ್ಷಿಪಣಿ ಮತ್ತು ಡ್ರೋನ್‌ಗಳ ವಿರುದ್ಧ ರಕ್ಷಣೆ ಮಾಡುವುದು, ಫೈರ್‌ಪವರ್ ಮತ್ತು ರಕ್ಷಣಾತ್ಮಕ ವ್ಯವಸ್ಥೆಗಳನ್ನು ಹೊಂದಿದೆ. ಟ್ಯಾಂಕರ್‌ಗಳ ಚಲನಶೀಲತೆ, ಅವುಗಳು ಅಬ್ಬರಿಸುವ ರೀತಿ ಎಲ್ಲವನ್ನು ನೋಡಿದ ಕಿಮ್ ಜಾಂಗ್ ಉನ್ ಅವರು ಸಂತೋಷ ವ್ಯಕ್ತಪಡಿಸಿದ್ದಾರೆ. ಜೊತೆಗೆ ಟ್ಯಾಂಕರ್‌ಗಳ ಅದ್ಭುತ ಪ್ರದರ್ಶನವು ನಮ್ಮ ಸೈನ್ಯದ ಶೌರ್ಯವನ್ನು ಪ್ರತಿಬಿಂಬಿಸುತ್ತಿದೆ ಎಂದಿದ್ದಾರೆ ಎಂದು ತಿಳಿಸಿದೆ.

### ಲಿಫ್ಟ್‌ನಲ್ಲಿ ಸಿಲುಕಿ ವ್ಯಕ್ತಿ ಸಾವು ಮಗ ಆಸ್ಪತ್ರೆಗೆ ದಾಖಲು

**ಕೋಲ್ಕತ್ತಾ:** ಸದಾ ಒಂದಲ್ಲಾ ಒಂದು ಘಟನೆಯಿಂದ ಸುದ್ದಿಯಲ್ಲಿರುವ ಕೋಲ್ಕತ್ತಾ ಆರ್‌ಜಿಕರ್ ಆಸ್ಪತ್ರೆಯ ಲಿಫ್ಟ್‌ನಲ್ಲಿ ಸಿಲುಕಿ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದು, ಮಗನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರನ್ನು ಅರೂಪ್ ಬಂಡೋಪಾಧ್ಯಾಯ ಎಂದು ಗುರುತಿಸಲಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಪ್ರಕಾರ, ಮೃತರ ಮಗನ ಕಾಲಿನ ಮೂಳೆ ಮುರಿದಿದ್ದು, ಆರ್‌ಜಿ ಕರ್ ಕಾಲೇಜು, ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಅರೂಪ್ ಬಂಡೋಪಾಧ್ಯಾಯ ಶಸ್ತ್ರಚಿಕಿತ್ಸಾ ಕೊಠಡಿಯಿಂದ ಹಿಂದಿರುಗುತ್ತಿದ್ದಾಗ ಲಿಫ್ಟ್‌ನಿಂದ ಕೆಳಗೆ ಹೋಗುತ್ತಿದ್ದರು. ಲಿಫ್ಟ್ ಇದ್ದಕ್ಕಿದ್ದಂತೆ ನಿಂತಿತ್ತು, ಒಳಗೆ ಮೂವರು ಸಿಲುಕಿಕೊಂಡಿದ್ದರು. ಅರೂಪ್ ಬಹಳ ಸಮಯವಾದರೂ ಹಿಂದಿರುಗದಿದ್ದಾಗ ಕುಟುಂಬ ಚಿಂತಿತರಾಗಿ ಅವರನ್ನು ಹುಡುಕಲು ಆರಂಭಿಸಿತ್ತು. ನಂತರ ಅವರ ಶವ ಲಿಫ್ಟ್ ಒಳಗೆ ಪತ್ತೆಯಾಗಿದೆ. ಆಸ್ಪತ್ರೆಯ ಮೂಲಗಳ ಪ್ರಕಾರ, ತುರ್ತು ಪರಿಸ್ಥಿತಿಯಲ್ಲಿ ಸಹಾಯ ಮಾಡಲು ಲಿಫ್ಟ್‌ಮ್ಯಾನ್ ಇರಲಿಲ್ಲ. ಪ್ರಾಥಮಿಕ ತನಿಖೆಗಳು ಇದನ್ನು ಸಮಪೂರ್ಣ ನಿರ್ಲಕ್ಷ್ಯವೆಂದು ಪರಿಗಣಿಸುತ್ತಿವೆ. ಹಿಂದಿನ ದಿನ ಲಿಫ್ಟ್ ಕೆಟ್ಟುಹೋಗಿತ್ತು. ಆದರೆ ಅದನ್ನು ದುರಸ್ತಿ ಮಾಡಲಾಗಿಲ್ಲ ಎಂದು ಕೆಲವರು ಹೇಳಿದ್ದಾರೆ.

### ಕೊಲೆ ಬೆದರಿಕೆ: ಪ್ರಾಣಭಯಕ್ಕೆ ಹೆಂಡತಿಯನ್ನು ಪ್ರೇಮಿಯ ಜೊತೆ ಕಳಿಸಿಕೊಟ್ಟ ಗಂಡ

**ಬುಲಂದ್‌ಶಹರ್:** ಇತ್ತೀಚಿನ ದಿನಗಳಲ್ಲಿ ಸೋಶಿಯಲ್ ಮೀಡಿಯಾದಲ್ಲಿ ನೀಲಿ ಡ್ರಮ್ ಎನ್ನುವ ಪದವೊಂದು ಕ್ರೌರ್ಯದ ಸಂಕೇತವಾಗಿ ಪ್ರಚಾರವಾಗುತ್ತಿದೆ. ಕಳೆದ ವರ್ಷ ಮೀರತ್‌ನಲ್ಲಿ ನಡೆದ ಭೀಕರ ಕೊಲೆಯ ನೆನಪು ಮಾಸುವ ಮುನ್ನವೇ, ಅದೇ ಮಾದರಿಯ ಬೆದರಿಕೆಗೆ ಹೆದರಿ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ಆಕೆಯ ಪ್ರಿಯಕರನ ಜೊತೆಗೇ ಕಳುಹಿಸಿಕೊಟ್ಟಿರುವ ಘಟನೆ ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ನಡೆದಿದೆ.

ಉತ್ತರ ಪ್ರದೇಶದ ದೌಲತ್‌ಪುರ ಗ್ರಾಮದ ದಿನಗೂಲಿ ಕಾರ್ಮಿಕ ರಾಜಕುಮಾರ್, ಕಳೆದ ಏಳು ವರ್ಷಗಳಿಂದ ಸಂಸಾರ ನಡೆಸುತ್ತಿದ್ದರು. ಈ ದಂಪತಿಗೆ ಆರು ತಿಂಗಳ ಮಗುವೂ ಇದೆ. ಆದರೆ, ರಾಜಕುಮಾರ್ ಪತ್ನಿ ಸೋಶಿಯಲ್ ಮೀಡಿಯಾದಲ್ಲಿ ಪರಿಚಯವಾದ ವ್ಯಕ್ತಿಯೊಬ್ಬನ ಜೊತೆ ಅಕ್ರಮ ಸಂಬಂಧ ಹೊಂದಿದ್ದರು. ಪತ್ನಿಯ ಫೋನ್‌ನಲ್ಲಿ ಪ್ರಿಯಕರನ ಜೊತೆಗಿನ ಆಕ್ಷೇಪಾರ್ಹ ಫೋಟೋಗಳು ಮತ್ತು ಫೇಸ್‌ಬುಕ್‌ನಲ್ಲಿ ಸಿಮೆಂಟ್ ಮತ್ತು ನೀಲಿ ಡ್ರಮ್ ಎಂಬ ಕ್ಯಾಪ್ಷನ್ ಇರುವ ಪೋಸ್ಟ್ ಕಂಡು ರಾಜಕುಮಾರ್ ಬೆಚ್ಚಿಬಿದ್ದಿದ್ದಾರೆ.

ಕಳೆದ ವರ್ಷ ಮೀರತ್‌ನಲ್ಲಿ ಮುಸ್ಕಾನ್ ಎಂಬಾಕೆ ತನ್ನ ಪ್ರಿಯಕರ ಸಾಹಿಲ್ ಜೊತೆ ಸೇರಿ ಪತಿಯನ್ನು ಕೊಂದು, ಶವವನ್ನು ನೀಲಿ ಡ್ರಮ್‌ಗೆ ಹಾಕಿ ಸಿಮೆಂಟ್‌ನಿಂದ ತುಂಬಿಸಿ ಮುಚ್ಚಿದ್ದಳು. ಈ ಘಟನೆಯನ್ನೇ ಉದಾಹರಣೆಯಾಗಿ ನೀಡಿದ್ದ ರಾಜಕುಮಾರ್ ಪತ್ನಿ, ನೀನೂ ಅಡ್ಡ ಬಂದರೆ ನಿನ್ನನ್ನು , ನಿನ್ನ ಸಹೋದರರನ್ನು ಕೊಂದು ನೀಲಿ ಡ್ರಮ್‌ಗೆ ತುರುಕುತ್ತೇನೆ ಎಂದು ಬೆದರಿಕೆ ಹಾಕಿದ್ದಾಳೆ ಎನ್ನಲಾಗಿದೆ.

# 50 ದಿನ ಪೂರೈಸಿದ ಭಾರತಿ ಟೀಚರ್

50 ದಿನಗಳ ಪ್ರದರ್ಶನ ಕಂಡ ಖುಷಿಯಲ್ಲಿ 'ಭಾರತಿ ಟೀಚರ್ 7ನೇ ತರಗತಿ' ಚಿತ್ರತಂಡ ಇತ್ತೀಚೆಗೆ ಒಟ್ಟಿಗೆ ಸೇರಿತ್ತು. ಸಿಹಿಕಹಿ ಚಂದ್ರು, ಕುಮಾರಿ ಯಶಿಕಾ, ದಿವ್ಯಾ ಅಂಚನ್, ಅಶ್ವಿನ್ ಹಾಸನ್ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಅನೇಕರು ಭಾಗಿಯಾಗಿ ಈ ಚಿತ್ರತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಎಂ.ಎಲ್. ಪ್ರಸನ್ನ ಅವರು ನಿರ್ದೇಶನ ಮಾಡಿದ 'ಭಾರತಿ ಟೀಚರ್ 7ನೇ ತರಗತಿ' ಸಿನಿಮಾದಲ್ಲಿ ವಿಶೇಷ ಕಥಾಹಂದರ ಇದೆ. ಈ ಸಿನಿಮಾ ಬಿಡುಗಡೆಯಾಗಿ 50 ದಿನಗಳನ್ನು ಪೂರೈಸಿದೆ. ಕನ್ನಡದಲ್ಲಿ ಅರ್ಧ ಶತಕ ಪೂರೈಸಿದ 2026ರ ಮೊದಲ ಸಿನಿಮಾ ಎಂಬ ಖ್ಯಾತಿಗೆ ಈ ಸಿನಿಮಾ ಪಾತ್ರವಾಗಿದೆ. ಆ ಸಲುವಾಗಿ ಕಲಾವಿದರ ಸಂಘದಲ್ಲಿ ಅದ್ದೂರಿಯಾಗಿ ಸಮಾರಂಭ ನಡೆಯಿತು.

ವಿ. ನಾಗೇಂದ್ರ ಪ್ರಸಾದ್, ಧರ್ಮ ಕೀರ್ತಿರಾಜ್, ರವಿ ಗೌಡ, ಮೋಹನ್, ಜಡೇಶ್ ಕೆ. ಹಂಪಿ, ಓಂ ಪ್ರಕಾಶ್ ರಾವ್, ಚಕ್ರವರ್ತಿ ಚಂದ್ರಚೂಡ್, ವೀರಕಪುತ್ರ ಶ್ರೀನಿವಾಸ್ ಮುಂತಾದವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ 'ಭಾರತಿ



ಟೀಚರ್ 7ನೇ ತರಗತಿ' ಚಿತ್ರತಂಡಕ್ಕೆ ಅಭಿನಂದನೆ ತಿಳಿಸಿದರು.

'ಪೂಜ್ಯಾಯ ಫಿಲ್ಮ್ಸ್' ಬ್ಯಾನರ್ ಮೂಲಕ ಉದ್ಯಮಿ ರಾಘವೇಂದ್ರ ರೆಡ್ಡಿ ಅವರು 'ಭಾರತಿ ಟೀಚರ್ 7ನೇ ತರಗತಿ' ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಗುರುರಾಜ್ ರೆಡ್ಡಿ ಅವರು ಸಹ ನಿರ್ಮಾಪಕರಾಗಿದ್ದಾರೆ. ಎಂ.ಎಲ್. ಪ್ರಸನ್ನ ಅವರು ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಮತ್ತು ಸಂಗೀತದ ಜವಬ್ದಾರಿಯನ್ನು ನಿಭಾಯಿಸಿದ್ದಾರೆ. ಸಚಿತ್ ಫಿಲ್ಮ್ಸ್‌ನ ವೆಂಕಟ್ ಗೌಡ ಅವರು ಕ್ರಿಯೇಟಿವ್ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ. ಈ ಸಿನಿಮಾ 11 ಕೇಂದ್ರಗಳಲ್ಲಿ 25 ದಿವಸ , 9 ಕೇಂದ್ರಗಳಲ್ಲಿ 50 ದಿವಸ ಪೂರೈಸಿದ್ದು, ಇಲ್ಲಿಯವರೆಗೂ 2 ಲಕ್ಷ ವಿದ್ಯಾರ್ಥಿಗಳು ಸಿನಿಮಾ ವೀಕ್ಷಿಸಿದ್ದಾರೆ ಎಂದು ಚಿತ್ರತಂಡ ಹೇಳಿದೆ. ಸಿಹಿಕಹಿ ಚಂದ್ರು, ಕುಮಾರಿ ಯಶಿಕಾ, ಗೋವಿಂದೇ ಗೌಡ, ದಿವ್ಯಾ ಅಂಚನ್, ಅಶ್ವಿನ್ ಹಾಸನ್, ಬೆನಕಾ ನಂಜಪ್ಪ, ಸೌಜನ್ಯ ಸುನಿಲ್, ರೋಹಿತ್ ರಾಘವೇಂದ್ರ, ಎಂ.ಜೆ. ರಂಗಸ್ವಾಮಿ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಎಂ.ಬಿ. ಹಳ್ಳಿಕಟ್ಟಿ ಅವರು ಛಾಯಾಗ್ರಹಣ ಮಾಡಿದ್ದಾರೆ. ಸುಜಿತ್ ನಾಯಕ್ ಅವರ ಸಂಕಲನ, ಕಂಬಿ ರಾಜ್ ಅವರ ನೃತ್ಯ ನಿರ್ದೇಶನ ಈ ಸಿನಿಮಾಗಿದೆ.



# ಸಾಯಿ ಪಲ್ಲವಿಗೆ ಕೊಟ್ಟ ಮಾತನ್ನು ಉಳಿಸಿಕೊಂಡ ಮಣಿರತ್ನಂ

ತಮಿಳಿನ ನಟ ವಿಜಯ್ ಸೇತುಪತಿ ಅವರು ಈಗ ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ಲೈಕಾ ಪ್ರೊಡಕ್ಷನ್ ಈ ಚಿತ್ರವನ್ನು ಅನೌನ್ಸ್ ಮಾಡಿದೆ. ಈ ಸಿನಿಮಾ ಬಹಳ ಕುತೂಹಲ ಮೂಡಿಸಿದೆ. ಈ ಚಿತ್ರವನ್ನು ನಿರ್ದೇಶನ ಮಾಡುತ್ತಿರುವುದು ಮಣಿರತ್ನಂ ಅವರು. ಈ ಸಿನಿಮಾಗೆ ಸಾಯಿ ಪಲ್ಲವಿ ನಾಯಕಿ. ಈ ಚಿತ್ರ ಇನ್ನು ಕೆಲವೇ ವಾರಗಳಲ್ಲಿ ಶೂಟಿಂಗ್ ಆರಂಭಿಸಲಿದೆ. ಮಣಿರತ್ನಂ ಅವರು 'ಥಗ್ ಲೈಫ್' ಹೆಸರಿನ ಸಿನಿಮಾ ಮಾಡಿದರು. ಕಮಲ್ ಹಾಸನ್ ಜೊತೆ ಮಾಡಿದ ಈ ಚಿತ್ರ ಅಟ್ಟರ್ ಫ್ಲಾಪ್ ಆಯಿತು. ಕರ್ನಾಟಕದಲ್ಲಿ ಈ ಚಿತ್ರ ಬಿಡುಗಡೆಯನ್ನೇ ಕಂಡಿಲ್ಲ. ಅದಕ್ಕೂ ಮೊದಲು ಬಂದ 'ಪೊನ್ನಿಯೆನ್ ಸೆಲ್ವನ್' ಹಾಗೂ 'ಪೊನ್ನಿಯೆನ್ ಸೆಲ್ವನ್ 2' ಸಿನಿಮಾಗಳು ತಮಿಳುನಾಡಿನಲ್ಲಿ ಮೆಚ್ಚುಗೆ ಪಡೆಯಿತು. ಈಗ ಅವರು ಗೆಲ್ಲುವ ಕನಸಿನೊಂದಿಗೆ ಹೊಸ ಚಿತ್ರ ಘೋಷಣೆ ಮಾಡಿರೋದು ವಿಶೇಷ. ಮಣಿರತ್ನಂ ಅವರು ಹಲವು ಅದ್ಭುತ ಚಿತ್ರಗಳನ್ನು ಪ್ರೇಕ್ಷಕರ ಎದುರು ಇಟ್ಟಿದ್ದಾರೆ. ಅವರು ಇತ್ತೀಚೆಗೆ ಕೊಂಚ ಚಾರ್ಮ್ ಕಳೆದುಕೊಂಡಿದ್ದಾರೆ. ಆದರೆ, ಈ ಹೊಸ ಸಿನಿಮಾ ಮೂಲಕ ಅವರಿಗೆ ಗೆಲುವು ಸಿಗುವ ನಿರೀಕ್ಷೆ ಇದೆ. 'ಮದ್ರಾಸ್ ಟಾಕೀಸ್' ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಇದು ಸಂಸ್ಥೆಯ 23ನೇ ಸಿನಿಮಾ. ಸಾಯಿ ಪಲ್ಲವಿ ಅವರು ಸದ್ಯ 'ರಾಮಾಯಣ' ಸಿನಿಮಾ ಶೂಟ್ ಅಲ್ಲಿ ಬ್ಯುಸಿ ಇದ್ದು, ಶೀಘ್ರವೇ ಮರಳಲಿದ್ದಾರೆ. ವಿಜಯ್ ಸೇತುಪತಿ ಅವರು ಈ ಚಿತ್ರಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಈ ಮೊದಲು ವಿಜಯ್ ಹಾಗೂ ಮಣಿರತ್ನಂ ಅವರು 'ಚೆಕ್ಕ ಚಿವಂತ ವಾನಮ್' ಸಿನಿಮಾದಲ್ಲಿ ಒಟ್ಟಾಗಿ ಕೆಲಸ ಮಾಡಿದ್ದರು. ಸಾಯಿ ಪಲ್ಲವಿ ಅವರನ್ನ ಮಣಿರತ್ನಂ ಅವರು ಈ ಮೊದಲು ಹೊಗಳಿದ್ದರು. ಸಾಯಿ ಪಲ್ಲವಿ ಜೊತೆ ಸಿನಿಮಾ ಮಾಡುತ್ತೇನೆ ಎಂದು ಮಣಿರತ್ನಂ ಹೇಳಿದ್ದರು. ಈಗ ಅವರು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ.



# ಉಚಿತ ಶಿಕ್ಷಣ ಘೋಷಿಸಿದ ಮೆಗಾಸ್ಟಾರ್

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಉಚಿತ

ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಚಿರಂಜೀವಿ ಅವರು ಸಮಾಜಸೇವೆಯ ಕ್ಷೇತ್ರದಲ್ಲಿ ಹೊಸ ಅಧ್ಯಾಯವೊಂದನ್ನು ಆರಂಭಿಸುವುದಾಗಿ ಘೋಷಿಸಿದ್ದಾರೆ. ಕಳೆದ 25ಕ್ಕೂ ಹೆಚ್ಚು ವರ್ಷಗಳಿಂದ ಚಿರಂಜೀವಿ ಚಾರಿಟಬಲ್ ಟ್ರಸ್ಟ್ ಮೂಲಕ ರಕ್ತದಾನ ಮತ್ತು ನೇತ್ರದಾನ ಶಿಬಿರಗಳನ್ನು ನಡೆಸುತ್ತಾ ಲಕ್ಷಾಂತರ ಜೀವಗಳನ್ನು ಉಳಿಸಿರುವ ಚಿರಂಜೀವಿ, ಈಗ ಶಿಕ್ಷಣ ಕ್ಷೇತ್ರದತ್ತ ಹೆಜ್ಜೆ ಇಟ್ಟಿದ್ದಾರೆ.

ತಮಿಳು ನಟ ಸೂರ್ಯ ನಡೆಸುತ್ತಿರುವ 'ಅಗರಂ ಫೌಂಡೇಶನ್' ಇಂದು ಸ್ಫೂರ್ತಿ ಪಡೆದು ಈ ಹೊಸ ಹೆಜ್ಜೆ ಇಟ್ಟಿರುವುದಾಗಿ ಚಿರಂಜೀವಿ ಹೇಳಿದ್ದಾರೆ. ಹಿರಿಯ ನಟರಾದರೂ ಕಿರಿಯ ನಟನಿಂದ ಸ್ಫೂರ್ತಿ ಪಡೆದಿರುವುದಾಗಿ ಯಾವುದೇ ಅಹಂ ಇಲ್ಲದೆ ಹೇಳಿಕೊಂಡಿದ್ದಾರೆ ಚಿರಂಜೀವಿ. ಆಸಕ್ತಿಕರ ವಿಷಯವೆಂದರೆ ಈ ಹಿಂದೆ ನಟ ಸೂರ್ಯ ಅವರು ತಮ್ಮ 'ಅಗರಂ ಫೌಂಡೇಶನ್'ನ ಸಮಾರಂಭದಲ್ಲಿ, ಮೆಗಾಸ್ಟಾರ್ ಚಿರಂಜೀವಿ ಅವರ ರಕ್ತದಾನ ಶಿಬಿರಗಳಿಂದ ಸ್ಫೂರ್ತಿ ಪಡೆದು ತಮ್ಮ ಫೌಂಡೇಶನ್ ಪ್ರಾರಂಭಿಸಿದ್ದಾಗಿ ಹೇಳಿಕೊಂಡಿದ್ದರು.

ಈಗ ಅದೇ ಚಿರಂಜೀವಿ ಅವರು ಸೂರ್ಯ ಅವರ ಶಿಕ್ಷಣ ಸೇವೆಯನ್ನು ಕಂಡು, ಅದರಿಂದಲೇ ಸ್ಫೂರ್ತಿ ಪಡೆದು ತೆಲುಗು ರಾಜ್ಯಗಳು ಸೇರಿದಂತೆ ಅಗತ್ಯವಿರುವ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ನಿರ್ಧರಿಸಿದ್ದಾರೆ.

ಈ ಯೋಜನೆಯು ಕೇವಲ ಆಂಧ್ರಪ್ರದೇಶ ಅಥವಾ ತೆಲಂಗಾಣಕ್ಕೆ ಸೀಮಿತವಾಗಿರದೆ, ದೇಶದ ಯಾವುದೇ ಭಾಗದಲ್ಲಿ ಶಿಕ್ಷಣದ ಅಗತ್ಯವಿರುವ ಬಡ ವಿದ್ಯಾರ್ಥಿಗಳಿಗೆ ನೆರವಾಗಲಿದೆಯಂತೆ. ಬಡತನದ ಕಾರಣದಿಂದ ಶಿಕ್ಷಣದಿಂದ ವಂಚಿತರಾಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಉಚಿತವಾಗಿ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಈ ಯೋಜನೆಯ ರೂಪುರೇಷೆ ಮತ್ತು ಅನುಷ್ಠಾನದ ಬಗ್ಗೆ ಸಂಪೂರ್ಣ ವಿವರಗಳನ್ನು ಶೀಘ್ರದಲ್ಲೇ ಅಧಿಕೃತವಾಗಿ ಪ್ರಕಟಿಸುವುದಾಗಿ ಚಿರಂಜೀವಿ ತಿಳಿಸಿದ್ದಾರೆ.



# ನೋರಾ ವಿರುದ್ಧ ಫತ್ವಾ

ಲೋಕಸಭೆ ಅಧಿವೇಶನದಲ್ಲಿಯೂ ಸಹ ಹಾಡಿನ ಕುರಿತು ಚರ್ಚೆ ಆಗಿದೆ.

ಇದೀಗ ಉತ್ತರ ಪ್ರದೇಶದ ಮುಸ್ಲಿಂ ಧಾರ್ಮಿಕ ಸಂಸ್ಥೆಯ ಮೌಲ್ವಿ ನೋರಾ ಫತೇಹಿ ವಿರುದ್ಧ ಫತ್ವಾ ಹೊರಡಿಸಿದ್ದಾರೆ. ಉತ್ತರ ಪ್ರದೇಶದ ಅಲಿಗಢದಲ್ಲಿರುವ ಮುಸ್ಲಿಂ ಪರ್ಸನಲ್ ದಾರುಲ್ ಇಫ್ತಾ ಎಂಬ ಧಾರ್ಮಿಕ ಸಂಸ್ಥೆಯು ಬಾಲಿವುಡ್ ನಟಿ ಮತ್ತು ನೃತ್ಯಗಾರ್ತಿ ನೋರಾ ಫತೇಹಿ ವಿರುದ್ಧ ಫತ್ವಾ ಹೊರಡಿಸಿದೆ. ಕನ್ನಡ ಚಿತ್ರ 'ಕೆಡಿ: ದಿ ಡೆವಿಲ್' ಚಿತ್ರದ 'ಸರ್ಕೆ ಚುನರ್ ತೇರಿ' ಹಾಡಿನಲ್ಲಿನ ಅವರ ಅಶ್ಲೀಲ ನೃತ್ಯ ಪ್ರದರ್ಶನಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆಯಂತೆ. ಹಾಡಿನಲ್ಲಿರುವ ನೃತ್ಯದ ಭಂಗಿಗಳು ಮತ್ತು ಸಾಹಿತ್ಯವು 'ಅಶ್ಲೀಲ'ವಾಗಿದ್ದು, ಇಸ್ಲಾಮಿಕ್ ಬೋಧನೆಗಳು ಮತ್ತು ನೈತಿಕ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಧಾರ್ಮಿಕ ಸಂಸ್ಥೆ ಹೇಳಿದೆ. ಇದು ಸಮಾಜದ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ ಎಂದು ಮೌಲಾನಾ ಚೌಧರಿ ಇಫ್ರಾಹೀಮ್ ಹುಸೇನ್ ತಿಳಿಸಿದ್ದಾರೆ.

ಹಾಡು 'ಪ್ರಚೋದನಾತ್ಮಕ ಮತ್ತು ಅಶ್ಲೀಲ' ದೃಶ್ಯಗಳ ಬಗ್ಗೆ ಸಮಸ್ಯೆ ಇದೆ ಎಂದು ಮುಖ್ಯ ಮುಫ್ತಿ ಮೌಲಾನಾ ಇಬ್ರಾಹಿಂ ಹುಸೇನ್ ಅವರು ಫತ್ವಾ ಹೊರಡಿಸಿದ್ದಾರೆ. ಅಂತಹ ವಿಷಯವು ಹರಾಮ್ ಮತ್ತು ಗುನಾಹ್-ಎ-ಕಬೀರಾ ಎಂದಿದ್ದು ಅಂತಹ ವಿಷಯಗಳಲ್ಲಿ ಭಾಗವಹಿಸುವುದು ಅಥವಾ ಪ್ರಚಾರ ಮಾಡುವುದು ಧಾರ್ಮಿಕ ತತ್ವಗಳಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ. ಫತ್ವಾ ಎನ್ನುವುದು ಇಸ್ಲಾಂನಲ್ಲಿ ಮುಫ್ತಿ ಎಂದು ಕರೆಯಲ್ಪಡುವ ಧಾರ್ಮಿಕ ಕಾನೂನು ತಜ್ಞರು ನಿರ್ದಿಷ್ಟ ವಿಷಯದ ಕುರಿತು ನೀಡುವ ಅಭಿಪ್ರಾಯವಾಗಿದೆ. ಇದಕ್ಕೆ ಕಾನೂನಿನ ಮಾನ್ಯತೆ ಇರುವುದಿಲ್ಲ.

ಈ ಹಾಡಿನ ವಿರುದ್ಧ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಲೋಕಸಭೆಯಲ್ಲಿ ಈ ಹಾಡನ್ನು ಬ್ಯಾನ್ ಮಾಡಲಾಗಿದೆ ಎಂದು ಲೋಕಸಭೆ ಅಧಿವೇಶನದಲ್ಲಿ ತಿಳಿಸಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯವು ಸಾಂಸ್ಕೃತಿಕ ಮೌಲ್ಯಗಳಿಗೆ ಬದ್ಧವಾಗಿರಬೇಕು ಎಂದು ಅವರು ಹೇಳಿದ್ದಾರೆ. ಹಾಡಿನಲ್ಲಿ ಮಹಿಳೆಯರನ್ನು ಅಶ್ಲೀಲವಾಗಿ ಬಿಂಬಿಸಲಾಗಿದೆ ಎಂಬ ದೂರಿನ ಮೇರೆಗೆ ರಾಷ್ಟ್ರೀಯ ಮಹಿಳಾ ಆಯೋಗವು ನೋರಾ ಫತೇಹಿ, ಸಂಜಯ್ ದತ್ ಮತ್ತು ಗೀತರಚನೆಕಾರ ರಕೀಬ್ ಆಲಂ ಅವರಿಗೆ ಸಮನ್ಸ್ ನೀಡಿದೆ. ಈ ವಿವಾದದ ಕುರಿತು ಇನ್ಸ್ಟಾಗ್ರಾಮ್‌ನಲ್ಲಿ ವಿಡಿಯೋ ಹಂಚಿಕೊಂಡಿರುವ ನೋರಾ ಫತೇಹಿ, 'ನಾನು ಈ ಹಾಡನ್ನು ಮೂರು ವರ್ಷಗಳ ಹಿಂದೆ ಕನ್ನಡದಲ್ಲಿ ಚಿತ್ರೀಕರಿಸಿದ್ದೆ. ಆ ಸಮಯದಲ್ಲಿ ಚಿತ್ರತಂಡ ನೀಡಿದ ವಿವರಣೆಯನ್ನು ನಂಬಿದ್ದೆ. ನನಗೆ ಕನ್ನಡ ಭಾಷೆ ತಿಳಿಯದ ಕಾರಣ ಅದರ ಅರ್ಥ ಗೊತ್ತಿರಲಿಲ್ಲ ಎಂದಿದ್ದಾರೆ.



# ಗದ್ದಲ ಸೃಷ್ಟಿ ರಶ್ಮಿಕಾ ಬೌನ್ಸರ್ ಕಿರಿಕ್

ರಾಜಮೌಳಿ ತಂದೆಗೆ ಅವಮಾನ

ನಟಿ ರಶ್ಮಿಕಾ ಮಂದಣ್ಣ ಅವರ ವೈಯಕ್ತಿಕ ಬೌನ್ಸರ್ ಒಬ್ಬರು ತೆಲಂಗಾಣದ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷ ದಿಲ್ ರಾಜು ಅವರ ಆಪ್ತ ಸಹಾಯಕರೊಂದಿಗೆ ಜಗಳ ಮಾಡಿದ್ದಾರೆಂದು ವರದಿಯಾಗಿದೆ. ಕಾರ್ಯಕ್ರಮದಲ್ಲಿ ರಶ್ಮಿಕಾ ಮತ್ತು ದಿಲ್ ರಾಜು ಅಕ್ಕ-ಪಕ್ಕ ಕೂತಿದ್ದರು. ಆದರೆ ದಿಲ್ ರಾಜು ಅವರ ಆಪ್ತರನ್ನು ಅಭಿಮಾನಿಯೆಂದು ತಪ್ಪಾಗಿ ಭಾವಿಸಿ ರಶ್ಮಿಕಾರ ಬೌನ್ಸರ್ ಕಿರಿಕ್ ಮಾಡಿದ್ದಾರೆ ಎನ್ನಲಾಗಿದ್ದು, ಬೌನ್ಸರ್ ಹೊಸದಾಗಿ ಕೆಲಸಕ್ಕೆ ಸೇರಿದ್ದರಿಂದ ಅಲ್ಲಿನ ಗಣ್ಯರ ಬಗ್ಗೆ ಅವರಿಗೆ ಅಷ್ಟಾಗಿ ತಿಳಿದಿರಲಿಲ್ಲ ಎನ್ನಲಾಗಿದೆ. ಮಾಧ್ಯಮದವರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸುವವರೆಗೂ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಖ್ಯಾತ ಚಿತ್ರಕಥೆಗಾರರೂ ಆಗಿರುವ ಹಾಗೂ ರಾಜಮೌಳಿ ಅವರ ತಂದೆಯೂ ಆಗಿರುವ ಸಂಸದ ವಿಜಯೇಂದ್ರ ಪ್ರಸಾದ್ ಅವರು ಸಹ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಆದರೆ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯ ಎಡವಟ್ಟಿನಿಂದಾಗಿ ಸಮಾರಂಭದಿಂದ ಅರ್ಧಕ್ಕೇ ಹೊರನಡೆದರು. ಕಾರ್ಯಕ್ರಮದ ಜವಾಬ್ದಾರಿ ಹೊತ್ತಿದ್ದ ಮುಂಬೈ ಮೂಲದ ಕಂಪನಿಗೆ ದಕ್ಷಿಣ ಭಾರತದ ಸೆಲೆಬ್ರಿಟಿಗಳ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಅವರು ವಿಜಯೇಂದ್ರ ಪ್ರಸಾದ್ ಅವರನ್ನು ನಟ ಆರ್ ನಾರಾಯಣ ಮೂರ್ತಿ ಎಂದು ತಪ್ಪಾಗಿ ಭಾವಿಸಿ, ಅದೇ ಹೆಸರಿನಿಂದ ಕರೆದರು. ಇದರಿಂದ ಬೇಸರಗೊಂಡ ವಿಜಯೇಂದ್ರ ಪ್ರಸಾದ್ ಅವರು ವೇದಿಕೆಯಿಂದ ಕೋಪದಿಂದಲೇ ನಿರ್ಗಮಿಸಿದರು ಎನ್ನಲಾಗಿದೆ.

'ಎನ್.ಟಿ.ಆರ್ ಜೀವಮಾನ ಸಾಧನೆ'ಯನ್ನು ಮೆಗಾಸ್ಟಾರ್ ಚಿರಂಜೀವಿ ಅವರಿಗೆ ನೀಡಲಾಯ್ತು. ಪ್ರಶಸ್ತಿ ಸ್ವೀಕರಿಸಿದ ಚಿರಂಜೀವಿ ಅವರು, ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ತೆಲಂಗಾಣ ಸರ್ಕಾರವನ್ನು ಶ್ಲಾಘಿಸಿದರು. ಚಲನಚಿತ್ರ ರಂಗಕ್ಕೆ ಸರ್ಕಾರ ನೀಡುತ್ತಿರುವ ಸಹಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಕಲಾವಿದರನ್ನು ಪ್ರೋತ್ಸಾಹಿಸುವ ವಿಷಯದಲ್ಲಿ ಆಂಧ್ರಪ್ರದೇಶ ಸರ್ಕಾರವು ತೆಲಂಗಾಣವನ್ನು ನೋಡಿ ಕಲಿಯಬೇಕು ಎಂದು ಸಹ ಅಭಿಪ್ರಾಯಪಟ್ಟರು.

ಕಳೆದ ಮೂರು ವರ್ಷಗಳಲ್ಲಿ ಹ್ಯಾಟ್ರಿಕ್ ಐಸಿಸಿ ಟ್ರೋಫಿ ಗೆದ್ದಿರುವ ಟೀಂ ಇಂಡಿಯಾ ಇದೀಗ ಸತತ 4ನೇ ಐಸಿಸಿ ಪ್ರಶಸ್ತಿ ಗೆಲುವಿನತ್ತ ಮಹತ್ವದ ಹೆಜ್ಜೆ ಇಟ್ಟಿದೆ. 2024 ರಲ್ಲಿ ಟಿ20 ವಿಶ್ವಕಪ್ ಎತ್ತಿಹಿಡಿದಿದ್ದ ಭಾರತ, ಆ ಬಳಿಕ 2025 ರಲ್ಲಿ ಚಾಂಪಿಯನ್ಸ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತ್ತು. ಇದೀಗ 2026 ರಲ್ಲಿ ಸತತ ಎರಡನೇ ಬಾರಿಗೆ ಟಿ20 ವಿಶ್ವಕಪ್ ಎತ್ತಿಹಿಡಿದಿದೆ. ಇನ್ನು ಮುಂದಿನ ವರ್ಷ ಅಂದರೆ 2027 ರಲ್ಲಿ ಏಕದಿನ ವಿಶ್ವಕಪ್ ನಡೆಯಲಿದ್ದು, ಆ ಟ್ರೋಫಿಯನ್ನು ಬಾಚಿಕೊಳ್ಳಲು ಬಿಸಿಸಿಐ ಈಗಿನಿಂದಲೇ ತಯಾರಿ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ವಿಶ್ವಕಪ್ ನಡೆಯಲು



# ವಿಶ್ವಕಪ್‌ಗೆ 20 ಆಟಗಾರರ ಪಟ್ಟಿ ಸಿದ್ಧ

ಇನ್ನು ಒಂದು ವರ್ಷ ಇರುವಾಗಲೇ ಈ ಪಂದ್ಯಾವಳಿಗೆ ಬಿಸಿಸಿಐ, 20 ಆಟಗಾರರ ಪಟ್ಟಿಯನನ್ನು ಸಿದ್ಧಪಡಿಸಿದೆ ಎಂದು ವರದಿಯಾಗಿದೆ.

ಏಕದಿನ ವಿಶ್ವಕಪ್ 2027 ರ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾದ ಆತಿಥ್ಯದಲ್ಲಿ ನಡೆಯಲಿದೆ.

ಹೀಗಾಗಿ 2023 ರ ಏಕದಿನ ವಿಶ್ವಕಪ್‌ನ ಫೈನಲ್‌ನಲ್ಲಿ ಸೋತು ಟ್ರೋಫಿಯಿಂದ ವಂಚಿತವಾಗಿದ್ದ ಟೀಂ ಇಂಡಿಯಾ ಈ ಬಾರಿ ಶತಾಯಗತಾಯ ಏಕದಿನ ವಿಶ್ವಕಪ್ ಗೆಲ್ಲುವ ಇರಾದೆಯಲ್ಲಿದೆ. ಹೀಗಾಗಿ ಈ ವರ್ಷ ಉಳಿದೆರಡು ಮಾದರಿಗಳಿಗಿಂತ ಏಕದಿನ ಮಾದರಿಯ ಮೇಲೆ ಬಿಸಿಸಿಐ ಹೆಚ್ಚು ಒತ್ತು ನೀಡುತ್ತಿದೆ. ಇದಕ್ಕೆ ಪೂರಕವಾಗಿ ಏಕದಿನ ಸರಣಿಗಳ ಸಂಖ್ಯೆಯನ್ನು ಹೆಚ್ಚು ಮಾಡಲು ಪ್ಲಾನ್ ರೂಪಿಸಿದೆ.

ಆಯ್ಕೆ ಮಂಡಳಿಗೆ ಮಹತ್ವದ ಜವಾಬ್ದಾರಿ

**20 ಆಟಗಾರರ ಅಂತಿಮ ಪಟ್ಟಿ:** ಇದೆಲ್ಲದರ ನಡುವೆ ಬಿಸಿಸಿಐ, ಮುಂಬರುವ ಏಕದಿನ ವಿಶ್ವಕಪ್‌ಗೆ 20 ಆಟಗಾರರ ತಂಡವನ್ನು ಅಂತಿಮಗೊಳಿಸಿದೆ ಎಂದು ವರದಿಯಾಗಿದೆ. ಟೀಂ ಇಂಡಿಯಾದ ಆಯ್ಕೆ ಮಂಡಳಿ ಈಗಾಗಲೇ ಅಳೆದು ತೂಗಿ ಏಕದಿನ ವಿಶ್ವಕಪ್‌ಗೆ ತಂಡವನ್ನು ಸಿದ್ಧಪಡಿಸಿದ್ದಾರೆ ಎಂದು ವರದಿಯಾಗಿದೆ. ಇದರರ್ಥ, ಆಯ್ಕೆದಾರರು ಈಗಾಗಲೇ ಆಯ್ಕೆ ಮಾಡಿರುವ 20 ಆಟಗಾರರ ಮೇಲೆ ಮಾತ್ರ ಕಣ್ಣಿಡಲಿದ್ದಾರೆ. ಈ 20 ಆಟಗಾರರು ಆಡುವ ಐಪಿಎಲ್ ಆಗಲಿ, ಟಿ20 ಆಗಲಿ ಅಥವಾ ಟೆಸ್ಟ್ ಹಾಗೂ ಏಕದಿನ ಪಂದ್ಯಗಳಾಗಲಿ ಅವುಗಳು ನಡೆಯುವ ಸಮಯದಲ್ಲಿ ಆಯ್ಕೆ ಮಂಡಳಿಯ ಸದಸ್ಯರು ಅಲ್ಲಿ ಹಾಜರಿದ್ದು, ಆ ಆಟಗಾರರ ಪ್ರದರ್ಶನವನ್ನು ಸೂಕ್ಷ್ಮವಾಗಿ ಗಮನಿಸಲಿದ್ದಾರೆ. ಇದಕ್ಕೆ ಪೂರಕವೆಂಬಂತೆ ಕೆಲವೇ ದಿನಗಳಲ್ಲಿ ಐಪಿಎಲ್ ಆರಂಭವಾಗಲಿದ್ದು, ಈ ಲೀಗ್ ನಡೆಯುವ ಸಮಯದಲ್ಲಿ ಅಜಿತ್ ಅಗರ್ಕರ್ ನೇತೃತ್ವದ ಟೀಂ ಇಂಡಿಯಾ ಆಯ್ಕೆ ಮಂಡಳಿಯ ಸದಸ್ಯರಾದ ಎಸ್‌ಎಸ್ ದಾಸ್, ಆರ್ ಪಿ ಸಿಂಗ್, ಅಜಯ್ ರಾತ್ರ ಮತ್ತು ಪ್ರಗ್ಯಾನ್ ಓಜಾ ಈ 20 ಆಟಗಾರರನ್ನು ಮೇಲ್ವಿಚಾರಣೆ ಮಾಡಲಿದ್ದಾರೆ. ಈ 20 ಆಟಗಾರರ ಪಂದ್ಯಗಳ ಸಮಯದಲ್ಲಿ ಈ ಆಯ್ಕೆದಾರರು ಕ್ರೀಡಾಂಗಣದಲ್ಲಿ ಹಾಜರಿರಲಿದ್ದಾರೆ. ಕ್ರೀಡಾಂಗಣದಲ್ಲಿ ಮತ್ತು ಟಿವಿಯಲ್ಲಿ ಪಂದ್ಯಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಇವರಿಗೆ ವಹಿಸಲಾಗಿದೆ. ವರದಿಯ ಪ್ರಕಾರ, ಟೀಂ ಇಂಡಿಯಾದ ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್ ಮುಂಬೈನಲ್ಲಿ ನಡೆಯುವ ಪಂದ್ಯಗಳ ಮೇಲೆ ಕಣ್ಣಿಟ್ಟರೆ, ಶಿವಸುಂದರ್ ದಾಸ್ ಕೋಲ್ಕತ್ತಾ, ಆರ್.ಪಿ. ಸಿಂಗ್ ಮತ್ತು ಅಜಯ್ ರಾತ್ರ ದೆಹಲಿಯಲ್ಲಿ ನಡೆಯುವ ಪಂದ್ಯಗಳನ್ನು ವೀಕ್ಷಿಸಲಿದ್ದಾರೆ.

# ಸ್ಟಾರ್ ಆಟಗಾರರು ಐಪಿಎಲ್‌ನಿಂದ ಔಟ್

ಐಪಿಎಲ್ ಸೀಸನ್ 2026 ಇನ್ನೂ ಆರಂಭವಾಗಿಲ್ಲ. ಆದಾಗ್ಯೂ ಹಲವು ತಂಡಗಳಿಗೆ ದೊಡ್ಡ ಆಘಾತ ಎದುರಾಗಿದೆ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತಮ್ಮ ಸ್ಟಾರ್ ವೇಗದ ಬೌಲರ್ ಜೋಶ್ ಹೇಜಲ್‌ವುಡ್ ಇಲ್ಲದೆ ಈ ಆವೃತ್ತಿಯನ್ನು ಆರಂಭಿಸಲಿದ್ದು, ಸನ್ ರೈಸರ್ಸ್ ಹೈದರಾಬಾದ್ ತಂಡವು ತಮ್ಮ ನಾಯಕ ಪ್ಯಾಟ್ ಕಮ್ಮಿನ್ಸ್ ಇಲ್ಲದೆ ಈ ಪಂದ್ಯಾವಳಿಯ ಮೊದಲ ಕೆಲವು ಪಂದ್ಯಗಳನ್ನು ಆಡಲಿದೆ. ಈ ಇಬ್ಬರು ಅನುಭವಿ ಆಟಗಾರರು ತಂಡಕ್ಕೆ ಮರಳುವ ಸಾಧ್ಯತೆ ಇದ್ದರೂ, ಇತರ ಕೆಲವು ತಂಡಗಳ ಪರಿಸ್ಥಿತಿ ಗಂಭೀರವಾಗಿದೆ. ಏಕೆಂದರೆ ಆ ತಂಡಗಳ ಆಟಗಾರರು ಇಡೀ ಸೀಸನ್‌ನಿಂದಲೇ ಹೊರಬಿದಿದ್ದಾರೆ. ವಾಸ್ತವವಾಗಿ, ಒಂದೇ ದಿನದಲ್ಲಿ ಮೂವರು ಆಟಗಾರರು ಐಪಿಎಲ್‌ನಿಂದ ಹೊರಬಿದಿದ್ದಾರೆ.

**ಸಿಎಸ್‌ಕೆ ವೇಗಿಗೆ ಇಂಜುರಿ:** ಮಾರ್ಚ್ 28 ರಂದು 19 ನೇ ಐಪಿಎಲ್ ಸೀಸನ್ ಆರಂಭವಾಗುವುದಕ್ಕೆ ಕೇವಲ ಒಂಬತ್ತು ದಿನಗಳ ಮೊದಲು , ಚೆನ್ನೈ ಸೂಪರ್ ಕಿಂಗ್ಸ್, ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳಿಗೆ ಬಿಗ್ ಶಾಕ್ ಎದುರಾಗಿದೆ. ಮೊದಲನೆಯದಾಗಿ ಚೆನ್ನೈ ಸೂಪರ್ ಕಿಂಗ್ಸ್ ವೇಗಿ ನಾಥನ್ ಎಲಿಸ್ ಪಂದ್ಯಾವಳಿಯಿಂದ ಹೊರಗುಳಿದಿದ್ದಾರೆ. ಫ್ರಾಂಚೈಸಿ ಇದನ್ನು ಅಧಿಕೃತವಾಗಿ ಘೋಷಿಸದಿದ್ದರೂ, ಸಿಎಸ್‌ಕೆ ಸಿಇಒ ಕಾಸಿ ವಿಶ್ವನಾಥನ್ ಈ ಸುದ್ದಿಯನ್ನು ಖಚಿತಪಡಿಸಿದ್ದಾರೆ.

**ರಾಜಸ್ಥಾನ್ ತಂಡಕ್ಕೂ ಆಘಾತ:** ಇಎಸ್‌ಪಿಎನ್-ಕ್ರಿಕ್‌ಇನ್ಫೋ ವರದಿಯ ಪ್ರಕಾರ, ಇಂಗ್ಲೆಂಡ್‌ನ ಸ್ಟಾರ್ ಆಲ್‌ರೌಂಡರ್ ಸ್ಯಾಮ್ ಕರನ್ ಕೂಡ ಗಾಯದಿಂದಾಗಿ ಈ ಆವೃತ್ತಿಯಲ್ಲಿ ಆಡಲು ಸಾಧ್ಯವಿಲ್ಲ ಎಂದು ವರದಿಯಾಗಿದೆ. ಕರನ್ ತೊಡೆಸಂದು ಗಾಯದಿಂದ ಬಳಲುತ್ತಿದ್ದು, ಅವರು ಸಕಾಲದಲ್ಲಿ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಸೀಸನ್ ಆರಂಭಕ್ಕೂ ಮುನ್ನ ಸಿಎಸ್‌ಕೆಯಿಂದ ಕರನ್ ಅವರನ್ನು 2.4 ಕೋಟಿಗೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಟ್ರೇಡ್ ವಿಂಡ್ ಮೂಲಕ ಖರೀದಿಸಲಾಯಿತು. ಆದಾಗ್ಯೂ, ಅವರು ತಮ್ಮ ಹೊಸ ಫ್ರಾಂಚೈಸಿಗಾಗಿ ಮೈದಾನಕ್ಕಿಳಿಯಲು ಸಾಧ್ಯವಾಗುವುದಿಲ್ಲ.



ಆರ್‌ಸಿಬಿ ತಂಡಕ್ಕೆ ಭಾರೀ ಆಘಾತ

**ಕೆಕೆಆರ್ ತಂಡಕ್ಕೆ ಮತ್ತೊಂದು ಕೆಟ್ಟ ಸುದ್ದಿ:** ಈಗಾಗಲೇ ವೇಗದ ಬೌಲರ್‌ಗಳ ಕೊರತೆಯಿಂದ ಬಳಲುತ್ತಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಕೂಡ ದೊಡ್ಡ ಹಿನ್ನಡೆ ಅನುಭವಿಸಿದೆ. ಶ್ರೀಲಂಕಾದ ಮಾಧ್ಯಮ ವರದಿಗಳ ಪ್ರಕಾರ, ಕೆಕೆಆರ್ 18 ಕೋಟಿಗೆ ರೂಗೆ ಖರೀದಿಸಿರುವ ವೇಗಿ ಮಥಿಶಾ ಪತಿರಾನಗೆ ಶ್ರೀಲಂಕಾ ಕ್ರಿಕೆಟ್ ಎನ್‌ಒಸಿ ನೀಡಿಲ್ಲ ಎಂದು ವರದಿಯಾಗಿದೆ. ಪತಿರಾನ ತಮ್ಮ ಫಿಟ್ನೆಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಕಾರಣ ಮಂಡಳಿ ಎನ್‌ಒಸಿ ನೀಡಿಲ್ಲ. ಪರಿಣಾಮವಾಗಿ, ಅವರು ಈಗ ಪಂದ್ಯಾವಳಿಯಲ್ಲಿ ಭಾಗವಹಿಸುವುದು ಅಸಂಭವವಾಗಿದೆ.

**ಸಿಎಸ್‌ಕೆ ಪರ ಆಡಿದ್ದರು:** ಈ ಮೂವರು ಆಟಗಾರರಿಗೆ ಸಂಬಂಧಿಸಿದ ಒಂದು ಕುತೂಹಲಕಾರಿ ಕಾಕತಾಳೀಯವೆಂದರೆ, ಈ ಮೂವರೂ ಕಳೆದ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಆಡಿದ್ದರು. ಈ ವರ್ಷ ಸ್ಯಾಮ್ ಕರನ್ ಅವರನ್ನು ಸಿಎಸ್‌ಕೆ ರಾಜಸ್ಥಾನಕ್ಕೆ ವಿನಿಮಯ ಮಾಡಿಕೊಂಡರೆ, ಪತಿರಾನ ಅವರನ್ನು ಕೆಕೆಆರ್ ಖರೀದಿ ಮಾಡಿತ್ತು. ಈ ಪೈಕಿ, ಪ್ರಸ್ತುತ ಚೆನ್ನೈ ತಂಡದಲ್ಲಿ ಉಳಿದಿರುವ ಏಕೈಕ ಆಟಗಾರ ಎಲಿಸ್.


# ವೃತ್ತಿಜೀವನಕ್ಕಾಗಿ ಮಹಾ ತ್ಯಾಗ ಮಾಡಿದ ಚಾಹಲ್

ಯುಜ್ವೇಂದ್ರ ಚಾಹಲ್ ಕೆಲವು ವರ್ಷಗಳ ಹಿಂದೆ ಟೀಂ ಇಂಡಿಯಾದ ಪ್ರಮುಖ ಸ್ಪಿನ್ ಅಸ್ತ್ರವಾಗಿದ್ದವರು. ಆದರೆ ಕಳಪೆ ಫಾರ್ಮ್‌ಗೆ ಸಿಲುಕಿದ ಚಾಹಲ್‌ಗೆ ಆ ಬಳಿಕ ಮತ್ತೊಂದು ಅವಕಾಶವೆನ್ನುವುದು ಸಿಗಲೇ ಇಲ್ಲ. ಪ್ರಸ್ತುತ ಐಪಿಎಲ್‌ನಲ್ಲಿ ಮಾತ್ರ ಆಡುತ್ತಿರುವ ಚಾಹಲ್, ಇದೀಗ ಆ ವೃತ್ತಿಜೀವನವನ್ನಾದರೂ ಉಳಿಸಿಕೊಳ್ಳುವ ಸಲುವಾಗಿ ಮಹಾತ್ಯಾಗವೊಂದನ್ನು ಮಾಡಿದ್ದಾರೆ. ವೃತ್ತಿಜೀವನದಂತೆ ಯುಜ್ವೇಂದ್ರ ಚಾಹಲ್ ಅವರ ವೈಯಕ್ತಿಕ ಜೀವನವೂ ಹಳಿತಪ್ಪಿದೆ. ಹೀಗಾಗಿ ಮದ್ಯಪಾನದ ಹಿಂದೆ ಬಿದ್ದಿದ್ದ ಚಾಹಲ್ ಇದೀಗ ಅದಕ್ಕೆಲ್ಲ ಗುಡ್ ಬೈ ಹೇಳಿದ್ದಾರೆ. ಪ್ರಸ್ತುತ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದ ಪರ ಆಡುತ್ತಿರುವ ಚಾಹಲ್, ಐಪಿಎಲ್ ಆರಂಭಕ್ಕೂ ಮುನ್ನ ಈ ವಿಚಾರವನ್ನು ಬಹಿರಂಗಪಡಿಸಿದ್ದಾರೆ.

ಈ ಹಿಂದೆ ಐಪಿಎಲ್‌ನಲ್ಲಿ ಎಬಿ ಡಿವಿಲಿಯರ್ಸ್ ಹಾಗೂ ಯುಜ್ವೇಂದ್ರ ಚಾಹಲ್ ಆರ್‌ಸಿಬಿ ತಂಡದ ಪರ ಆಡಿದ್ದರು. ಇದೀಗ ಡಿವಿಲಿಯರ್ಸ್ ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ಮಾತನಾಡಿರುವ ಚಾಹಲ್ ನಾನು ಮದ್ಯಪಾನ ತ್ಯಜಿಸಿ 6 ತಿಂಗಳಿಗೂ ಹೆಚ್ಚು ಸಮಯವಾಗಿದೆ ಎಂದಿದ್ದಾರೆ. ಮದ್ಯಪಾನವನ್ನು ತ್ಯಜಿಸಿದ್ದು ಏಕೆ ಎಂತಲೂ ಚಾಹಲ್ ಬಹಿರಂಗಪಡಿಸಿದ್ದಾರೆ.

ಈ ವರ್ಷದ ಆರಂಭದಿಂದ ನಾನು ನನ್ನ ದೇಹದ ಬಗ್ಗೆ ಹೆಚ್ಚು ಗಮನ ಹರಿಸಲು ನಿರ್ಧರಿಸಿದ್ದೇನೆ. ನನಗೀಗ 35 ವರ್ಷ. ಹೀಗಾಗಿ ನಾನು ಹೆಚ್ಚು ಸಕ್ರಿಯವಾಗಿರಲು ಬಯಸುತ್ತೇನೆ ಮತ್ತು ತಂಡಕ್ಕಾಗಿ ನಾನು ಶೇಕಡಾ 150 ರಷ್ಟು ನೀಡಲು ಬಯಸುತ್ತೇನೆ. ಹಿರಿಯ ಆಟಗಾರನಾಗಿ, ಇತರರು ನನ್ನಿಂದ ಏನನ್ನಾದರೂ ಕಲಿಯಬಹುದು ಎಂಬ ಭಾವನೆ ಮೂಡಿಸಲು ನಾನು ಬಯಸುತ್ತೇನೆ ಎಂದಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿರುವ ಚಾಹಲ್, ಕಳೆದ ಬಾರಿ ಫೈನಲ್‌ನಲ್ಲಿ ಸೋತ ಬಗ್ಗೆಯೂ ಮಾತನಾಡಿದರು. ಮಾರ್ಕೊ ಯಾನ್ಸೆನ್ ಫೈನಲ್‌ನಲ್ಲಿ ಆಡಲು ಸಾಧ್ಯವಾಗಲಿಲ್ಲ. ಒಂದು ವೇಳೆ ಯಾನ್ಸೆನ್ ಫೈನಲ್ ಆಡಿದ್ದರೆ, ನಮ್ಮ ತಂಡ ಗೆಲ್ಲುತ್ತಿತ್ತು ಎಂದು ಚಾಹಲ್ ಹೇಳಿದ್ದಾರೆ.





# ಯುವರಾಜ್ ಗರಡಿಯಲ್ಲಿ ಪಳಗಿದವರ ಅಬ್ಬರ

ಯುವರಾಜ್ ಸಿಂಗ್ ಗರಡಿಯಲ್ಲಿ ಪಳಗಿ ಐಪಿಎಲ್ ಮ್ಯಾಚಲ್ಲಿ ಹಾಗೂ ಟೀಂ ಇಂಡಿಯಾದಲ್ಲಿ ಅಬ್ಬರಿಸುತ್ತಿರುವ ಅಭಿಷೇಕ್ ಶರ್ಮಾ ಎಸ್‌ಆರ್‌ಹೆಚ್ ತಂಡದ ಉಪನಾಯಕತ್ವದ ಜವಾಬ್ದಾರಿ ಹೊತ್ತಿದ್ದಾರೆ. ಯುವರಾಜ್ ತರಬೇತಿಯಲ್ಲಿ ಅಭಿಷೇಕ್ ಅವರ ಆಟದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂತು. ಇದಕ್ಕೆ ಪೂರಕವಾಗಿ ಕಳೆದ ಎರಡು ಐಪಿಎಲ್ ಆವೃತ್ತಿಗಳಲ್ಲಿ ಅಭಿಷೇಕ್ ಐಪಿಎಲ್‌ನಲ್ಲಿ ರನ್‌ಗಳ ಮಳೆಗರೆದಿದ್ದಾರೆ.

ಟೀಂ ಇಂಡಿಯಾದ ಏಕದಿನ ಮತ್ತು ಟೆಸ್ಟ್ ನಾಯಕ ಶುಭ್‌ಮನ್ ಗಿಲ್ ಕೂಡ ಯುವರಾಜ್ ಸಿಂಗ್ ಅವರ ಶಿಷ್ಯರಾಗಿದ್ದು, ಅವರ ಮಾರ್ಗದರ್ಶನದಲ್ಲಿ ತಮ್ಮ ಬ್ಯಾಟಿಂಗ್ ಸುಧಾರಿಸಿಕೊಳ್ಳಲು ಸಾಕಷ್ಟು ಸಮಯ ಕಳೆದಿದ್ದಾರೆ. ಗುಜರಾತ್ ಟೈಟನ್ಸ್ ತಂಡದ ನಾಯಕನಾಗಿರುವ ಗಿಲ್‌ಗೆ ಈ ಆವೃತ್ತಿ ನಿರ್ಣಾಯಕವಾಗಿದೆ. ಏಕೆಂದರೆ ಅವರು ಭಾರತ ಟಿ20 ತಂಡದಲ್ಲಿ ಸ್ಥಾನ ಪಡೆಯಬೇಕೆಂದರೆ ಐಪಿಎಲ್‌ನಲ್ಲಿ ಅಬ್ಬರಿಸಬೇಕಿದೆ.

ಯುವರಾಜ್ ಶಿಷ್ಯರ ಪಟ್ಟಿಯಲ್ಲಿ ಸಂಜು ಸ್ಯಾಮ್ಸನ್ ಹೆಸರು ಕೇಳಿದವರಿಗೆ ಆಶ್ಚರ್ಯವಾಗಬಹುದು. ಏಕೆಂದರೆ ಸಂಜು ಸ್ಯಾಮ್ಸನ್ ಪಂಜಾಬ್ ಕ್ರಿಕೆಟ್‌ನೊಂದಿಗೆ ಸಂಬಂಧ ಹೊಂದಿಲ್ಲ ಅಥವಾ ಯುವರಾಜ್ ಸಿಂಗ್ ಯಾವುದೇ ಐಪಿಎಲ್ ತಂಡದಲ್ಲಿ ಸ್ಯಾಮ್ಸನ್ ಜೊತೆ ಆಡಿಲ್ಲ. ಆದಾಗ್ಯೂ, ಇತ್ತೀಚೆಗೆ ಟಿ20 ವಿಶ್ವಕಪ್‌ನಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ ಸ್ಯಾಮ್ಸನ್, ವಿಶ್ವಕಪ್ ಪ್ರಾರಂಭವಾಗುವ ಮೊದಲು, ಯುವರಾಜ್ ಮತ್ತು ರಾಬಿನ್ ಉತ್ತಪ್ಪ ನನಗೆ ಕರೆ ಮಾಡಿ ಸಹಾಯ ಮಾಡಿದ್ದರು ಎಂದು ಸ್ಯಾಮ್ಸನ್ ಹೇಳಿದ್ದರು.

ಯುವರಾಜ್ ಸಿಂಗ್ ನಿವೃತ್ತಿ ಘೋಷಿಸಿದಾಗ, ರಿಷಭ್ ಪಂತ್ ಟೀಂ ಇಂಡಿಯಾದಲ್ಲಿ ತಮ್ಮ ಸ್ಥಾನವನ್ನು ತುಂಬಬಹುದು ಎಂದಿದ್ದರು. ಆದಾಗ್ಯೂ, ಪಂತ್ ಏಕದಿನ ಮತ್ತು ಟಿ20ಮಾದರಿಯಲ್ಲಿ ಅದನ್ನು ಸಾಧಿಸಲು ವಿಫಲರಾದರು. ಆದಾಗ್ಯೂ, 2026 ರ ಐಪಿಎಲ್ ಆರಂಭಕ್ಕೂ ಮೊದಲು ಪಂತ್, ಯುವರಾಜ್ ಅವರಡಿಯಲ್ಲಿ ತರಬೇತಿ ಪಡೆದಿದ್ದಾರೆ. ಅದರ ವಿಡಿಯೋಗಳನ್ನು ಪಂತ್ ಅವರೇ ಪೋಸ್ಟ್ ಮಾಡಿದ್ದಾರೆ. ಆದ್ದರಿಂದ, ಈ ಐಪಿಎಲ್‌ನಲ್ಲಿ ಪಂತ್ ಏನಾದರೂ ವಿಶೇಷ ಸಾಧನೆ ಮಾಡಿದರೆ, ಯುವರಾಜ್ ಅವರ ಮಾರ್ಗದರ್ಶನ ಕೆಲಸ ಮಾಡಿದೆ ಎನ್ನಬಹುದು.

ಅಭಿಷೇಕ್ ಮತ್ತು ಗಿಲ್ ಅವರಂತೆಯೇ, ಪಂಜಾಬ್ ಕ್ರಿಕೆಟ್ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಪ್ರಭ್‌ಸಿಮ್ರಾನ್ ಸಿಂಗ್ ಕೂಡ ಕಳೆದ ಎರಡು ಮೂರು ವರ್ಷಗಳಿಂದ ಯುವರಾಜ್ ಸಿಂಗ್ ಅವರಿಂದ ಮಾರ್ಗದರ್ಶನ ಪಡೆದಿದ್ದಾರೆ. ಕಳೆದ ಋತುವಿನಲ್ಲಿ ಪಂಜಾಬ್ ಕಿಂಗ್ಸ್ ಪರ ಪ್ರಭ್‌ಸಿಮ್ರಾನ್ ಅವರ ಅದ್ಭುತ ಪ್ರದರ್ಶನದಲ್ಲಿ ಇದು ಸ್ಪಷ್ಟವಾಗಿತ್ತು. ಪಂಜಾಬ್ ತಂಡವನ್ನು ಫೈನಲ್‌ಗೆ ಕೊಂಡೊಯ್ಯುವಲ್ಲಿ ಪ್ರಭ್‌ಸಿಮ್ರಾನ್ ಪ್ರಮುಖ ಪಾತ್ರ ವಹಿಸಿದ್ದರು. ಈಗ, ಅವರ ಮಾರ್ಗದರ್ಶಕರ ಸಹಾಯದಿಂದ, ಅವರು ಮತ್ತೊಮ್ಮೆ ಪಂಜಾಬ್ ತಂಡವನ್ನು ಪ್ರಶಸ್ತಿಗೆ ಕೊಂಡೊಯ್ಯುವ ಭರವಸೆಯಲ್ಲಿದ್ದಾರೆ. ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ಪರ ಆಡುವ ಓಪನರ್ ಪ್ರಿಯಾಂಶ್ ಆರ್ಯ, ಕಳೆದ ಐಪಿಎಲ್ ನಂತರ ಯುವರಾಜ್ ಸಿಂಗ್ ಅವರ ಅಕಾಡೆಮಿಯಲ್ಲಿ ಸ್ವಲ್ಪ ಸಮಯ ಕಳೆದಿದ್ದರು ಅಲ್ಲಿ ಅವರಿಗೆ ಪ್ರಭ್‌ಸಿಮ್ರಾನ್ ಜೊತೆಗಿದ್ದರು. ಇದಾದ ಬಳಿಕ ಪ್ರಿಯಾಂಶ್ ದೆಹಲಿ ತಂಡದ ಪರ ಕೆಲವು ಉತ್ತಮ ಇನ್ನಿಂಗ್ಸ್‌ಗಳನ್ನು ಆಡಿದ್ದರು. ಆದರೆ ಅವರ ನಿಜವಾದ ಪ್ರತಿಭೆ ಈಗ ಐಪಿಎಲ್‌ನಲ್ಲಿ ಮೂಡಿಬರಬೇಕಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966